ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 29 ಭಾನುವಾರ 2024


₹4

ಸಂಪುಟ: 45 | ಸಂಚಿಕೆ: 164 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





COMMERCIAL SPACE FOR RENT
At CHAMARAJA NAGAR
NEW COMMERCIAL PROPERTY
Available for Rent @ Agrahara Street, Opp. Chamarajeshwara Temple, Ground Floor - 800 sq.ft
First Floor - 1000 sq.ft
Suitable for Office, Bank, Shops, etc.
Call: 63661 75566

The Bengaluru Educational & Social Trust
The BEST Kidz Academy
The BEST School of Excellence
Approved by Govt. of Karnataka
Survey No. 260, Kuderu, Santhemarahalli, Chamarajanagar - 571316

Application invited for following positions

KINDERGARTEN TEACHERS
MTT or Any Graduate Degree with NTT / D.E.C.Ed. with minimum of 2 years of relevant work experience.

TEACHERS - Grade 1 to 8
Kannada, English, Hindi, Math, Science, Social, Computer
TGT / PGT in subject of specialization with B.Ed.


Art & Craft / Music / Dance
Trained Graduate / Diploma in respective fields from recognised institution

ADMINISTRATIVE STAFF
Librarian — B.Lib. from any recognised University.
Accounts Assistant — Bachelor in Commerce with Tally Certification
Drivers & Security Guards with relevant experience can also apply.

Good command over English language and Computer knowledge is a must.
Freshers with requisite qualifications can also apply.
Salary is not a constraint for deserving candidates plus PF & ESIC benefits. Accommodation will be provided for outstation staff.
Send the updated resume to **info@thebest.org.in** on or before **10th October 2024**

Site for Sale
40 x 60 North Face
40 Feet Road Near MRP,
Vijayanagar 4th Stage, Mysore.
Contact : 93433 61548 / 99800 83876

ಉದ್ಯೋಗಾವಕಾಶ
INDUSIND BANK
ಭಾರತ್ ಫೈನಾನ್ಶಿಯಲ್ ಇನ್ಕ್ಲೂಷನ್ ಲಿಮಿಟೆಡ್
ವಿದ್ಯಾರ್ಹತೆ: SSLC / PUC/ Any ಡಿಗ್ರಿ
ವಯೋಮಿತಿ 18 ರಿಂದ 32 ವರ್ಷಗಳು (ಪುರುಷ ಮತ್ತು ಮಹಿಳೆ ಅಭ್ಯರ್ಥಿಗಳು ಮಾತ್ರ)
ESI, PF, HEALTH INSURANCE ಹಾಗೂ ರೂಂ ವ್ಯವಸ್ಥೆ ಇರುತ್ತದೆ.
ಆಕರ್ಷಕ ಸಂಬಳ: 18000 ರಿಂದ 36000 ಸಾವಿರ ತನಕ ಇರುತ್ತದೆ.
ಸಂಪರ್ಕಿಸಿ:
ಹನುಮಂತರಾಜು – 7760972778
ಚರಣ್‌ಗೌಡ – 7892203095
ಸಂತೋಷ್ – 8746805960






ಡಾ. ಡಿ. ತಿಮ್ಮಯ್ಯ ಅವರ ಅರಸು ಚುಟುಕು ಸ್ಪರ್ಶಗಳು ಕೃತಿ ಬಿಡುಗಡೆ, ಸಾಧಕರಿಗೆ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ


ಡಾ.ಲತಾ ರಾಜಶೇಖರ್



ಚಂದ್ರಗುಪ್ತ ಜೈನ್



ಟಿ.ಪಿ.ರಮೇಶ್


ರಾಮನಾಥ ಗುಪ್ತ


ಕೆ.ಓಬಯ್ಯ


ಪ್ರಕಾಶ್‌ರಾಜೇ ಅರಸ್






ಮೈಸೂರು, ಸೆ.28–ಮೈಸೂರಿನ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರು ಸಂಪಾದಿಸಿರುವ 'ಅರಸು ಚುಟುಕು ಸ್ಪರ್ಶಗಳು' ಲೋಕಾರ್ಪಣೆ ಮತ್ತು ಸಾಧಕರಿಗೆ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆ. 30ರಂದು ಬೆಳಗ್ಗೆ 10.30 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಮಾಜಿ ಗೃಹ ಸಚಿವ ಪಿ.ಜಿ.ಆರ್ ಸಿಂಧ್ಯಾ ಉದ್ಘಾಟಿಸುವರು. ದೇವರಾಜ ಅರಸು ಭಾವಚಿತ್ರಕ್ಕೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಪುಷ್ಪಾರ್ಚನೆ ಮಾಡುವರು. ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಕೆ.ಚಿದಾನಂದಗೌಡ ಕೃತಿ ಲೋಕಾರ್ಪಣೆ ಮತ್ತು ಧ್ವನಿಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಮಾಡುವರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಸ್ವಚ್ಛ ಭಾರತ ರೂವಾರಿ ಹೆಚ್.ವಿ.ರಾಜೀವ್ ಪುಸ್ತಕ ತಾಂಬೂಲ ವಿತರಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಂ.ಶಿವಣ್ಣ, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎಚ್.ಎ.ವೆಂಕಟೇಶ್ ಭಾಗವಹಿಸುವರು. ಕವಯತ್ರಿ ಡಾ.ಲತಾ ರಾಜಶೇಖರ್, ಔಷಧ್ ಗ್ರೂಪ್ ಆಫ್ ಫಾರ್ಮಾ ಸಿಸ್ಟ್ ಮ್ಯಾನೇಜಿಂಗ್ ಡೈರೆಕ್ಟರ್ ಚಂದ್ರ ಗುಪ್ತ ವಿ.ಜೈನ್, ಮಡಿಕೇರಿ ಜಿಲ್ಲೆ ಅಹಿಂದ ಅಧ್ಯಕ್ಷ ಟಿ.ಪಿ. ರಮೇಶ್, ವಾಸವಿ ಪ್ರಕಾಶನದ ನಿರ್ದೇಶಕ ರಾಮನಾಥ ಗುಪ್ತ, ಪೋಸ್ಟ್ ಆಫೀಸ್ ವಿಶ್ರಾಂತ ಸೀನಿಯರ್ ಸೂಪರಿಂಟೆಂಡೆಂಟ್ ಕೆ.ಓಬಯ್ಯ, ಪ್ರಗತಿಪರ ರೈತ ಪ್ರಕಾಶ್ ರಾಜೇ ಅರಸ್ ಅವರಿಗೆ ಧ್ವನಿಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಮೈಸೂರು ಜಿಲ್ಲೆಯಲ್ಲಿ ಅ.7ರಿಂದ ಇ–ಸ್ವತ್ತು ತಂತ್ರಾಂಶದಲ್ಲಿ ಖಾತೆ ಇದ್ದರೆ ಮಾತ್ರ ಆಸ್ತಿಗಳ ನೋಂದಣಿ

ಕಂದಾಯ ಇಲಾಖೆ ಆದೇಶ



ಮೈಸೂರು, ಸೆ. 28 (ಆರ್‌ಕೆ)– ಮೈಸೂರು ಸೇರಿದಂತೆ ರಾಜ್ಯದ 18 ಜಿಲ್ಲೆಗಳಲ್ಲಿ ಅ.7ರಿಂದ ಇ–ಸ್ವತ್ತು ಹಾಗೂ ಕಾವೇರಿ–2 ತಂತ್ರಾಂಶದ ಸಂಯೋಜನೆಯಿಂದ ಮಾತ್ರ ಮಾಹಿತಿ ಪಡೆದು ಆಸ್ತಿಗಳ ಕ್ರಯ ನೋಂದಾಯಿಸಬೇಕೆಂದು ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ) ಅಧೀನ ಕಾರ್ಯದರ್ಶಿ ಎ.ಜಿ.ವೀಣಾ ಆದೇಶ ಹೊರಡಿಸಿದ್ದಾರೆ.

ಅದರನ್ವಯ ಮೈಸೂರು, ಬೆಂಗಳೂರು ಗ್ರಾಮಾಂತರ, ಉಡುಪಿ, ಕಾರವಾರ, ಮಂಗಳೂರು, ಧಾರವಾಡ, ವಿಜಯಪುರ, ವಿಜಯನಗರ, ಕೊಡಗು, ಮಂಡ್ಯ, ರಾಮನಗರ, ಯಾದಗಿರಿ, ತುಮಕೂರು, ಶಿವಮೊಗ್ಗ, ಕೋಲಾರ, ಕಲಬುರ್ಗಿ, ಗದಗ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಅ.7 ರಿಂದ ಈ ಆದೇಶ ಜಾರಿಗೆ ಬರಲಿದೆ.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ತಿಗಳ ನೋಂದಣಿಯನ್ನು ಇ–ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆಯದೇ ಬೇರೆ ಯಾವುದೇ ವಿಧಾನದಲ್ಲೂ ಸ್ಥಿರಾಸ್ತಿಗಳ ನೋಂದಣಿ ಮಾಡುವಂತಿಲ್ಲ. ಒಂದು ವೇಳೆ ಈ ಆದೇಶ ಉಲ್ಲಂಘಿಸಿದರೆ, ಸಂಬಂಧಪಟ್ಟ ಅಧಿಕಾರಿ, ನೌಕರರ ವಿರುದ್ಧ ಕಾನೂನಿನನ್ವಯ ಕ್ರಮ ಹಾಗೂ ಇಲಾಖಾ ವಿಚಾರಣೆ ಜರುಗಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೃಷಿ ಜಮೀನಿನ ನೋಂದಣಿಗೆ ಭೂಮಿ ತಂತ್ರಾಂಶದೊಂದಿಗೆ 2006 ರಿಂದಲೇ ಕಾವೇರಿ ತಂತ್ರಾಂಶವನ್ನು ಸಂಯೋಜನೆ ಮಾಡಲಾಗಿದ್ದು, ಜಮೀನಿನ ಸರ್ವೆ ಸ್ಕೆಚ್ ನಮೂನೆ–11ಇ ಇರುವ ಯೋಜನೆ ತಂತ್ರಾಂಶದೊಂದಿಗೆ ಕಾವೇರಿ ತಂತ್ರಾಂಶವನ್ನು 2016ರ ಅ.5ರಿಂದಲೇ ಸಂಯೋಜನೆ ಮಾಡಲಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೃಷಿಯೇತರ ಸ್ವತ್ತುಗಳ ದಸ್ತಾವೇಜು ನೋಂದಣಿಗಾಗಿ ಇ–ಸ್ವತ್ತು ತಂತ್ರಾಂಶವನ್ನು ಕಾವೇರಿ ತಂತ್ರಾಂಶದೊಂದಿಗೆ 2014ರ ಜುಲೈ 18ರಿಂದಲೇ ಇಂಟಿಗ್ರೇಟ್ ಮಾಡಲಾಗಿದೆ.

ಅ.1, ಅರಮನೆ ಮುಂದೆ ಕಾಫಿ ದಿನಾಚರಣೆ

15 ಸಾವಿರ ಮಂದಿಗೆ ಉಚಿತ ಕಾಫಿ ವಿತರಣೆ

ಮೈಸೂರು,ಸೆ.28(ಜಿಎ)–ಅಂತರ ರಾಷ್ಟ್ರೀಯ ಕಾಫಿ ದಿನದ ಅಂಗವಾಗಿ ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ವತಿಯಿಂದ ಅ.1ರಂದು ಬೆಳಗ್ಗೆ 10.30ಕ್ಕೆ ನಗರದ ಅರಮನೆ ಆವರಣ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗ ಕಾಫಿ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಂಘದ ಗೌರವ ಕಾರ್ಯದರ್ಶಿ ಕೆ.ಬಿ.ಲೋಹಿತ್ ಈ ವಿಷಯ ತಿಳಿಸಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸೋಮನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಸಂಘದ ಅಧ್ಯಕ್ಷ ಎ.ಎಸ್. ಪರಮೇಶ್, ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್, ಸಿಇಒ ಡಾ.ಕೆ.ಜಿ. ಜಗದೀಶ್ ಮತ್ತಿತರರು ಭಾಗವಹಿಸಲಿದ್ದಾರೆ. ಅಂದು ಸುಮಾರು 15 ಸಾವಿರ ಮಂದಿಗೆ ಉಚಿತವಾಗಿ ಪರಿಶುದ್ಧ ಕಾಫಿ ವಿತರಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಎ.ಎಸ್.ಪರಮೇಶ್, ಎಂ.ಜೆ. ಸಚಿನ್, ಕೃಷ್ಣಮೂರ್ತಿ ಖಂಡಿಗೆ, ಅರುಣ್‌ಕುಮಾರ್ ಉಪಸ್ಥಿತರಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರಾಗಿ ಆಂದೋಲನ ಸಂಪಾದಕ ರವಿ ಕೋಟಿ ನೇಮಕ

ಪರಿಶಿಷ್ಟ ಪತ್ರಕರ್ತರ ಅಧ್ಯಯನ ಸಮಿತಿ ಸದಸ್ಯರಾಗಿ ಶಿವಕುಮಾರ್

ಮೈಸೂರು,ಸೆ.28–ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರಾಗಿ ಆಂದೋಲನ ಪತ್ರಿಕೆ ಸಂಪಾದಕ ರವಿ ಕೋಟಿ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಇದೇ ವೇಳೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪತ್ರಿಕಾ ಮಾಲೀಕರ ಹಾಗೂ ಪತ್ರಕರ್ತರ ಆರ್ಥಿಕ, ಸಾಮಾಜಿಕ ಹಾಗೂ ಔದ್ಯಮಿಕ ಸ್ಥಿತಿಗತಿಯ ಅಧ್ಯಯನ ಸಮಿತಿ ಸದಸ್ಯರನ್ನಾಗಿ ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ನೇಮಕಗೊಂಡಿದ್ದಾರೆ.


ರವಿ ಕೋಟಿ


ಕೆ.ಶಿವಕುಮಾರ್

ಇಂದು ಸಿರಿಧಾನ್ಯ ಕುರಿತು ಕಾರ್ಯಾಗಾರ

ಮೈಸೂರು,ಸೆ.28(ಜಿಎ)–ಪಾಥ ಸಂಸ್ಥೆ ಮೂಲಕ ಸೆ. 29ರಂದು ಬೆಳಗ್ಗೆ 10.30ಕ್ಕೆ ಮೇಟಗಳ್ಳಿಯ ರಂಗರಾವ್ ಸ್ಮಾರಕ ವಿಶೇಷ ಚೇತನರ ಶಾಲೆಯಲ್ಲಿ ಆರೋಗ್ಯ ಮತ್ತು ಚೇತರಿಕೆಗಾಗಿ ಸಿರಿಧಾನ್ಯ ಎಂಬ ವಿಷಯ ಕುರಿತು ಕಾರ್ಯಾಗಾರ ಆಯೋಜಿಸಿದ್ದು, ಡಾ.ಖಾದರ್ ವಲ್ಲಿ ಇದನ್ನು ನಡೆಸಿಕೊಡಲಿರುವುದಾಗಿ ಸಂಸ್ಥೆ ಮುಖ್ಯಸ್ಥೆ ಶಾಶ್ವತಿ ಸಿಂಗ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಭಿವೃದ್ಧಿ, ಆರೋಗ್ಯ ಮತ್ತು ಅಳವಡಿಕೆ ಕ್ರಿಯೆಯಲ್ಲಿ ಪೋಷಕರು ವಿಶೇಷ ಅಗತ್ಯತೆಯುಳ್ಳ ಮಕ್ಕಳ ಒಳಗೊಳ್ಳುವಿಕೆ, ಅಭಿವೃದ್ಧಿ ಮತ್ತು ಸ್ವಾವಲಂಬನೆಗಾಗಿ ಪಾಥಾ ಸಂಸ್ಥೆ ಸ್ಥಾಪನೆ ಆಗಿದೆ. ಕಾರ್ಯಾಗಾರದಲ್ಲಿ ಪದ್ಮಶ್ರೀ ಪುರಸ್ಕೃತ ಡಾ. ಖಾದರ್ ವಲ್ಲಿ ಅವರು ಸಿರಿಧಾನ್ಯಗಳ ಸೇವನೆಯ ಆರೋಗ್ಯ ಪ್ರಯೋಜನ ಕುರಿತ ಚರ್ಚೆಯಲ್ಲಿ ಭಾಗಿಯಾಗಲಿದ್ದಾರೆ ಎಂದರು.


ತಾವು ಆಹಾರ ಅಲರ್ಜಿಗಳು ಮತ್ತು ವಿಶೇಷ ಅಗತ್ಯತೆ ಬಯಸುವ ಮಕ್ಕಳಿಗಾಗಿ ಸಿರಿಧಾನ್ಯ ಆಧಾರಿತ ಆಹಾರದ ಮಧ್ಯಸ್ಥಿಕೆ ಕುರಿತು ಪ್ರಶ್ನೆಗಳಿಗೆ ಉತ್ತರಿಸುವುದಾಗಿ ಮಾಹಿತಿ ನೀಡಿದರು. ಅಲ್ಲದೆ, ನಿಸರ್ಗದ ನಿಯಮಗಳಿಗೆ ಅನುಸಾರವಾಗಿ ಬದುಕುವ ವಿವೇಕ ಮಾನವ ಜನಾಂಗ ಕಳೆದುಕೊಳ್ಳುತ್ತಿದೆ ಎನಿಸುತ್ತಿದೆ. ಜೊತೆಗೆ ಒಂದು ಸಮಾಜವಾಗಿ ನಮ್ಮ ಜೈವಿಕ ವ್ಯವಸ್ಥೆ ತಿರಸ್ಕರಿಸುವ ಆಹಾರ ಸೇವಿಸುತ್ತಿದ್ದೇವೆಯೇ ಎನಿಸುತ್ತಿದೆ. ಹೀಗಾಗಿ ನಮ್ಮ ಆಹಾರ ಪದ್ಧತಿ, ಜೀವನಶೈಲಿ ಬದಲಾವಣೆ ನಮ್ಮ ಭವಿಷ್ಯ ಮತ್ತು ಮಕ್ಕಳ ಆರೋಗ್ಯದ ಮೇಲೆ ಆಶಾಭಾವನೆ ಮೂಡಿಸುತ್ತದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸ್ಮಿತಾ, ವೀಣಾ ಉಪಸ್ಥಿತರಿದ್ದರು.

ಸುತ್ತೂರು ಶ್ರೀಗಳಿಂದ ಆಶೀರ್ವಾದ...



ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ನೂತನ ಸದಸ್ಯ ಯು.ಎಸ್.ಬಸವರಾಜು, ರಾಜ್ಯ ಸಮಿತಿ ಸದಸ್ಯ ಮೊತ್ತ ಬಸವರಾಜಪ್ಪ ಅವರು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ರಾಜ್ಯ ಕೋಶಾಧ್ಯಕ್ಷ ವರುಣ ಮಹೇಶ್, ಮನುಗನಹಳ್ಳಿ ಮಂಜು, ಚಿಕ್ಕಹಳ್ಳಿ ಸ್ವಾಮಿ, ಅರಳಿಕೆರೆ ಶಿವಕುಮಾರ್, ಲಿಂಗರಾಜು, ಹುಲ್ಲೇನಹಳ್ಳಿ ರವಿ, ಬಸಪ್ಪ, ಗಿರೀಶ್, ಹಂದನಳ್ಳಿ ಜಗದೀಶ್, ಮಾದೇವ, ಮಲ್ಲಿಕಾರ್ಜುನ್, ತೇಜಸ್, ವಾಜಮಂಗಲ ಮಹಾದೇವಸ್ವಾಮಿ, ಲಿಂಗರಾಜು, ರಾಜಣ್ಣ, ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಸಭೆ



ಮೈಸೂರು ತಾಲೂಕು ಸಿದ್ದರಾಮನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಎಸ್.ಸಿದ್ದರಾಮು ಉದ್ಘಾಟಿಸಿದರು. ಚಿತ್ರದಲ್ಲಿ ಉಪಾಧ್ಯಕ್ಷ ಮಹಾದೇವ, ಸದಸ್ಯರಾದ ಶಂಕರ, ಶಿವಣ್ಣ, ಉದಯರಾಜ್, ದಿನೇಶ್, ಗ್ರಾಪಂ ಮಾಜಿ ಅಧ್ಯಕ್ಷ ಶೇಖರ್, ವಿಸ್ತರಣಾಧಿಕಾರಿ ಶ್ರೀಮತಿ ವಿನುತ, ಕಾರ್ಯದರ್ಶಿ ರಮೇಶ್ ಇನ್ನಿತರರಿದ್ದಾರೆ.

ಮಾದಪ್ಪ ನಿಧನ



ಮೈಸೂರು, ಸೆ.28– ಮೈಸೂರಿನ ಕನ್ನೇಗೌಡನಕೊಪ್ಪಲಿನ ಹಿರಿಯ ಮುಖಂಡರು ಹಾಗೂ ನಗರಪಾಲಿಕೆ ನಿವೃತ್ತ ನೌಕರರಾದ ಮಾದಪ್ಪ(91) ಅವರು ಕುವೆಂಪುನಗರ ಅನಿಕೇತನ ರಸ್ತೆ ನಿವಾಸದಲ್ಲಿ ಶನಿವಾರ ಸಂಜೆ ನಿಧನರಾದರು.

ಇವರು ಪತ್ನಿ, ಕಾಂಗ್ರೆಸ್ ಮುಖಂಡ ಅಂಬರೀಶ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕನ್ನೇಗೌಡನಕೊಪ್ಪಲು ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ. ಮಾದಪ್ಪನವರ ಅಗಲಿಕೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷರಾದ ವಿಕ್ರಾಂತ್ ಪಿ.ದೇವೇಗೌಡರು ಸೇರಿದಂತೆ ಹಲವು ಮುಖಂಡರು ಸಂತಾಪ ವ್ಯಕ್ತಪಡಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.09.2024 ಭಾನುವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಮಖ, ರಾಹುಕಾಲ : ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ನೆಗಡಿ, ಕೆಮ್ಮು ಮತ್ತು ಅಸ್ತಮ ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಮೈಸೂರು ಯುವ ಬಳಗ :** ದಸರಾ ಹಬ್ಬದ ಅಂಗವಾಗಿ ದಸರಾ ಗಜಪಡೆ ಮಾವುತರು ಹಾಗೂ ಕಾವಾಡಿಗಳಿಗೆ ಉಪಹಾರ ವ್ಯವಸ್ಥೆ, ಉಪಸ್ಥಿತರು : ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಅರಮನೆ ಆವರಣ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಭಾರತೀಯ ಯೂತ್ ಹಾಸ್ಟೆಲ್ ಸಂಸ್ಥೆ ಮೈಸೂರಿನ ಯೂತ್ ಹಾಸ್ಟೆಲ್ಸ್ ಗಂಗೋತ್ರಿ ಘಟಕ :** 75ನೆಯ ವಾರ್ಷಿಕೋತ್ಸವದ ಸಮಾರೋಪ ಸಮಾರಂಭ ಮತ್ತು ಯೂತ್ ಹಾಸ್ಟೆಲ್ಸ್ ಸಂಸ್ಥಾಪಕ ದಿವಂಗತ ಆರ್.ಜಿ. ಪದಕಿ ಅವರ ಜನ್ಮ ಶತಾಬ್ದಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಡಾ. ಎನ್.ಕೆ. ಲೋಕನಾಥ್, ಸಿಐಟಿಬಿ ಮಾಜಿ ಅಧ್ಯಕ್ಷ ಡಿ. ಮಾದೇಗೌಡ, YHAI ಕರ್ನಾಟಕ ರಾಜ್ಯ ಶಾಖೆಯ ಛೇರ್ಮನ್ ಎನ್.ಎಸ್. ಪ್ರಸನ್ನ, YHAI ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ರವಿ ಕುಮಾರ್, ಜೈ ಪದಕಿ, ಗಂಗೋತ್ರಿ ಘಟಕದ ಆರ್.ಜಿ. ನಾಗರಾಜ್, ಹೆಚ್.ಸಿ. ಕಾಂತರಾಜು, ವೈಹೆಚ್‌ಎಐ ಘಟಕದ ಅಧ್ಯಕ್ಷ ಎಂ. ಜಗದೀಶ್, ಛೇರ್ಮನ್ ಎಂ.ವಿ. ಪರಶಿವಮೂರ್ತಿ, ಸ್ಥಳ: ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್‌ನ ಸಭಾಂಗಣ, ಜಯನಗರ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಅಭಿಜಾತ ಕನ್ನಡ ಕೇಂದ್ರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಶಾಸ್ತ್ರೀಯ ಕನ್ನಡ ಅಧ್ಯಯನದ ಅಂತಾರಾಷ್ಟ್ರೀಯ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ವಿದ್ವಾಂಸ ಡಾ. ಡಿ.ಕೆ. ರಾಜೇಂದ್ರ, ಮುಖ್ಯ ಅತಿಥಿಗಳು : ವಿಶ್ರಾಂತ ಪ್ರಾಧ್ಯಾಪಕ ಡಾ. ಓ.ಎಲ್. ನಾಗಭೂಷಣಸ್ವಾಮಿ, ಅಧ್ಯಕ್ಷತೆ : ಕರಾಮುವಿವಿ ಅಧ್ಯಯನ ಕೇಂದ್ರದ ಡೀನ್ ಪ್ರೊ. ಎಂ. ರಾಮನಾಥಂ ನಾಯುಡು, ಸ್ಥಳ: ಸಮಾವೇಶ ಮಂದಿರ, ಕರಾಮುವಿವಿ, ಬೆಳಗ್ಗೆ 10ಕ್ಕೆ

■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ :** ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಕಲ್ಪವೃಕ್ಷ ಬೋನ್ಸಾಯ್ ಬುಟೀಕ್ :** ಧರಣಿ ಧಾರಿಣಿ, ಭೂಮಿಯ ಸಂಭ್ರಮಾಚರಣೆ, ಸಸ್ಯಗಳು, ಕುಂಡಗಳು ಮತ್ತು ಆಭರಣಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಕಲ್ಪವೃಕ್ಷ ಬೋನ್ಸಾಯ್ ಬುಟೀಕ್, ಬಂಡಿಪಾಳ್ಯ, ಉತ್ತನಹಳ್ಳಿ ಕ್ರಾಸ್, ಬೆಳಗ್ಗೆ 10.30ಕ್ಕೆ

■ **ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ :** ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಮುಖ್ಯ ಅತಿಥಿಗಳು : ಶಾಸಕರಾದ ತನ್ವೀರ್ ಸೇಠ್, ಸಿ. ಅನಿಲ್ ಚಿಕ್ಕಮಾದು, ಡಿ. ರವಿಶಂಕರ್, ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ತಿಮ್ಮಯ್ಯ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಬಿ.ಶಿವಸ್ವಾಮಿ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಶ್ರೀಜಯಲಕ್ಷ್ಮಮ್ಮ ಬಿ.ಎಸ್. ಸಣ್ಣಯ್ಯ ಟ್ರಸ್ಟ್, ಸಂವಹನ ಪ್ರಕಾಶಕರು :** ಬಿ.ಎಸ್. ಸಣ್ಣಯ್ಯ ಸಾಹಿತ್ಯ ಪ್ರಶಸ್ತಿ ಪ್ರದಾನ ಮತ್ತು ಬಿ.ಎಸ್. ಸಣ್ಣಯ್ಯನವರ ಕೃತಿ 'ಬಂಧುವರ್ಮ ಮತ್ತು ಆತನ ಕೃತಿಗಳು' ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಕೆಪಿಸಿಸಿ ಸದಸ್ಯ ಡಾ. ಬಿ. ಪ್ರಭುದೇವ್, ಕೃತಿ ಬಿಡುಗಡೆ : ನಾಡೋಜ ಡಾ. ಹಂಪ ನಾಗರಾಜಯ್ಯ, ಅಧ್ಯಕ್ಷತೆ : ವಿಶ್ರಾಂತ ಪ್ರಾಧ್ಯಾಪಕ ಡಾ. ರಾಗೌ, ಪ್ರಶಸ್ತಿ ಪುರಸ್ಕೃತರು : ಪ್ರಾಧ್ಯಾಪಕ ಡಾ. ಕೆ. ರವೀಂದ್ರನಾಥ್, ಪುಸ್ತಕ ಕುರಿತು : ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಎ. ರಂಗಸ್ವಾಮಿ, ಉಪಸ್ಥಿತರು : ಶ್ರೀಮತಿ ಬಿ.ಎಸ್. ಸುಶೀಲ ಲಕ್ಷ್ಮೀಗೌಡ, ಸಂವಹನ ಪ್ರಕಾಶಕ ಡಿ.ಎನ್. ಲೋಕಪ್ಪ, ಸ್ಥಳ: ಗ್ರೀನ್ ಹೆರಿಟೇಜ್ ಹೋಟೆಲ್, ಬೆಳಗ್ಗೆ 10.30ಕ್ಕೆ.

■ **ಅನುಗ್ರಹ ಫೌಂಡೇಷನ್ :** ಡಾ. ಬಿ.ಪಿ. ವಿಜಯರಾಜು ಅವರ ಮೌಲ್ಯ ರಾಜಕಾರಣ ಒಂದು ಹುಡುಕಾಟ ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಲೋಕಾರ್ಪಣೆ : ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ, ಕೃತಿ ಪರಿಚಯ : ವಕೀಲ ಬಿ.ಆರ್. ರಂಗಸ್ವಾಮಿ, ಉಪಸ್ಥಿತರು : ಅನುಗ್ರಹ ಫೌಂಡೇಷನ್ ಅಧ್ಯಕ್ಷ ಅಣ್ಣೇಗೌಡ, ಅಧ್ಯಕ್ಷತೆ : ಪ್ರೊ. ಕೃಷ್ಣ ಹೊಂಬಳ್, ಸ್ಥಳ: ರೋಟರಿ ಸ್ಕೂಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಸಂವಹನ ಪ್ರಕಾಶನ, ಕನ್ನಡ ಸಾಹಿತ್ಯ ಕಲಾ ಕೂಟ, ಮಾನವ ಪ್ರಕಾಶನ :** ಸಾಹಿತಿ ಎಸ್. ರಾಮಪ್ರಸಾದ್ ಅವರ ಮೂರು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ, ಕೃತಿಗಳ ಲೋಕಾರ್ಪಣೆ : ಶ್ರೀ ಕುಂದೂರು ಮಠದ ಅಧ್ಯಕ್ಷ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು, ಅಧ್ಯಕ್ಷತೆ : ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ಮಾನಸ, ಕೃತಿಗಳ ಕುರಿತು : ವಿಶ್ರಾಂತ ಹಿರಿಯ ಸಂಶೋಧಕ ಡಾ. ಎಚ್.ವಿ. ನಾಗರಾಜರಾವ್, ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಜಿ.ಬಿ. ಸಂತೋಷ್‌ಕುಮಾರ್, ಪ್ರಾಸ್ತಾವಿಕ ನುಡಿ : ಎಂ. ಚಂದ್ರಶೇಖರ್, ಉಪಸ್ಥಿತರು : ಡಿ.ಎನ್. ಲೋಕಪ್ಪ, ಎಂ. ಮುತ್ತುಸ್ವಾಮಿ, ಎಸ್. ರಾಮಪ್ರಸಾದ್, ಸ್ಥಳ: ರೋಟರಿ ಮೈಸೂರು ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಸಮೀಪ, ಬೆಳಗ್ಗೆ 10.30ಕ್ಕೆ.

■ **ಭಾರತ ಕಮ್ಯೂನಿಸ್ಟ್ ಪಕ್ಷ :** 5ನೇ ಮೈಸೂರು ಸಮ್ಮೇಳನ, ಉದ್ಘಾಟನೆ : ಸಿಪಿಐ (ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಮುಖ್ಯ ಅತಿಥಿಗಳು : ಕಾ. ಕೆ. ಬಸವರಾಜು, ಎನ್. ವಿಜಯಕುಮಾರ್, ಜಗನ್ನಾಥ್, ಜಿ. ಜಯರಾಂ, ಅಧ್ಯಕ್ಷತೆ : ಸಮಿತಿ ಕಾರ್ಯದರ್ಶಿ ಜಿ.ರಾಜೇಂದ್ರ, ಸ್ಥಳ: ಲಕ್ಷ್ಮೀಕಾಂತನಗರದ ಸಮುದಾಯ ಭವನ, ಹೆಬ್ಬಾಳು, ಬೆಳಗ್ಗೆ 11ಕ್ಕೆ.

■ **ಮಹಿಷ ದಸರಾ ಆಚರಣೆ ಸಮಿತಿ :** ಮಹಿಷ ಮಂಡಲೋತ್ಸವ, ಮಹಿಷ ಪ್ರತಿಮೆಗೆ ಪುಷ್ಪಾರ್ಚನೆ, ಸಾನ್ನಿಧ್ಯ: ನಳಂದ ಬುದ್ಧ ವಿಹಾರದ ಬೋಧಿದತ್ತ ಬಂತೇಜಿ, ಉದ್ಘಾಟನೆ : ಚಿಂತಕ ಯೋಗೇಶ್ ಮಾಸ್ಟರ್, ಉಪಸ್ಥಿತರು : ಚಿಂತಕ ಶಿವಸುಂದರ್, ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್, ಇತಿಹಾಸ ತಜ್ಞ ಪ್ರೊ.ಪಿ.ವಿ.ನಂಜರಾಜ ಅರಸ್, ಲೇಖಕ ಸಿದ್ದಸ್ವಾಮಿ, ಚಿಂತಕ ಕೃಷ್ಣಮೂರ್ತಿ ಚಮರಂ, ಚಾಮುಂಡಿಬೆಟ್ಟದ ಮಹಿಷ ಪ್ರತಿಮೆ ಸಮೀಪ, ಬೆಳಗ್ಗೆ 11ಕ್ಕೆ.

■ **ಸುಯೋಗ್ ಆಸ್ಪತ್ರೆ :** ಬೆಳಗ್ಗೆ 7.30ಕ್ಕೆ ವಿಶ್ವ ಹೃದಯ ದಿನಾಚರಣೆ ಅಂಗವಾಗಿ ವಾಕಥಾನ್, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಬೆಳಗ್ಗೆ 10ಕ್ಕೆ ಉಚಿತ ಆಂಜಿಯೋಗ್ರಾಂ ಮತ್ತು ಆಂಜಿಯೋಪ್ಲಾಸ್ಟಿ ಶಿಬಿರದ ಉದ್ಘಾಟನೆ, ಸಾನ್ನಿಧ್ಯ : ಶ್ರೀ ತ್ರಿನೇತ್ರ ಮಹಂತೇಶ ಶಿವಯೋಗಿ ಸ್ವಾಮೀಜಿ, ಉದ್ಘಾಟನೆ : ಕಾರ್ಡಿಯಾಲಜಿ ಸೊಸೈಟಿ ಅಧ್ಯಕ್ಷ ಡಾ.ಎಂ. ಮಂಜಪ್ಪ, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಉಪಸ್ಥಿತರು : ಡಾ. ಪಿ. ಜಯಕುಮಾರ್, ಶ್ರೀಮತಿ ಸುಯೋಗ್ ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** 44ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ಮುಖ್ಯ ಅತಿಥಿಗಳು : ಜಮುನಾರಾಣಿ ವಿ. ಮಿರ್ಲೆ, ಕುಮುದಿನಿ ಅಚ್ಚಿ, ಸ್ಪರ್ಶ ಶೆಣೈ, ಲಕ್ಷ್ಮಿ ವಿನೋದ್, ಎನ್. ರೇಣುಕಾ, ಅಪೂರ್ವ ಸಿರಿ, ಅತಿಥಿಗಳು : ವಿದುಷಿ ಸ್ವಾತಿ ಅತ್ಮನಾಥನ್, ಗಾಯತ್ರಿ ಕುಲಕರ್ಣಿ, ಮಂಜು ಕೆ. ನಾಯರ್, ಎನ್. ಗುರುರಾಜ್, ಅನೂಷಾ ವರುಣ್, ಅರುಂಧತಿ ಗೋಪಾಲ್, ಸ್ಥಳ: ಕಲೆ ಮನೆ ಸಭಾಂಗಣ, ಮಧ್ಯಾಹ್ನ 2.30ಕ್ಕೆ.

■ **ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ :** ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಎಸ್. ಆನಂದಮೂರ್ತಿ, ಪ್ರಾಸ್ತಾವಿಕ ನುಡಿ : ಸಂಸ್ಥೆ ಕಾರ್ಯದರ್ಶಿ ಎಂ.ಕೆ. ರೇವಣ್ಣ, ಮುಖ್ಯ ಅತಿಥಿಗಳು : ಪ್ರೊ. ಎ.ಬಾಲಸುಬ್ರಹ್ಮಣ್ಯನ್, ಪ್ರೊ. ರಮೇಶ್, ಸನ್ಮಾನಿತರು : ಡಿ. ಚಂದ್ರಶೇಖರಯ್ಯ, ಅಹಿಂದ ಜವರಪ್ಪ, ಕೆ. ದೀಪಕ್, ಸ್ಥಳ: ಬುದ್ಧ ಧ್ಯಾನ ಮಂದಿರ, ಅಶೋಕಪುರಂ, ಸಂಜೆ 5ಕ್ಕೆ.

■ **ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ, ವಿಜಯನಾರಸಿಂಹ ಚಾರಿಟಬಲ್ ಟ್ರಸ್ಟ್ :**ಸುಬೇದಾರ್ ಮೇಜರ್ ಎಲ್.ಎನ್. ಸಿಂಹರವರ ಧರ್ಮಪತ್ನಿ ದಿವಂಗತ ಟಿ.ಕೆ. ವಿಜಯಲಕ್ಷ್ಮಿ ಅವರ ಸ್ಮರಣಾರ್ಥ ಅಂಗವಾಗಿ ರಾಗ್ ಮ್ಯೂಸಿಕಲ್ ಬ್ಯಾಂಡ್, ವಿಜಯನರಸಿಂಹ ಚಾರಿಟೆಬಲ್ ಟ್ರಸ್ಟ್ ಉದ್ಘಾಟನಾ ಸಮಾರಂಭ, ಉಪಸ್ಥಿತರು : ಶಾಸಕ ಕೆ. ಹರೀಶ್‌ಗೌಡ, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ. ನಾಗರಾಜ್ ವಿ. ಬೈರಿ, ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್, ಟ್ರಸ್ಟ್ ಎಸ್.ಆರ್. ಮಂಜುನಾಥ್, ಲಹರಿ ವೇಲು, ಡಾ. ಜಯಪ್ಪ ಹೊನ್ನಾಳಿ, ಶ್ರೀಮತಿ ಎಸ್. ಸವಿತಾಗೌಡ, ಆರ್ಯನ್, ಎನ್. ಬೆಟ್ಟೇಗೌಡ, ಗಾಯಕರಾದ ಆರ್. ಮಹೇಂದ್ರ, ಲತಾ ಮಂಜುನಾಥ್ ಮತ್ತು ಮಂಜುಶ್ರೀ ಧೃವರಾಜ್ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ಲೈವ್ ಮ್ಯೂಸಿಕ್, ಸ್ಥಳ: ಶ್ರೀ ಚಾಮುಂಡೇಶ್ವರಿ ಬಯಲು ರಂಗ ಮಂಟಪ, ಮಹದೇಶ್ವರ ಬಡಾವಣೆ, ಸಂಜೆ 5.30ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ದಿವಂಗತ ಎ.ಎಲ್. ರಾಜೇ ಅರಸ್ ಅವರ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಉದ್ಘಾಟನೆ : ಶ್ರೀಕೃಷ್ಣ ಸೇವಾ ಸಮಿತಿ ಟ್ರಸ್ಟ್ ಕಾರ್ಯದರ್ಶಿ ಡಾ. ಎಂ.ಆರ್. ಭಾರತಿ, ಡಾ. ವಿದ್ಯಾಭೂಷಣ ಅವರಿಂದ ಗಾಯನ, ವಿದುಷಿ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಸ್. ಮಂಜುನಾಥ–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಆರ್ಟ್ ಆಫ್ ಲಿವಿಂಗ್ :** ಜಾಗತಿಕ ಸಹಜ ಸಮಾಧಿ ಧ್ಯಾನದ ಕಾರ್ಯಕ್ರಮ, ಸ್ಥಳ: ದಿ ಆರ್ಟ್ ಆಫ್ ಲಿವಿಂಗ್ ಸೆಂಟರ್, ವಿಶ್ವಮಾನವ ಜೋಡಿ ರಸ್ತೆ, ಸರಸ್ವತಿಪುರಂ, ಸಂಜೆ 6.30 ರಿಂದ.

■ **ರಂಗಾಯಣ :** ವಾರಾಂತ್ಯ ರಂಗಪ್ರದರ್ಶನ, ರಾಯಚೂರಿನ ಸಮುದಾಯ ರಂಗ ತಂಡದಿಂದ ಡಾ. ವಿಕ್ರಮ್ ವಿಸಾಜಿ ಅವರ ರಚನೆಯ, ಪ್ರವೀಣ್ ರೆಡ್ಡಿ ಗುಂಜಹಳ್ಳಿ ನಿರ್ದೇಶನದ 'ರಕ್ತ ವಿಲಾಪ' ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ, ರಂಗಮಂದಿರ, ಸಂಜೆ 6.30ಕ್ಕೆ

■ **ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಎನ್.ಆರ್. ಪ್ರಶಾಂತ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದುಷಿ ಅಧಿತಿ ಕೃಷ್ಣಪ್ರಕಾಶ್–ವಯೋಲಿನ್, ವಿದ್ವಾನ್ ಎ. ರಾದೇಶ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ, ಸಂಜೆ 6.30ಕ್ಕೆ.

■ **ನಿರಂತರ ಫೌಂಡೇಷನ್ :** ಸಹಜ ರಂಗ ರಂಗ ತರಬೇತಿ ಶಿಬಿರದ ಸಮಾರೋಪ ಮತ್ತು ನಾಟಕ ಪ್ರದರ್ಶನ, ಉಪಸ್ಥಿತರು : ಸಂಸ್ಕೃತಿ ಚಿಂತಕ ಪ್ರೊ. ಕಾಳಚೆನ್ನೇಗೌಡ, ಹಸಿರು ಫೌಂಡೇಷನ್‌ನ ಹೊಗ್ಗಳ್ಳಿ ಗಂಗಾಧರ್, ರಂಗಾಯಣ ಸದಸ್ಯ ರಾಮು, ರಂಗ ನಿರ್ದೇಶಕರಾದ ಎಂ.ಎಂ. ಸುಗುಣ, ಸಂಜೆ 7ಕ್ಕೆ ನಿರಂತರ ಫೌಂಡೇಷನ್ ಕಲಾವಿದರಿಂದ ಪೂರ್ಣಚಂದ್ರ ತೇಜಸ್ವಿ ಅವರ ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ, ನಿರ್ದೇಶನ : ಜೀವನ್ ಕುಮಾರ್ ಹೆಗ್ಗೋಡು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

■ **ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ :** ವಿದ್ವಾನ್ ಜಗದೀಶ ಶರ್ಮಾ ಅವರಿಂದ ಧರ್ಮ–ಸಂಸ್ಕಾರ ಆಚಾರ ವ್ಯವಹಾರ ಕುರಿತು ಪ್ರವಚನ, ಸ್ಥಳ: ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ.

■ **ಮೈಸೂರಿನ ತೆರಿಗೆದಾರರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಸ್ಥಳ: ಜಯನಗರದ 2ನೇ ಮುಖ್ಯ ರಸ್ತೆಯಲ್ಲಿರುವ ಶ್ರೀರಾಮಮಂದಿರ, ಸಂಜೆ 7 ಗಂಟೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಶರೀಫಾಬಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲೀಕ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಸ್. ಸಂಗೀತಾ, ರೋಹಿಣಿ ಸುಧಾಮ್, ವ್ಯಾಖ್ಯಾನ : ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಭೂತ ನಲಿಕೆಯ ಕಲಾವಿದ ಚೋಮಬೆಟ್ಟಂಪಾಡಿ ಹಾಗೂ ಮಗ ರಂಗ ಸಂಗೀತ ಕಲಾವಿದ ಶುಭಕರ ಬೆಟ್ಟಂಪಾಡಿ ಅವರೊಂದಿಗೆ ಸಂವಾದ, ಪ್ರಸ್ತುತಿ : ಅಬ್ದುಲ್ ರಶೀದ್, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ವಿಶ್ವ ಹೃದಯ ದಿನದ ಸಂದರ್ಭದಲ್ಲಿ 'ಹೃದಯದ ಆರೈಕೆ' ಕುರಿತು ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೃದಯ ವಿಜ್ಞಾನ ವಿಭಾಗದ ನಿರ್ದೇಶಕರು ಹಾಗೂ ಹಿರಿಯ ಹೃದ್ರೋಗ ತಜ್ಞರಾದ ಡಾ. ಕೇಶವಮೂರ್ತಿ. ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ : ವಿವಿಧ ಶಾಲೆಯ ಮಕ್ಕಳು ನಡೆಸಿಕೊಟ್ಟಿರುವ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ : ಹಕ್ಕಿಗೂಡು, ಪ್ರಸ್ತುತಿ : ಎಂ. ಎಸ್. ಭಾರತಿ, ಕಥೆ ಹೇಳುತ್ತಾರೆ–ಹೆಚ್. ಎಸ್. ಶಿವರಾಂ, 11.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ರವರ ಮನದ ಮಾತು

ಮಧ್ಯಾಹ್ನ: 12.05 ವನಿತಾ ವಿಹಾರ–ವಿಶ್ವ ಹೃದಯದ ದಿನದ ಹಿನ್ನೆಲೆಯಲ್ಲಿ– ಹೃದಯ ನಿಮ್ಮದು ಕಳೆದುಕೊಳ್ಳಬೇಡಿ – ಹೃದಯ ಆರೋಗ್ಯ ಕುರಿತು ಡಾ.ವೀಣಾ ಮೆಹೆಂದಳೆ ಅವರೊಡನೆ ಸಂದರ್ಶನ, ಸಂದರ್ಶಕರು – ಚಂದ್ರಮ್ಮ, 12.30 ದೇವರನಾಮ–ವಿದ್ಯಾಶ್ರೀ. ಬಿ.ಜಿ, 12.45 ಜನಪದ ಸಂಗೀತ–ಮಂಡ್ಯದ ಬೇವಿನಹಳ್ಳಿಯ ನಂಜಮ್ಮ ಮತ್ತು ಸಂಗಡಿಗರಿಂದ ಕೊಂತಮ್ಮನ ಹಾಡು, 1.20 ಭಾವಗೀತೆಗಳು–ಮಧುಲಿಕ ಶ್ರೀನಿವಾಸ್, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಇದು ಎಂಥಾ ಪ್ರೇಮವಯ್ಯ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ : ಸಂಜಯ್ ಸುಬ್ರಹ್ಮಣ್ಯಂ – ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಮೈಸೂರಿನ ಐತಿಹಾಸಿಕ ಕಟ್ಟಡಗಳು, ಮಾತನಾಡುತ್ತಾರೆ : ಹಿರಿಯ ಸಂಶೋಧಕರಾದ ಪ್ರೊ. ಎ.ವಿ. ನರಸಿಂಹ ಮೂರ್ತಿ, 8.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿ ರವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು–ಚಿನ್ನಯ್ಯ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭೆ, ಡಾ. ವಿನಯ್ ಕುಮಾರ್ ಮಿಶ್ರ–ಹಾರ್ಮೋನಿಯಂ ವಾದನ, ಪಂ. ವಿನೋದ್ ಪಾಠಕ್–ತಬಲಾ ಸೋಲೊ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 29 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 164 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್

ಬೆಂಗಳೂರಲ್ಲಿ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್ ಗಂಭೀರ ಚರ್ಚೆ

- ರಾಜ್ಯದ ಕೆಲ ಸಚಿವರು, ಶಾಸಕರು ಮುಖಂಡರೊಂದಿಗೆ ಸಮಾಲೋಚನೆ
- ಯಾರು ಬಂದದ್ದು, ಹೋದದ್ದು, ಭೇಟಿಯಾದದ್ದು ಎಲ್ಲವೂ ಗುಪ್ತ್... ಗುಪ್ತ್...

ಬೆಂಗಳೂರು, ಸೆ. 28(ಕೆಎಂಶಿ)– **ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಬಿಡಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಕ್ಕಟ್ಟಿಗೆ ಸಿಲುಕಿರುವ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪಕ್ಷದ ಮುಂದಿನ ನಡೆಯ ಬಗ್ಗೆ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ನಗರಕ್ಕೆ ಕರೆಸಿಕೊಂಡು ಚರ್ಚೆ ಮಾಡಿದ್ದಾರೆ.**



ಇದೇ ಸಮಯದಲ್ಲಿ ಉಭಯ ನಾಯಕರು, ರಾಜ್ಯದ ಪ್ರಮುಖ ಮುಖಂಡರು ಮತ್ತು ಸಚಿವರ ಜೊತೆಯೂ ಮುಖಾಮುಖಿ ಮಾತನಾಡಿದ್ದಾರೆ. ಸಿದ್ದರಾಮಯ್ಯ ಅವರಿಗೆ ಕಾನೂನಿನ ಸಂಕಷ್ಟ ಎದುರಾದರೆ, ಮುಂದೇನು ಮಾಡಬೇಕೆಂಬ ಬಗ್ಗೆ ಖರ್ಗೆ ಮುಂದಾಲೋಚನೆಯಲ್ಲಿ ತೊಡಗಿದ್ದಾರೆ. ಮುಡಾ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಹೈಕೋರ್ಟ್ ಹಾಗೂ ಜನಪ್ರತಿನಿಧಿಗಳ ನ್ಯಾಯಾಲಯಗಳ ತೀರ್ಪು ಹೊರಬರುತ್ತಿದ್ದಂತೆ ಕೇರಳ ಪ್ರವಾಸದಲ್ಲಿದ್ದ ವೇಣುಗೋಪಾಲ್ ಅವರನ್ನು ನಗರಕ್ಕೆ ಕರೆಸಿಕೊಂಡು ಎಲ್ಲಾ ಬೆಳವಣಿಗೆ ಕುರಿತು ಸುದೀರ್ಘ ಚರ್ಚೆ ಮಾಡಿದ್ದಾರೆ. ತದನಂತರ ರಾಜ್ಯದ ಆಯ್ದ ಕೆಲವು ಹಿರಿಯ ಮುಖಂಡರೊಂದಿಗೆ, ಇಂತಹ ಪರಿಸ್ಥಿತಿಯಲ್ಲಿ ಮುಂದಿನ ನಡೆಯ ಬಗ್ಗೆ ಮಾಹಿತಿ ಪಡೆದಿದ್ದಾರೆ. ಸಚಿವರಷ್ಟೇ ಅಲ್ಲದೆ, ವಿಧಾನಸಭೆಯ ಕೆಲವು ಆಯ್ದ ಶಾಸಕರ ಜೊತೆಯೂ ಖರ್ಗೆ ಮತ್ತು ವೇಣುಗೋಪಾಲ್ ಮಾತನಾಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಯಾವುದೇ ಮಾತುಕತೆ ನಡೆಸಿಲ್ಲ. ರಾಜಧಾನಿಯಲ್ಲಿ ನಡೆಯುತ್ತಿರುವ ಈ ಎಲ್ಲಾ ಬೆಳವಣಿಗೆಗಳ ಬಗ್ಗೆ ಸಿದ್ದರಾಮಯ್ಯ ಅವರಿಗೂ ಮಾಹಿತಿ ಇದೆ.

ವೇಣುಗೋಪಾಲ್ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದಿರುವ ದಾಖಲೆ ಇದೆ. ಬೆಳಗ್ಗೆ ಖರ್ಗೆ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ನಂತರ ಇತರ ಮುಖಂಡರೊಂದಿಗೂ ಚರ್ಚಿಸಿದ್ದಾರೆ. ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ವೇಣುಗೋಪಾಲ್, ಈ ಬಾರಿ ಎಲ್ಲವನ್ನೂ ಗೌಪ್ಯವಾಗಿ ಇಟ್ಟಿದ್ದು, ಮಾಧ್ಯಮಗಳ ಮುಂದೆಯೂ ಯಾವುದೇ ಹೇಳಿಕೆ ನೀಡಿಲ್ಲ. ಖರ್ಗೆ ಅವರು ಮಾತ್ರ ನಿನ್ನೆ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕದಲ್ಲಿ ಬಿಜೆಪಿಯವರು ಸಣ್ಣ ವಿಷಯವನ್ನು ಇಟ್ಟುಕೊಂಡು ದೊಡ್ಡದನ್ನಾಗಿ ಮಾಡುತ್ತಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಾದ ನಂತರವೂ ನಾವು ಅವರ ಜೊತೆ ನಿಂತಿದ್ದೇವೆ, ಅವರಿಗೆ ಬೆಂಬಲ ಕೊಟ್ಟಿದ್ದೇವೆ ಎಂದರು. ಆದರೆ, ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ ಎಂಬ ಸೂಕ್ಷ್ಮ ಸಂದೇಶ ರವಾನೆ ಮಾಡಿದ್ದಾರೆ. ಸಿದ್ದರಾಮಯ್ಯ ಇವತ್ತು ಮುಖ್ಯಮಂತ್ರಿ ಇರುತ್ತಾರೆ, ನಾಳೆ ಇರಲ್ಲ ಆದರೆ, ಪಕ್ಷ ಇರಲಿದೆ ನಾವು ಮುಡಾ ವಿಚಾರದಲ್ಲಿ ಅವರ ಹಿಂದೆ ನಿಂತಿರುವುದು ಪಕ್ಷದಲ್ಲಿರುವ ಕಾರಣ ಎಂದು ಹೇಳಿದ್ದರು.

ಚುನಾವಣಾ ಬಾಂಡ್‌ಗಳ ಮೂಲಕ ಸಾವಿರಾರು ಕೋಟಿ ಲೂಟಿ ಆರೋಪ

ನಿರ್ಮಲಾ ಸೀತಾರಾಮನ್, ನಡ್ಡಾ, ವಿಜಯೇಂದ್ರ ವಿರುದ್ಧ ಎಫ್‌ಐಆರ್

ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶ



ನಿರ್ಮಲಾ ಸೀತಾರಾಮನ್


ಜೆ.ಪಿ.ನಡ್ಡಾ


ನಳೀನ್‌ಕುಮಾರ್ ಕಟೀಲ್


ಬಿ.ವೈ.ವಿಜಯೇಂದ್ರ

ಬೆಂಗಳೂರು, ಸೆ.28–ಚುನಾವಣಾ ಬಾಂಡ್‌ಗಳ ಮೂಲಕ ಕಾರ್ಪೊರೇಟ್ ಸಂಸ್ಥೆಗಳಿಂದ ಸಾವಿರಾರು ಕೋಟಿ ರೂ.ಗಳನ್ನು ಲೂಟಿ ಮಾಡಲಾಗಿದೆ ಎಂದು ಆರೋಪಿಸಿ ಜನಪರ ಸಂಘಟನೆಯೊಂದು ದಾಖಲಿಸಿದ್ದ ಪ್ರಕರಣದ ವಿಚಾರಣೆ ನಡೆಸಿದ ಬೆಂಗಳೂರಿನ ಜನಪ್ರತಿನಿಧಿ ನ್ಯಾಯಾಲಯ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ, ರಾಜ್ಯ ಬಿಜೆಪಿಯ ಈ ಹಿಂದಿನ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್, ಹಾಲಿ ಅಧ್ಯಕ್ಷ ಬಿವೈವಿಜಯೇಂದ್ರವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆದೇಶಿಸಿದೆ.



ಜನಾಧಿಕಾರ ಸಂಘರ್ಷ ಸಂಘಟನೆಯ ಪರವಾಗಿ ಆದರ್ಶ್ ಐಯ್ಯರ್ ಎಂಬುವರು ನ್ಯಾಯಾಲಯದಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದರು. ಚುನಾವಣಾ ಬಾಂಡ್‌ಗಳ ಮೂಲಕ ಪಕ್ಷಗಳಿಗೆ ನಾನಾ ಸಂಘ–ಸಂಸ್ಥೆಗಳಿಂದ, ನಾಗರಿಕರಿಂದ ದೇಣಿಗೆಯನ್ನು ನೀಡುವ ಪದ್ಧತಿಯು 2018ರಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿದ್ದು, ಆ ಮೂಲಕ ಸಾವಿರಾರು ಕೋಟಿ ರೂ.ಗಳನ್ನು ದೇಣಿಗೆಯ ರೂಪದಲ್ಲಿ ಸಂಗ್ರಹಿಸಲಾಗಿದೆ.

ಬಾಂಡ್‌ಗಳ ಹೆಸರಿನಲ್ಲಿ ಬಿಜೆಪಿಗೆ ಅತೀ ಹೆಚ್ಚು ದೇಣಿಗೆ ಬಂದಿದ್ದು, ಅದೆಲ್ಲವೂ ಬೇನಾಮಿ ಹಣವಾಗಿದೆ. ಆ ಮೂಲಕ 8000 ಕೋಟಿ ರೂ.ಗಳನ್ನು ಲೂಟಿ ಮಾಡಲಾಗಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿಯ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ, ರಾಜ್ಯ ಬಿಜೆಪಿಯ ಹಿಂದಿನ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್, ಹಾಲಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ತನಿಖೆ ನಡೆಸಲು ಐಯ್ಯರ್ ಅವರು ನ್ಯಾಯಾಲಯವನ್ನು ಕೋರಿದ್ದರು. ಅಯ್ಯರ್ ಅವರ ವಿಚಾರಣೆ ನಡೆಸಿದ ನ್ಯಾಯಾಲಯ, ಬಿಜೆಪಿ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಲು ಅನುಮತಿ ನೀಡಿದೆ. ■6ನೇ ಪುಟಕ್ಕೆ

ಚುನಾವಣಾ ಬಾಂಡ್ ಪ್ರಕರಣಕ್ಕೂ ಮುಡಾ ಹಗರಣಕ್ಕೂ ವ್ಯತ್ಯಾಸವಿದೆ

ಬೆಂಗಳೂರು, ಸೆ28–ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನೀಡಿದ ಆದೇಶಕ್ಕೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಡಾ ಹಗರಣಕ್ಕೂ ವ್ಯತ್ಯಾಸವಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ತಿಳಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಜನ ಪಕ್ಷಪಾತ ಮಾಡಿದ್ದಾರೆ. ಕೋಟ್ಯಂತರ ರೂಪಾಯಿ ಬೆಲೆಬಾಳುವ ಜಮೀನನ್ನು ಕಬಳಿಸಿದ್ದಾರೆ. ನಿರ್ಮಲಾ ಸೀತಾರಾಮನ್ ಅವರು ತಮ್ಮ ಸ್ವಂತಕ್ಕಾಗಿ ಏನೂ ಮಾಡಿಲ್ಲ. ಆ ಹಣ ಪಕ್ಷಕ್ಕೆ ಬಂದಿದೆ. ಕಾಂಗ್ರೆಸ್ ಪಕ್ಷಕ್ಕೂ 1,200 ಕೋಟಿಗೂ ಅಧಿಕ ಹಣ ಸಂದಾಯವಾಗಿದೆ. ಆ ಹಣವನ್ನು ಮೊದಲು ವಾಪಸ್ ನೀಡಲಿ, ನಂತರ ಸಚಿವರ ರಾಜೀನಾಮೆ ಕೇಳಲಿ ಎಂದರು. ಎಲ್ಲಾ ಪಕ್ಷಗಳು ದೇಣಿಗೆ ಸಂಗ್ರಹ ಮಾಡಿವೆ. ಪಕ್ಷಕ್ಕಾಗಿ ಹಣ ಸಂಗ್ರಹಿಸಿದವರ ಮೇಲೆ ಎಫ್‌ಐಆರ್ ದಾಖಲಿಸುವುದಾದರೆ, ಎಲ್ಲರ ಮೇಲೂ ದಾಖಲಿಸಬೇಕಾಗುತ್ತದೆ. ಸಿದ್ದರಾಮಯ್ಯ ಅವರೇ ಹೇಳಿಸಿ ನಿರ್ಮಲಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ವಿರುದ್ಧ ದೂರು ದಾಖಲಿಸಿದ್ದಾರೆ ಎಂಬ ಅನುಮಾನವಿದೆ. ಇಂತಹ ದೂರು ಕೇವಲ ರಾಜಕೀಯ ಪ್ರೇರಿತ ಎಂದು ತಿಳಿಸಿದರು. ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಲ್ಲೇ ಮುಂದುವರಿದರೆ ಪೊಲೀಸರ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಅದಕ್ಕಾಗಿ ರಾಜೀನಾಮೆಗೆ ಒತ್ತಾಯಿಸಿದ್ದೇವೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೂ, ರಾಜ್ಯ ಪೊಲೀಸರಿಗೂ ಸಂಬಂಧವಿಲ್ಲ. ಹಾಗಾಗಿ ಅವರ ರಾಜೀನಾಮೆ ಅನಗತ್ಯ ಎಂದರು.


ಆರ್.ಅಶೋಕ್

ಚಾಮುಂಡಿ ಬೆಟ್ಟದಲ್ಲಿ ಮಹಿಷನಿಗೆ ಪುಷ್ಪಾರ್ಚನೆ?! ಬನ್ನಿ, ನೋಡೇ ಬಿಡೋಣ!

ಮೈಸೂರು, ಸೆ.28– ವಿಶ್ವವಿಖ್ಯಾತ ದಸರಾ ಆಚರಣೆಗೆ ದಿನಗಣನೆ ಶುರುವಾಗಿರುವಂತೆ ಇದೀಗ ಮತ್ತೆ ಮಹಿಷಾ ದಸರಾದ ಬಗ್ಗೆಯೂ ವಿವಾದ ತಲೆದೋರಿದೆ. ಬೆಟ್ಟದಲ್ಲಿ ಮಹಿಷನಿಗೆ ಪುಷ್ಪಾರ್ಚನೆ ಮಾಡುವುದಾಗಿ ಮಹಿಷ ದಸರಾ ಸಮಿತಿ ಅಧ್ಯಕ್ಷ ಪುರುಷೋತ್ತಮ್ ಹೇಳಿಕೆಗೆ ತಿರುಗೇಟು ನೀಡಿರುವ ಮಾಜಿ ಸಂಸದ ಪ್ರತಾಪ್ ಸಿಂಹ 'ಬೆಟ್ಟದಲ್ಲಿ ಮಹಿಷನಿಗೆ ಪುಷ್ಪಾರ್ಚನೆ?! ಬನ್ನಿ ನೋಡೇ ಬಿಡೋಣ' ಎಂದು ಸವಾಲು ಹಾಕಿದ್ದಾರೆ.


ಪ್ರತಾಪ್ ಸಿಂಹ

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಹಿಷಾ ದಸರಾ ವಿಚಾರವಾಗಿ ಮಾಧ್ಯಮದಲ್ಲಿ ಪ್ರಕಟವಾಗಿರುವ ವರದಿಯನ್ನು ಲಗತ್ತಿಸಿ ಕೇವಲ ಒಂದೇ ವಾಕ್ಯದ ಪೋಸ್ಟ್ ಮಾಡಿದ್ದಾರೆ. ಈ ಮೂಲಕ ಮಹಿಷಾ ದಸರಾ ಸಮಿತಿಗೆ ಪಂಥಾಹ್ವಾನ ನೀಡಿದ್ದಾರೆ. ಹೀಗಾಗಿ ಸೆಪ್ಟೆಂಬರ್ 29ರಂದು ಬೆಳಗ್ಗೆ 8.30ಕ್ಕೆ ಮಹಿಷ ದಸರಾ ಆಚರಣೆ ಸಮಿತಿ ಚಾಮುಂಡಿ ಬೆಟ್ಟದಲ್ಲಿ ನಡೆಸಲು ಉದ್ದೇಶಿಸಿರುವ ಮಹಿಷ ಮಂಡಲೋತ್ಸವ ಕಾರ್ಯಕ್ರಮಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷವೂ ಚಾಮುಂಡಿ ಬೆಟ್ಟದಲ್ಲೇ ಮಹಿಷಾ ದಸರಾ ಆಚರಣೆಗೆ ಸಿದ್ಧತೆಗಳು ನಡೆದಿದ್ದವು. ಆ ಸಂದರ್ಭದಲ್ಲಿ ಸಂಸದರಾಗಿದ್ದ ಪ್ರತಾಪ್‌ಸಿಂಹ ■6ನೇ ಪುಟಕ್ಕೆ



ನಾಳೆ ಬೆಳಗ್ಗೆ 6 ಗಂಟೆವರೆಗೆ ಚಾಮುಂಡಿಬೆಟ್ಟ ಸೇರಿ ಮೈಸೂರು ನಗರ ವ್ಯಾಪ್ತಿ ನಿಷೇಧಾಜ್ಞೆ ಜಾರಿ

ಮಹಿಷ ಮಂಡಲೋತ್ಸವದ ಹಿನ್ನೆಲೆ



ಮೈಸೂರು, ಸೆ. 28(ಆರ್‌ಕೆ)– ನಾಳೆ (ಸೆ. 29) ಬೆಳಗ್ಗೆ ಮಹಿಷ ಮಂಡಲೋತ್ಸವ ಕಾರ್ಯಕ್ರಮವಿರುವ ಕಾರಣ ಚಾಮುಂಡಿಬೆಟ್ಟ ಸೇರಿದಂತೆ ಮೈಸೂರು ನಗರ ಪೊಲೀಸ್ ಕಮೀಷ್ನರೇಟ್ ವ್ಯಾಪ್ತಿಯಲ್ಲಿ ಬಿಎನ್‌ಎಸ್‌ಎಸ್ ಕಲಂ 163ರ ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಈ ಸಂಬಂಧ ನಿಷೇಧಾಜ್ಞೆ ಹೊರಡಿಸಿರುವ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಪುರಭವನ ಒಳಆವರಣ ಹೊರತುಪಡಿಸಿ ಚಾಮುಂಡಿಬೆಟ್ಟ ಸೇರಿದಂತೆ ಸೆಪ್ಟೆಂಬರ್ 28ರ ಮಧ್ಯರಾತ್ರಿಯಿಂದ 30ರ ಬೆಳಗ್ಗೆ 6 ಗಂಟೆವರೆಗೆ ಮೈಸೂರಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ವೇಳೆ ಮೆರವಣಿಗೆ, ರ್ಯಾಲಿ, ಪರ–ವಿರೋಧ ಘೋಷಣೆ ಕೂಗುವುದು, ಪಟಾಕಿ ಸಿಡಿಸುವುದು, 5ಕ್ಕಿಂತ ಹೆಚ್ಚು ಮಂದಿ ಗುಂಪು ಸೇರುವುದು, ಬಹಿರಂಗ ಸಭೆ, ಧ್ವನಿವರ್ಧಕ ಬಳಸುವುದು, ಮೂರ್ತಿ ಮೆರವಣಿಗೆ ಮಾಡುವಂತಿಲ್ಲ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಮುಡಾ ನಿವೇಶನ ಅಕ್ರಮ ಹಂಚಿಕೆ ಪ್ರಕರಣ

ಸಿಎಂ ಸಿದ್ದರಾಮಯ್ಯ ವಿರುದ್ಧ ತನಿಖೆಗೆ 4 ತಂಡ ರಚನೆ?

- ಸಿಬಿಐ ತನಿಖೆಗೆ ಒಪ್ಪಿಸುವಂತೆ ದೂರುದಾರ ಸ್ನೇಹಮಯಿ ಕೃಷ್ಣ ಹೈಕೋರ್ಟ್ ಮೊರೆ
- ಸೋಮವಾರ ವಿಚಾರಣೆಗೆ ಬರುವ ಸಂಭವ, ಅಂದೇ ಜಾರಿ ನಿರ್ದೇಶನಾಲಯ (ಇಡಿ)ಕ್ಕೆ ಅರ್ಜಿ



> “ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಬೇಕೆಂದು ಇಡಿಗೆ ಇ–ಮೇಲ್ ಮೂಲಕ ಪತ್ರ ರವಾನಿಸಿದ್ದೇನೆ. ಈ ಪ್ರಕರಣವನ್ನು ತಾರ್ಕಿಕ ಹಂತಕ್ಕೆ ಕೊಂಡೊಯ್ಯುತ್ತೇನೆ. ಸಿದ್ದರಾಮಯ್ಯ ಅವರನ್ನು ಜೈಲಿಗೆ ಕಳುಹಿಸುತ್ತೇನೆ. – ಸ್ನೇಹಮಯಿ ಕೃಷ್ಣ, ಸಾಮಾಜಿಕ ಕಾರ್ಯಕರ್ತ

ಮೈಸೂರು, ಸೆ. 28(ಆರ್‌ಕೆ)– ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶದಂತೆ ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಮೈಸೂರು ಲೋಕಾಯುಕ್ತ ಪೊಲೀಸರು, ಪ್ರಕರಣದ ತನಿಖೆಗೆ 4 ತಂಡಗಳನ್ನು ರಚಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಲೋಕಾಯುಕ್ತ ಮೈಸೂರು ಎಸ್ಪಿ ವ್ಯಾಪ್ತಿಗೆ ಬರುವ ಸಂಸ್ಥೆಯ ಇಬ್ಬರು ಡಿವೈಎಸ್ಪಿಗಳು ಹಾಗೂ ಇಬ್ಬರು ಇನ್‌ಸ್ಪೆಕ್ಟರ್‌ಗಳಿಗೆ ತಲಾ ಒಂದೊಂದು ತಂಡದ ನೇತೃತ್ವ ವಹಿಸಲಾಗಿದೆ. ನಾಲ್ಕು ಆಯಾಮಗಳಲ್ಲಿ ತನಿಖಾ ಪ್ರಕ್ರಿಯೆಗಳನ್ನು ವಿಂಗಡಿಸಲಾಗಿದ್ದು, ಪ್ರತೀ ತಂಡಕ್ಕೆ ಒಂದೊಂದು ವಿಷಯವಸ್ತುವನ್ನು ವಹಿಸಲಾಗಿದೆ ಎಂದು ಹೇಳಲಾಗಿದೆ. ದೂರುದಾರರು ನೀಡಿರುವ ದಾಖಲಾತಿಗಳ ಜೊತೆಗೆ ತನಿಖೆಗೆ ಅಗತ್ಯವಿರುವ ಹೆಚ್ಚುವರಿ ದಾಖಲೆಗಳು, ಆರೋಪಿತರ ಕರೆಸಿಕೊಂಡು ವಿಚಾರಣೆ ಮಾಡಿ ಹೇಳಿಕೆ ಪಡೆಯುವುದು, ಸಂಬಂಧಪಟ್ಟ ಪ್ರಾಧಿಕಾರ (ಮುಡಾ), ಕಂದಾಯ ಇಲಾಖೆ, ನಗರ ಮತ್ತು ಗ್ರಾಮೀಣ ಯೋಜನಾ ಘಟಕ ಹಾಗೂ ಸಂಬಂಧಪಟ್ಟ ವಿಶೇಷ ಭೂಸ್ವಾಧೀನ ಶಾಖೆಯಿಂದ ದಾಖಲಾತಿ ಪಡೆಯುವುದು ಸೇರಿದಂತೆ ಬೇರೆ ಬೇರೆ ಜವಾಬ್ದಾರಿಗಳನ್ನು ತಂಡದ ಅಧಿಕಾರಿಗಳಿಗೆ ವಿಂಗಡಿಸಲಾಗಿದೆಯಂತೆ. ತನಿಖೆಗೆ ಬೇಕಾದ ಸಾಕ್ಷ್ಯ ಸಂಗ್ರಹಿಸಿ ■6ನೇ ಪುಟಕ್ಕೆ

ಮುಡಾದಲ್ಲಿ ನನ್ನ ಅವಧಿಯಲ್ಲಿ ಏನು ನಡೆದೇ ಇಲ್ಲ; ನನಗೆ ಸಾಮಾನ್ಯ ತಲೆನೋವು, ರಿಲ್ಯಾಕ್ಸ್‌ಗೆ ಮಡಿಕೇರಿಗೆ ಹೋಗ್ತಿದ್ದೀನಿ!

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ದಿಲ್‌ದಾರ್!!

ಮೈಸೂರು, ಸೆ.28(ಬಿಎಲ್‌ಯು)– ಮುಡಾದಲ್ಲಿ ನನ್ನ ಅವಧಿಯಲ್ಲಿ ಏನು ನಡೆದೇ ಇಲ್ಲ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಪ್ರತಿಕ್ರಿಯಿಸಿದ್ದಾರೆ. ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ ನಾನಾ ತಿರುವು ಪಡೆಯುತ್ತಿರುವ ಈ ಸಂದರ್ಭದಲ್ಲಿ ಭೈರತಿ ಸುರೇಶ್ ಹೇಳಿಕೆ ಅಚ್ಚರಿ ಮೂಡಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭೇಟಿ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ನನ್ನ ಅಧಿಕಾರಾವಧಿಯಲ್ಲಿ ಯಾವ ಹಗರಣವೂ ನಡೆದಿಲ್ಲ. ಹಗರಣ ಯಾರ ಕಾಲಾವಧಿಯಲ್ಲಿ ನಡೆದಿದೆ ಎಂಬುದನ್ನು ಮೊದಲು ತಿಳಿಯಿರಿ. ನನ್ನನ್ನು ಏಕೆ ಇದರಲ್ಲಿ ಎಳೆದು ತರುತ್ತಿದ್ದೀರಾ ಎಂದು ಹೇಳಿದರು. ನನ್ನಿಂದಲೇ ಸಿದ್ದರಾಮಯ್ಯರಿಗೆ ಸಮಸ್ಯೆ ಆಗಿದೆ ಎಂಬುದರಲ್ಲಿ ಅರ್ಥವೇ ಇಲ್ಲ ಎಂದು ಇದೇ ವೇಳೆ ಸ್ಪಷ್ಟಪಡಿಸಿದರು. ನನಗೆ ತುಂಬಾ ತಲೆನೋವು ಅದಕ್ಕೆ ರಿಲ್ಯಾಕ್ಸ್‌ಗೆ ಮಡಿ ಕೇರಿಗೆ ಹೋಗುತ್ತಿದ್ದೇನೆ ಎಂದರು. ಆದರೆ, ತಕ್ಷಣ ಎಚ್ಚೆತ್ತು ತಮ್ಮ ಹೇಳಿಕೆಗೆ ಟ್ವಿಸ್ಟ್ ಕೊಟ್ಟ ಭೈರತಿ ಸುರೇಶ್, ಇದು ಮುಡಾ ತಲೆನೋವು ಅಂತ ■6ನೇ ಪುಟಕ್ಕೆ



ಸಾಕಷ್ಟು ಟೀಕೆ–ಟಿಪ್ಪಣಿ, ಅವಹೇಳನ ಸಹಿಸಿಕೊಂಡು ಗ್ಯಾರಂಟಿ ಯೋಜನೆ ಜಾರಿಗೆ ತಂದೆ

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಚ್ಚು ನುಡಿ

ಮೈಸೂರು, ಸೆ.28(ಬಿಎಲ್‌ಯು)– ಗ್ಯಾರಂಟಿ ಯೋಜನೆ ಜಾರಿಗೊಳಿಸುವ ವೇಳೆ ಬಹಳಷ್ಟು ಜನರು ನನ್ನ ಈ ನಿರ್ಧಾರದ ಬಗ್ಗೆ ಟೀಕಿಸಿದರು, ತಮಾಷೆ ಮಾಡಿದರು, ಅವಹೇಳನ ಮಾಡಿದರು. ಅದರೂ ಅದನ್ನೆಲ್ಲಾ ಸಹಿಸಿಕೊಂಡು ಪಂಚ ಗ್ಯಾರಂಟಿ ಯೋಜನೆ ಜಾರಿಗೊಳಿಸಿ ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕತೆಗೆ ಶಕ್ತಿ ತುಂಬಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶನಿವಾರ ಡಾ.ಡಿ.ಶ್ರೀನಿವಾಸ ಮಣಗಳ್ಳಿ ಅವರ ಸಂಪಾದನಾ ಕೃತಿ 'ಗ್ಯಾರಂಟಿ ಯೋಜನೆಗಳು: ಬಡವರ ಸುರಕ್ಷತೆ ಮತ್ತು ಕಲ್ಯಾಣ' ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಇಂದು ಡಾ.ಡಿ. ಶ್ರೀನಿವಾಸ ಮಣಗಳ್ಳಿ ಅವರ ಸಂಪಾದನಾ ಕೃತಿ 'ಗ್ಯಾರಂಟಿ ಯೋಜನೆಗಳು: ಬಡವರ ಸುರಕ್ಷತೆ ಮತ್ತು ಕಲ್ಯಾಣ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಬಡವರು ಅನ್ನಕ್ಕಾಗಿ ಮತ್ತೊಬ್ಬರ ಮನೆ ಬಾಗಿಲಲ್ಲಿ ನಿಲ್ಲಬಾರದೆಂದು ಅನ್ನ ಭಾಗ್ಯ ಯೋಜನೆ ಜಾರಿಗೊಳಿಸಿದೆ ಎಂದರು.

ಮತ ಅಥವಾ ಪ್ರಚಾರಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡಲಿಲ್ಲ. ಜನರ ಸಾಮಾಜಿಕ ಹಾಗೂ ಆರ್ಥಿಕ ಬವಣೆಯನ್ನು ದೂರ ಮಾಡುವ ನಿಟ್ಟಿನಲ್ಲಿ ಜಾರಿಗೊಳಿಸಿದೆ ಎಂದರು. ಜಾತಿ ವ್ಯವಸ್ಥೆ ಮುಕ್ತವಾಗಬೇಕು ಎಂದು ಬಸವಣ್ಣನವರ ಕಾಲದಿಂದಲೂ ಹೇಳುತ್ತಿದ್ದೇವೆ. ಆದರೆ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗೆ ಚಲನೆ ಸಿಕ್ಕಾಗ ಮಾತ್ರ ಜಾತಿ ವ್ಯವಸ್ಥೆ ಮುಕ್ತವಾಗುತ್ತದೆ. ಸಾರ್ವತ್ರಿಕವಾಗಿ ಆರ್ಥಿಕ ಹಾಗೂ ಸಾಮಾಜಿಕ ಚಟುವಟಿಕೆಗರಿಗೆದರಿದಾಗ ಮಾತ್ರ ಚಲನಶೀಲತೆ ದೊರೆಯುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಜನರ ಸಾಮಾಜಿಕ ಹಾಗೂ ಆರ್ಥಿಕತೆಗೆ ಶಕ್ತಿ ತುಂಬಲು ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದೇನೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಗ್ಯಾರಂಟಿ ಯೋಜನೆ ಘೋಷಣೆ ಮಾಡಿದಾಗ ಇವು ಜಾರಿ ಸಾಧ್ಯವಿಲ್ಲ ಎಂದು ಇದೇ ನರೇಂದ್ರ ಮೋದಿ ಭವಿಷ್ಯ ನುಡಿದಿದ್ದರು. ಅನುಷ್ಠಾನ ಮಾಡಿದಾಗ ಬಹಳಷ್ಟು ಕಾಲ ಉಳಿಯಲ್ಲ, ರಾಜ್ಯ ದಿವಾಳಿಯಾಗುತ್ತದೆ ಎಂದು ಟೀಕಿಸಿದರು. ಆದರೆ ಈಗ ರಾಜ್ಯದ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವ ಜೊತೆಗೆ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದೇನೆ. ಇದಕ್ಕಾಗಿ 56 ಸಾವಿರ ಕೋಟಿ ಖರ್ಚು ಮಾಡುತ್ತಿದ್ದು, ಇದು ಸಣ್ಣ ಸಾಧನೆಯಲ್ಲ ಎಂದು ಹೇಳಿದರು. ಗ್ಯಾರಂಟಿ ಯೋಜನೆಗೆ ಅಷ್ಟು ಹಣ ಖರ್ಚು ಮಾಡುವುದು ಕಷ್ಟ ಎಂದು ಗೊತ್ತಿತ್ತು. ಆದರೂ ದೃಢ ನಿರ್ಧಾರ ಮಾಡಿ ಜಾರಿಗೊಳಿಸಿದ್ದೇವೆ. ಬಹಳಷ್ಟು ಜನರು ಈ ಬಗ್ಗೆ ಟೀಕೆ ಮಾಡಿದರು, ತಮಾಷೆ ಮಾಡಿದರು, ಅವಹೇಳನ ಮಾಡಿದರು. ಆದರೆ ಅದನ್ನೆಲ್ಲಾ ಸಹಿಸಿಕೊಂಡು ಗ್ಯಾರಂಟಿ ಯೋಜನೆ ಜಾರಿಗೊಳಿಸಿದೆ ಎಂದು ತಿಳಿಸಿದರು. ಕೊರೊನಾ ಸಮಯದಲ್ಲಿ ನರೇಗಾ ಹಾಗೂ ಅನ್ನಭಾಗ್ಯ ಯೋಜನೆ ಇರದಿದ್ದರೆ ಜನರು ತುಂಬಾ ಸಂಕಷ್ಟಕ್ಕೆ ಸಿಲುಕಬೇಕಿತ್ತು ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಕೃತಿ ಸಂಪಾದಕ ಡಾ.ಡಿ.ಶ್ರೀನಿವಾಸ ಮಣಗಳ್ಳಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪಂಚ ಗ್ಯಾರಂಟಿ ಯೋಜನೆಗಳು ಇಲ್ಲದಿದ್ದರೆ ಕರ್ನಾಟಕ ಸ್ಮಶಾನವಾಗುತ್ತಿತ್ತು...!

ಪಂಚ ಗ್ಯಾರಂಟಿ ಯೋಜನೆಗಳು ಕರ್ನಾಟಕ ಸ್ಮಶಾನ ಆಗುವುದನ್ನು ತಪ್ಪಿಸಿವೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು. ಕೊರೊನಾ ಸಮಯದಲ್ಲಿ ಜನರು ಬಹಳ ಸಂಕಷ್ಟಕ್ಕೆ ಸಿಲುಕಿದ್ದರು. ಇದರ ಪರಿಣಾಮ 2018 ರಲ್ಲಿ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಇಂತಹ ಪರಿಸ್ಥಿತಿಯಲ್ಲಿ ಸಿದ್ದರಾಮಯ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆ ಜಾರಿಗೊಳಿಸಿ ರಾಜ್ಯದ ಆರ್ಥಿಕ ಸ್ಥಿತಿಯನ್ನು ಪ್ರಗತಿಪಥದತ್ತ ಕೊಂಡೊಯಿತು. ಇದರಿಂದ ಕರ್ನಾಟಕ ಸ್ಮಶಾನವಾಗುವುದನ್ನು ಪಂಚ ಗ್ಯಾರಂಟಿ ಯೋಜನೆಗಳು ತಪ್ಪಿಸಿದವು ಎಂದು ಹೇಳಿದರು. ಈ ಮೂಲಕ ಕಲ್ಯಾಣದ ಪರಿಕಲ್ಪನೆಯಲ್ಲಿ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಮಾಡಲಾಗಿದೆ ಎಂದು ಪ್ರೊ. ಬಿಳಿಮಲೆ ಹೇಳಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ನಾನೇನೇ ಪ್ರಶ್ನೆ ಕೇಳಿದರೂ ಫಟಾಫಟ್ ಅಂತ ಉತ್ತರ ಕೊಡಿ. ಭಾರತದ ರಾಜಧಾನಿ ಯಾವುದು?

ವಿದ್ಯಾರ್ಥಿ : ಫಟಾಫಟ್!

ಮೈಸೂರು ಮಿತ್ರ

ಭಾನುವಾರ, 29 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಹಣ ಎಂದರೆ ಉಪ್ಪು ಇದ್ದಂತೆ ಅದನ್ನು ತುಸುವೇ ನಾಲಿಗೆಯ ಮೇಲಿರಿಸಿಕೊಂಡರೆ ರುಚಿ, ಹೆಚ್ಚಾಗಿ ತಿಂದರೆ ದಾಹ – ಕೆ. ಶಿವರಾಮ ಕಾರಂತರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತಿಗೆ ಸಿಕ್ಕಿದರೆ ಮಳೆಗೆ ಸಿಕ್ಕಂತೆ.

ನಿಮ್ಮ ಪತ್ರಗಳು

ವಿದ್ಯಾರ್ಥಿಗಳಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸಿ



ಮಾನ್ಯರೆ,

ಇತ್ತೀಚೆಗೆ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿದ್ದು, ವಿದ್ಯಾರ್ಥಿಗಳಿಗೆ ಬಸ್‌ನಲ್ಲಿ ಸ್ಥಳಾವಕಾಶವೇ ಇಲ್ಲದೆ ಸಂಚರಿಸಲು ಪರದಾಡುವಂತಾಗಿದೆ.

ರಾಜ್ಯ ಸರ್ಕಾರದ ಶಕ್ತಿ ಯೋಜನೆಯಡಿ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಿರುವ ಪರಿಣಾಮ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರೇ ತುಂಬಿರುತ್ತಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಬಸ್‌ನಲ್ಲಿ ಸ್ಥಳಾವಕಾಶವೇ ಇಲ್ಲದೆ ಬಾಗಿಲಲ್ಲಿ ನೇತಾಡಿಕೊಂಡು ಪ್ರಯಾಣಿಸಬೇಕಿದೆ.

ಅಲ್ಲದೆ ಕೆಲ ನಿಲ್ದಾಣಗಳಿಗೆ ಬಸ್‌ಗಳು ಬರುವಷ್ಟರಲ್ಲಿಯೇ ಪ್ರಯಾಣಿಕರಿಂದ ತುಂಬಿಕೊಂಡಿರುತ್ತವೆ. ಇದರಿಂದಾಗಿ ಕೆಲ ನಿಲ್ದಾಣಗಳಲ್ಲಿ ಬಸ್‌ಗಳು ನಿಲ್ಲಿಸದೆ ಮುಂದೆ ಸಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಬಸ್ ಸಿಗದೆ ಅವರು ಸರಿಯಾದ ಸಮಯಕ್ಕೆ ಶಾಲಾ ಕಾಲೇಜುಗಳಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಇನ್ನು ಅಶ್ವಮೇಧ ಹಾಗೂ ಕೆಲ ಎಕ್ಸ್‌ಪ್ರೆಸ್ ಬಸ್‌ಗಳು 'ಸ್ಟೂಡೆಂಟ್ ಪಾಸ್ ನಾಟ್ ಅಲೌಡ್' ಎಂದು ಬೋರ್ಡ್ ಹಾಕಿಕೊಂಡು ಸಂಚರಿಸುತ್ತಿದ್ದು, ಅವು ಖಾಲಿ ಇದ್ದರೂ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತಿಲ್ಲ.

ಆದ್ದರಿಂದ ಸರ್ಕಾರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿಗಳಿಗಾಗಿಯೇ ಪ್ರತ್ಯೇಕ ಬಸ್ ವ್ಯವಸ್ಥೆ ಮಾಡಲಿ, ಇಲ್ಲದೇ ಅಶ್ವಮೇಧ ಸೇರಿದಂತೆ ಎಲ್ಲಾ ಬಸ್ ಗಳಲ್ಲಿಯೂ ವಿದ್ಯಾರ್ಥಿಗಳ ಪಾಸ್ ಅನುಮತಿಸಲಿ.

–ಚೇತನ್. ಎನ್ ಆರ್, ಪದವಿ ವಿದ್ಯಾರ್ಥಿ, ನಗರ್ಲೆ, ನಂಜನಗೂಡು.

ಕಡ್ಡಾಯವಾಗಿ ನೀರಿನ ಮೀಟರ್ ಅಳವಡಿಸಿ

ಮಾನ್ಯರೆ,

ಮೈಸೂರಿನ ಕೆಲವು ಕಂದಾಯ ಬಡಾವಣೆಗಳಲ್ಲಿ ನೀರಿನ ಮೀಟರ್ ಅಳವಡಿಸದೇ ಹಾಗೂ ನೀರನ್ನು ಮಿತವಾಗಿ ಬಳಸದೇ, ಪ್ರತಿದಿನ ಮುಂಜಾನೆಯಾದರೆ ಸಾಕು ತಮ್ಮ ತಮ್ಮ ವಾಹನಗಳನ್ನು ರಸ್ತೆಯಲ್ಲೇ ನಿಲ್ಲಿಸಿ ಅತಿ ಹೆಚ್ಚು ನೀರನ್ನು ಬಳಸಿ ವಾಹನಗಳನ್ನು ಸ್ವಚ್ಛಗೊಳಿಸುತ್ತಾರೆ. ಅದರ ಜೊತೆಗೆ ರಸ್ತೆಯನ್ನು ಸಹ ನೀರಿನಿಂದಲೇ ತೊಳೆಯುತ್ತಾರೆ. ಇದರಿಂದ ಅತೀ ಹೆಚ್ಚು ನೀರು ವ್ಯರ್ಥವಾಗುವುದರ ಜೊತೆಗೆ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೂ ಕಿರಿ ಕಿರಿ ಮತ್ತು ಇದರಿಂದ ಚೆನ್ನಾಗಿರುವ ಡಾಂಬರು ರಸ್ತೆಯು ಹಾಳಾಗುತ್ತಿದೆ. ನೀರು ಅಮೂಲ್ಯ ಅದನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯ. ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ನೀರಿನ ವಿಷಯದಲ್ಲಿ ಯಾವುದೇ ರಾಜಿ ಇಲ್ಲದೆ ಮೀಟರ್ ಅಳವಡಿಸಲು ಮನಸ್ಸು ಮಾಡಲಿ.

–ಯಾತನೆ ಅನುಭವಿಸಿದ ನಾಗರಿಕರು, ಯರಗನಹಳ್ಳಿ

ದಾಖಲೆಗಳೇ ನಾಪತ್ತೆ : ಪ್ರಾಧಿಕಾರದ ಸಿಬ್ಬಂದಿಗಳೂ ತಪ್ಪಿತಸ್ಥರೇ !

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೇಲೆ ಅಪರಾಧಿಕ ಪ್ರಕರಣ ದಾಖಲಾಗಿದ್ದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಾಖಲೆಗಳೇ ನಾಪತ್ತೆಯಾಗಿದೆಯೆನ್ನುವ ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿದೆ. ಅಪರಾಧಿಕ ಪ್ರಕರಣಗಳಲ್ಲಿ ದಾಖಲೆಗಳೇ ನಾಪತ್ತೆಯಾಗಲು ಪ್ರಾಧಿಕಾರದ ಸಿಬ್ಬಂದಿಗಳೇ ಕಾರಣ.

ಎಂತಹ ಸಿಬ್ಬಂದಿಗಳಿದ್ದಾರೆಂದರೆ ಬಿ.ಎನ್.ಕೆಂಗೇಗೌಡರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅವರು ಸಹಿ ಮಾಡಿಟ್ಟಿದ್ದ ಪ್ರಾಧಿಕಾರಕ್ಕೆ ಸೇರಿದ ಚೆಕ್‌ಗಳನ್ನೇ ದುರುಪಯೋಗ ಮಾಡಿದ ಉದಾಹರಣೆಯುಂಟು. ಈಗಲೂ ಸಾರ್ವಜನಿಕರ ದೂರುಗಳು ಸಿಬ್ಬಂದಿಯ ಕಾರ್ಯ ವೈಖರಿಯನ್ನು ಎತ್ತಿ ತೋರುತ್ತಿದೆ. ಸಾವಿರಾರು ರೂಪಾಯಿಗಳ ಲಂಚವಿಲ್ಲದೇ ಇಲ್ಲಿ ಯಾವುದೇ ಕೆಲಸವಾಗುವುದಿಲ್ಲ. ಲೋಕಾಯುಕ್ತ ಪೊಲೀಸರು ಪ್ರಾಧಿಕಾರದ ಸಿಬ್ಬಿಬಂದಿಯ ಮೇಲೂ ಕ್ರಮ ಜರುಗಿಸಲಿ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.

ನಾಗವಾಲ ಪಂಚಾಯಿತಿಯ ಸೂರಪ್ಪನ ಕೆರೆ ಸಂರಕ್ಷಣೆಗೆ ಮನವಿ



ಮಾನ್ಯರೆ,

ಮೈಸೂರು ತಾಲೂಕು ನಾಗವಾಲ ಪಂಚಾಯಿತಿಯ ಸೂರಪ್ಪನ ಕೆರೆಯನ್ನು ಒತ್ತುವರಿ ಮಾಡಿಕೊಂಡು ಜೆಸಿಬಿ ಮೂಲಕ ಬಗೆದಿರುವುದರಿಂದ ನೀರು ತುಂಬಿದಾಗ ಕೆರೆ ಏರಿ ಒಡೆದು ಕೋಟ್ಯಾಂತರ ರೂಪಾಯಿ ಮೌಲ್ಯದ ಬೆಳೆ ನಷ್ಟವಾಗುತ್ತಿದೆ. ಇದಕ್ಕೆ ಯಾರು ಹೊಣೆ? ಇದು ಕಾನೂನುಬಾಹಿರ ಚಟುವಟಿಕೆಯಾಗಿದೆ. ಗ್ರಾಮಸ್ಥರು ಅಕ್ರಮ ಚಟುವಟಿಕೆಯನ್ನು ತಡೆಯುವಂತೆ ಪಿಡಿಓ, ತಹಸಿಲ್ದಾರ್, ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದ್ದರೂ ಇಲ್ಲಿ ವರೆಗೆ ಯಾರು ಕ್ರಮ ಕೈಗೊಳ್ಳಲು ಬರುತ್ತಿಲ್ಲ. ಇದಕ್ಕೆ ಸಂಬಂಧಪಟ್ಟ ಜಿಲ್ಲಾ ಆಡಳಿತವು ಮುಂದೆ ಬಂದು ಅಕ್ರಮ ಒತ್ತುವರಿ ತೆರವುಗೊಳಿಸಿ ಸೂರಪ್ಪನ ಕೆರೆಯನ್ನು ರಕ್ಷಿಸ ಬೇಕೆಂದು ಗ್ರಾಮಸ್ಥರ ಮನವಿ.

– ನಾಗವಾಲ ಪಂಚಾಯಿತಿ ಗ್ರಾಮಸ್ಥರು, ಮೈಸೂರು.

ನಾದ ಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಕುತೂಹಲಕಾರಿ ಕಂದನಿಗೆ ಬಂದ ಓಲೆ...



> ಪಠ್ಯ ಪುಸ್ತಕದ ಮೂಲಕ ಅದೆಂತಹ ಬದಲಾವಣೆಗಳನ್ನು ತರಬಹುದು ಎಂಬುದನ್ನು ಯೋಚಿಸಿದಾಗ, ಇಂದಿನ ಪಠ್ಯಗಳಲ್ಲಿನ ವಿಷಯಗಳ ಆಯ್ಕೆ, ತಿರುಚಿದ ಇತಿಹಾಸ, ಪಠ್ಯಗಳಲ್ಲಿನ ತಪ್ಪುಗಳು ಇತ್ಯಾದಿಗಳನ್ನು ಗಮನಿಸಿದಾಗ, ಅದರ ದುರುಪಯೋಗವೇ ಹೆಚ್ಚಾಗಿದೆ ಎಂದು ಅನಿಸದೇ ಇರದು.

ಹೀಗೇ ಕುಳಿತುಕೊಂಡಿದ್ದಾಗ, ಪೋಸ್ಟಿನಲ್ಲಿ ಒಂದು ಚಿಕ್ಕ ಪ್ಯಾಕೆಟ್ ಬಂದಿದ್ದು ಕಣ್ಣಿಗೆ ಬಿತ್ತು. ಅದೂ ನನ್ನ ನಾಕು ವರುಷದ ಮೊಮ್ಮಗನ ಹೆಸರಿಗೆ ! ಈ ಪೋರನಿಗೆ ಪೋಸ್ಟ್ ಕಳುಹಿಸಿರುವವರು ಅದ್ಯಾರಪ್ಪ ಎಂದು ಆಶ್ಚರ್ಯದಿಂದ ತೆಗೆದು ನೋಡಿದಾಗ ಅಚ್ಚರಿ ಕಾದಿತ್ತು. ಸುಮಾರು ಹತ್ತು ಹದಿನೈದು ದಿನಗಳ ಹಿಂದೆಯಷ್ಟೆ ನಾವೆಲ್ಲರೂ ಕ್ಯಾಲಿಫೋರ್ನಿಯಾದಲ್ಲಿ ಇರುವ ಡಿಸ್ನಿಲ್ಯಾಂಡಿಗೆ ಭೇಟಿ ಕೊಟ್ಟಿದ್ದೆವು. ಆ ಕಿನ್ನರ ಲೋಕ ಎನ್ನಿ, ಭ್ರಮಾಲೋಕ ಎನ್ನಿ, ಅತ್ಯದ್ಭುತ ಎನ್ನಿ ಐದಾರು ದಿನಗಳ ಕಾಲ ಅಲ್ಲಿದ್ದರೂ ಮುಗಿಯಲಾರದಷ್ಟು ಮನರಂಜನೆ ಪಡೆದು ಬಂದಿದ್ದೆವು. ಅಲ್ಲಿ ಭೇಟಿ ಕೊಡುವ ಬೇರೆ ಬೇರೆ ದೇಶದ ಲಕ್ಷಾಂತರ ಮಂದಿಯನ್ನು ನೋಡಿ, ಅಲ್ಲಿ ತಾನೇ ತಾನಾಗಿ ಕಂಡು ಬರುತ್ತಿದ್ದ ಪರ ಸಹಿಷ್ಣುತೆ, ತಾಳ್ಮೆ, ಶಿಸ್ತು, ದಯೆ, ಈ ಎಲ್ಲ ಗುಣಗಳನ್ನೂ ಮೆಚ್ಚಿದ್ದೆ. ಆ ಗೌಜಿನಲ್ಲಿ ಈ ಪೋರ ಆಸೆಯಿಂದ ಕೊಂಡುಕೊಂಡಿದ್ದ ಪೂ ಎಂಬ ಕರಡಿಯ ಬೊಂಬೆ ಕಳೆದು ಹೋಗಿತ್ತು. ಅದು ಅವನ ಮೆಚ್ಚಿನ ಕಾಮಿಕ್ ಪಾತ್ರವಾಗಿತ್ತು. ಹೀಗಾಗಿ ಅವನ ದುಃಖವನ್ನು ನೋಡಲಾಗದೇ ಅದನ್ನು ಕೊಂಡು ಕೊಂಡ ಜಾಗಕ್ಕೇ ಹೋಗಿ, ಹೀಗಾಗಿದೆ ಎಂದು ಹೇಳಿದಾಗ, ಅವರು ಕೂಡಲೇ ಅವನಿಗೆ ಮತ್ತೊಂದು ಬೊಂಬೆಯನ್ನು ಕೊಟ್ಟಿದ್ದರು. ಅವರ ಉದಾರತೆಯನ್ನು ಮನದಲ್ಲೇ ಮೆಚ್ಚಿದ್ದೆ. (ಅವರು ತೆಗೆದುಕೊಳ್ಳುವ ದುಬಾರಿ ಶುಲ್ಕಕ್ಕೆ ಹೀಗೆ ಮಾಡುವುದೆಲ್ಲ ಗಿಮಿಕ್ಸ್ ಎಂದೂ ಮನದಲ್ಲಿ ಆಲೋಚನೆ ಮಿಂಚಿ ಮರೆಯಾಗಿತ್ತು). ಆದರೆ ಈಗ ಬಂದ ಪೋಸ್ಟಿನಲ್ಲಿ ಅವನ ಕಳೆದು ಹೋದ ಗೊಂಬೆ ಸಿಕ್ಕಿದೆಯೆಂದು, ಅದನ್ನು ಅವನಿಗೆ ಹಿಂದಿರುಗಿಸಿದ್ದರು ! ಆ ಲಕ್ಷಾಂತರ ಮಂದಿ ತುಂಬಿದ್ದ ಜಾಗದಲ್ಲಿ ಅದು ಸಿಕ್ಕಿತಾದರೂ ಹೇಗೆ? ಅದನ್ನು ಪ್ರಾಮಾಣಿಕವಾಗಿ ಅವನ ವಿಳಾಸಕ್ಕೆ ಹಿಂದಿರುಗಿಸುವ ಮಕ್ಕಳ ಬಗೆಗಿನ ಈ ಅನನ್ಯ ಕಾಳಜಿಗೆ ಏನೆನ್ನಬೇಕೋ ತಿಳಿಯದೆ, ಯೋಚಿಸುತ್ತಾ ಕುಳಿತೆ. ಅದನ್ನು ಅವರು ಕಳುಹಿಸದೇ ಇದ್ದಿದ್ದರೂ ಏನೂ ಆಗುತ್ತಿರಲಿಲ್ಲ. ಆದರೆ, ಕಳುಹಿಸಿ ತಮ್ಮ ಒಳ್ಳೆಯ ಗುಣವನ್ನು ಅವರು ತೋರಿದ್ದರು.

ಯಾವುದೇ ಪರಸ್ಥಳಕ್ಕೆ ಹೋದಾಗ, ಅಲ್ಲಿಯ ಜನರ ಸ್ವಭಾವ, ಆಹಾರ, ಉಡುಪು, ರೀತಿ–ರಿವಾಜು, ನಡವಳಿಕೆ ಇತ್ಯಾದಿ ಅವರ ಸಂಸ್ಕೃತಿಯನ್ನು ಗಮನಿಸುವುದು ಬಹುಶಃ ಎಲ್ಲರಿಗೂ ಸಹಜ ಎಂದು ಅಂದುಕೊಳ್ಳುತ್ತೇನೆ. ಅದರಲ್ಲೂ ವಿದೇಶದಲ್ಲಿ ಈ ಗಮನಿಸುವಿಕೆ ತುಸು ಹೆಚ್ಚೇ ಇರಬಹುದು. ಜನರ ಭಾಷೆ, ಬಣ್ಣ, ನಡವಳಿಕೆ ಎಲ್ಲದರಲ್ಲೂ ವ್ಯತ್ಯಾಸ ಸ್ವಲ್ಪ ಹೆಚ್ಚೇ ಇರುವುದು ಇದಕ್ಕೆ ಕಾರಣವಾಗಿರಬಹುದು. ಅಂತೆಯೇ ಅವರ ದೃಷ್ಟಿಯಲ್ಲಿ ನಾವೂ ಕುತೂಹಲದ ವಸ್ತು ಆಗಿರುತ್ತೇವೆ ಎಂಬುದನ್ನೂ ಸೂಕ್ಷ್ಮವಾಗಿ ಗಮನಿಸಿದಾಗ ನಾವು ನಮ್ಮ ದೇಶವನ್ನು ಪ್ರತಿನಿಧಿಸುತ್ತಿದ್ದೇವೆ ಎಂಬ ಎಚ್ಚರಿಕೆಯೂ ಮನದಲ್ಲಿ ಉಂಟಾಗುತ್ತದೆ–ಉಂಟಾಗಬೇಕು. ಮೂಲಭೂತವಾಗಿ ಮನುಷ್ಯರೆಲ್ಲರೂ ಒಂದೇ ಹೌದಾದರೂ ಅವರ ಆಲೋಚನೆ, ದೃಷ್ಟಿಕೋನ, ಪ್ರತಿಕ್ರಿಯಿಸುವ ರೀತಿ ಇವುಗಳಲ್ಲಿ ವ್ಯತ್ಯಾಸ ಕಂಡುಬಂದೇಬರುತ್ತದೆ. ಒಂದೇ ಮೂಗು, ಬಾಯಿ, ಕೈಕಾಲು, ಸರಿ. ಆದರೆ ನಡವಳಿಕೆ ಅದೇ ಅಲ್ಲವೆ ನಮ್ಮನ್ನು ಒಬ್ಬರಿಂದ ಒಬ್ಬರನ್ನು ಬೇರ್ಪಡಿಸುವುದು? ನಮ್ಮನ್ನು ರೂಪಿಸುವುದೂ ಅದೇ ಚಿಂತನೆಗಳಲ್ಲವೆ ಬೇವು ಬಿತ್ತಿ ಮಾವು ಬೆಳೆಯಲಾಗುತ್ತದೆಯೇ? ಮೊಳಕೆಯಲ್ಲಿಯೇ ಸರಿಯಾದ ಪೋಷಣೆ ಸಸ್ಯಗಳಿಗೆ ಹೇಗೋ ಹಾಗೇ ಮನುಷ್ಯರಿಗೂ–ಮಕ್ಕಳಿಗೂ ಬೇಕೇಬೇಕು. ನಾವು ಏನಾಗುತ್ತೇವಿ ಎಂಬುದನ್ನು ನಿರ್ಧರಿಸುವುದು ಅದೇ. ಹೀಗಾಗಿ ಅದೇ ಬಹಳ ಮಹತ್ವದ್ದು. ಅದರ ಮಹತ್ವವನ್ನು ಅರಿತ ಸರಕಾರ ಮಕ್ಕಳ ಪೋಷಣೆಗೆ, ಮೌಲ್ಯಯುತ ವಿದ್ಯಾಭ್ಯಾಸಕ್ಕೆ, ಆರೋಗ್ಯಕ್ಕೆ ಪ್ರಾಮುಖ್ಯತೆಯನ್ನು ಕೊಡಲೇಬೇಕು. ಇಲ್ಲದಿದ್ದಲ್ಲಿ ಅದು ಬೇಜವಾಬ್ದಾರಿ ಎಂದೆನಿಸಿಕೊಳ್ಳುತ್ತದೆ. ಸರಕಾರದ್ದಷ್ಟೇ ಅಲ್ಲ ಅದು ಹೆತ್ತವರ, ಶಿಕ್ಷಕರ, ಹಿರಿಯರ, ಮಠಾಧೀಶರ, ಜನ ನಾಯಕರ ಜವಾಬ್ದಾರಿಯೂ ಹೌದು.

ಜನಸಂಖ್ಯೆಯ ತೀವ್ರ ಹೆಚ್ಚಳವು ಎಲ್ಲ ಸಮಸ್ಯೆಗಳಿಗೆ ಮೂಲ ಎಂದನಿಸಿಕೊಳ್ಳುತ್ತದೆ. ಬಡತನ, ಅನಕ್ಷರತೆ, ರೋಗ ರುಜಿನ, ಸ್ವಚ್ಛತೆಯ ಕೊರತೆ, ಕ್ರೌರ್ಯ, ಅಪರಾಧ ಎಲ್ಲವೂ ಒಂದಕ್ಕೊಂದು ತಳಕು ಹಾಕೊಕೊಂಡೇ ಬೆಳೆಯುತ್ತವೆ. ಇವೆಲ್ಲದರ ರಿಂಗಣದ ಮುಂದೆ ನೈತಿಕತೆ ಮುಸುಕು ಹಾಕಿಕೊಂಡು ಕುಳಿತಿರುತ್ತದೆ. ವಿವೇಕಾನಂದರು ಹಸಿದ ಹೊಟ್ಟೆಗೆ ಮೊದಲು ಅನ್ನ ನೀಡಿ, ವೇದಾಂತ ವನ್ನಲ್ಲ ಎಂದರು. ನಿಜ. ಈಗ ನನ್ನ ಭಾರತವು ನಿಧಾನವಾಗಿಯಾದರೂ ತನ್ನ ಇರವನ್ನು ಜಗತ್ತಿಗೆ ತಿಳಿಯಪಡಿಸುತ್ತಿದೆ. ತನ್ನ ಆತ್ಮವಿಶ್ವಾಸವನ್ನು ಮರಳಿ ಪಡೆಯುತ್ತಿದೆ. ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿದೆ. ಅಂತೆಯೇ ಜನರ ನಡವಳಿಕೆ, ಆಲೋಚನೆ ಮತ್ತು ಕಾರ್ಯ ವಿಧಾನವೂ ಬದಲಾಗುತ್ತಿದೆ. ಹಿಂದೂಗಳ ಜನಸಂಖ್ಯೆಯಂತೂ ಹತೋಟಿಗೆ ಬಂದಿದೆ ಎಂದು ಅಂದುಕೊಳ್ಳುತ್ತೇನೆ. (ಇದು ಆಗಿದ್ದು ಅದೆಷ್ಟು ಸರಿ ಎಂಬ ಪ್ರಶ್ನೆಯೂ ಆಗಾಗ್ಗೆ ಕಾಡುತ್ತಲೇ ಇರುತ್ತದೆ). ಅನಕ್ಷರಸ್ಥರಲ್ಲಿ ಅಕ್ಷರ ಜ್ಞಾನ ಮೂಡುತ್ತಿದೆ. ಹಳ್ಳಿಗಳಲ್ಲಿ ಮೊದಲಿನ ವಾತಾವರಣ ಇಲ್ಲ. ಅಲ್ಲಿ ವಾಹನಗಳ ಸೌಕರ್ಯ, ವಿದ್ಯುದ್ದೀಪ, ಕುಡಿಯುವ ನೀರು, ಶಾಲೆ, ಆಸ್ಪತ್ರೆ, ಅಂಗಡಿ, ಪಂಚಾಯತಿ ಎಲ್ಲವೂ ಇರುತ್ತದೆ. ರೈತರು ರೇಡಿಯೋ ಕೃಷಿ ಕಾರ್ಯಕ್ರಮದ ಮೂಲಕ ತಮ್ಮ ಸಮಸ್ಯೆ ಗಳನ್ನು ಹಂಚಿಕೊಳ್ಳುತ್ತಾರೆ. ಹಳ್ಳಿಗರು ಈಗ ಹಿಂದಿನಂತೆ ಅಮಾಯಕರು ಖಂಡಿತಾ ಅಲ್ಲ. ಜಗತ್ತಿನ ಆಗುಹೋಗುಗಳ ಬಗ್ಗೆ ಅವರಲ್ಲಿ ಅರಿವು ಮೂಡಿದೆ. ತಮ್ಮ ದನಿಯನ್ನು ಎತ್ತರಿಸಿ, ಸರಕಾರದ ಗಮನವನ್ನು ತಮ್ಮೆಡೆಗೆ ಸೆಳೆಯಲೂ ಅವರು ಬಲ್ಲರು. ಅನ್ನದಾತನ ಮಹತ್ವ ಏನೆಂಬುದನ್ನು ಸಮಯ ಬಂದಾಗ ತೋರಲೂಬಲ್ಲರು.

ಈ ಉತ್ತಮ ಬದಲಾವಣೆಗಳೆಲ್ಲವೂ ಸ್ವಾಗತಾರ್ಹವಾದವುಗಳೇ. ಆದರೆ ನಾವು ನಮ್ಮ ಭಾರತಕ್ಕೇ ವಿಶಿಷ್ಟವಾದ, ನಮ್ಮ ಸಂಸ್ಕೃತಿಯ ಅನಿವಾರ್ಯ ಅಂಗವಾದ ಭಾರತೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರಲ್ಲಿ, ಮಕ್ಕಳಿಗೆ ಅದನ್ನು ರವಾನಿಸುವಲ್ಲಿ ತಪ್ಪುತ್ತಿದ್ದೇವೆ ಎಂದು ಅನಿಸುವುದಿಲ್ಲವೇ ವಿದೇಶೀ ಸಂಸ್ಕೃತಿಯನ್ನು ಕಣ್ಣುಮುಚ್ಚಿ ಅನುಸರಿಸುವ ದಾಸ್ಯದಿಂದ ನಾವಿನ್ನೂ ಹೊರಬಂದಿಲ್ಲವೇನೋ ಎಂದು ಹತ್ತುಹಲವು ಬಾರಿ ನನಗೆ ಅನಿಸಿದುದುಂಟು. ಅದರಲ್ಲೂ ಶಿಕ್ಷಣ ಕ್ರಮದಲ್ಲಿ, ಶಿಕ್ಷಣದ ಪ್ರಮುಖ ಅಂಗವಾದ ಪಠ್ಯ ಪುಸ್ತಕಗಳಲ್ಲಿ. ಪಠ್ಯ ಪುಸ್ತಕದ ಮೂಲಕ ಅದೆಂತಹ ಬದಲಾವಣೆಗಳನ್ನು ತರಬಹುದು ಎಂಬುದನ್ನು ಯೋಚಿಸಿದಾಗ, ಇಂದಿನ ಪಠ್ಯಗಳಲ್ಲಿನ ವಿಷಯಗಳ ಆಯ್ಕೆ, ತಿರುಚಿದ ಇತಿಹಾಸ, ಪಠ್ಯಗಳಲ್ಲಿನ ತಪ್ಪುಗಳು ಇತ್ಯಾದಿಗಳನ್ನು ಗಮನಿಸಿದಾಗ, ಅದರ ದುರುಪಯೋಗವೇ ಹೆಚ್ಚಾಗಿದೆ ಎಂದು ಅನಿಸದೇ ಇರದು. ಭಾರತದ ಆಗಿಹೋದ ವೀರಪುರುಷರ ನೈಜ ಚರಿತ್ರೆಯನ್ನು ಮಕ್ಕಳಿಗೆ ತಿಳಿಯಪಡಿಸಬೇಕಾದುದು ಇಂದಿನ ಜರೂರು ಎಂದೇ ನನ್ನ ಭಾವನೆ ನನ್ನೆದೆಯ ಭಾವನೆಯು ಮುಗಿಯದ ಹಾಡು..

ಲೋಕಾಯುಕ್ತಕ್ಕೆ ತಮಗೆ ಬೇಕಾದವರನ್ನೇ ನೇಮಕ ಮಾಡಿಕೊಂಡಿದ್ದಾರೆ; ಸತ್ಯ ಹೊರ ಬರುತ್ತಾ...!?

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಪ್ರಶ್ನೆ

ಹುಬ್ಬಳ್ಳಿ, ಸೆ.28– ಮುಡಾ ಹಗರಣದಲ್ಲಿ ಸಿಲುಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೈತಿಕತೆ ಇದ್ದರೆ ರಾಜೀನಾಮೆ ಕೊಟ್ಟು ತನಿಖೆ ಎದುರಿಸಬೇಕು. ಇಲ್ಲವೇ, ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಒತ್ತಾಯ ಮಾಡಿದರು.

ಮುಡಾ ಹಗರಣದ ಎ1 ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಆಗಿದ್ದರಿಂದ ಇಲ್ಲಿಯ ಅಧಿಕಾರಿಗಳು ಅವರ ವಿರುದ್ಧ ಸರಿಯಾದ ತನಿಖೆ ಮಾಡಲ್ಲ. ಪರಿಣಾಮ ಸತ್ಯ ಹೊರ ಬರುವುದಿಲ್ಲ ಎಂದು ಜೋಶಿ ಹೇಳಿದರು.

ಶುದ್ಧ ಹಸ್ತ ಮೋದಿ ಅವರತ್ತ ಬೆರಳು ತೋರಿ ನಗೆಪಾಟಲಿಗೆ ಗುರಿಯಾಗಬೇಡಿ, ಸುಮ್ಮನೆ ರಾಜೀನಾಮೆ ನೀಡಿ ಎಂದು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

ಇತ್ತೀಚೆಗಷ್ಟೇ ಲೋಕಾಯುಕ್ತಕ್ಕೆ ತಮಗೆ ಬೇಕಾದವರನ್ನು ನೇಮಕ ಮಾಡಿಕೊಂಡಿದ್ದಾರೆ. ಹೀಗಿರುವಾಗ ಸಿಎಂ ವಿರುದ್ಧ ಲೋಕಾಯುಕ್ತ ಎಸ್ಪಿ ಆಗಲೀ, ಕರ್ನಾಟಕ ಪೊಲೀಸ್ ಆಗಲೀ ಪಾರದರ್ಶಕ ತನಿಖೆ ನಡೆಸುವುದು ಅಸಾಧ್ಯದ ಮಾತು. ಹಾಗಾಗಿ ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ತನಿಖೆ ಎದುರಿಸಬೇಕು. ಇಲ್ಲವೇ ಸಿಬಿಐಗೆ ವಹಿಸಬೇಕು ಎಂದು ಜೋಶಿ ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಂಧನ ಕಾನೂನಿಗೆ ಬಿಟ್ಟ ವಿಷಯ.



ಪ್ರಹ್ಲಾದ್ ಜೋಶಿ

ಆದರೆ, ಅವರದ್ದೇ ಸರ್ಕಾರ ಇರುವುದರಿಂದ ಪ್ರಕರಣ ಸುದೀರ್ಘವಾಗಲಿದೆ. ನಮ್ಮ ಹೋರಾಟವೂ ಮುಂದುವರಿಯಲಿದೆ. ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರ ನೈತಿಕವಾಗಿ ದಿವಾಳಿ ಎದ್ದಿದೆ. ನಿರ್ಲಜ್ಜೆಯ ಸಂಸ್ಕೃತಿ, ಸರ್ಕಾರ ಇವರದ್ದಾಗಿದೆ ಎಂದು ಜೋಶಿ ಕಿಡಿಕಾರಿದರು.

ವಾದ್ರಾ, ಭೂ ಅಕ್ರಮ ಹೀಗೆ ಸಾಕಷ್ಟು ಪ್ರಕರಣಗಳನ್ನು ಹೊತ್ತಿರುವ ಕಾಂಗ್ರೆಸ್ ಹೈಕಮಾಂಡೇ ಸಂಪೂರ್ಣ ಭ್ರಷ್ಟಾಚಾರದಲ್ಲಿ ತೊಡಗಿದೆ. 2011ರಲ್ಲಿ ರಾಜ್ಯಪಾಲರು ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡಿದ್ದಾರೆ ಎಂದು ಇದೇ ಕಾಂಗ್ರೆಸ್ ನಾಯಕರು ಹೇಳಿದ್ದರು ಎಂದು ಜೋಶಿ ಲೇವಡಿ ಮಾಡಿದರು.

ಈಗ ತಮ್ಮ ವಿರುದ್ಧ ತನಿಖೆಗೆ ಅನುಮತಿ ನೀಡಿದಾಕ್ಷಣ ರಾಜ್ಯಪಾಲರು ಸಂವಿಧಾನ ಮೀರಿದ್ದಾರೆ ಎನ್ನುತ್ತಿದ್ದಾರೆ. ಇದು ಕಾಂಗ್ರೆಸ್ಸಿಗರ ಅವಕಾಶವಾದಿತನ ಹಾಗೂ ಸಮಯ ಸಾಧಕ ಪ್ರವೃತ್ತಿಯನ್ನು ತೋರುತ್ತದೆ ಎಂದು ಸಚಿವ ಜೋಶಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡರು.

2011ರಲ್ಲಿ ಗೋಧ್ರಾ ಘಟನೆ ಆದಾಗ ಸಿಎಂ ಸಿದ್ದರಾಮಯ್ಯ ಏಕೆ ಮೋದಿ ಅವರ ವಿರುದ್ಧ ಧ್ವನಿ ಎತ್ತಲಿಲ್ಲ ಎಂದು ಪ್ರಶ್ನಿಸಿದ ಪ್ರಹ್ಲಾದ್ ಜೋಶಿ, ಆಗ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರನ್ನು ಅದರಲ್ಲಿ ಸಿಲುಕಿಸುವ ಪ್ರಯತ್ನ ಮಾಡಿದ್ದು ಕಾಂಗ್ರೆಸ್ ಎಂದು ಆರೋಪಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಸರ್ವರನ್ನೂ ಸಾಮಾಜಿಕ ನ್ಯಾಯದಲ್ಲೇ ಕಾಣುತ್ತಿದ್ದಾರೆ. ಗೋಧ್ರಾ, ಗೋಧ್ರೋತ್ತರ ಘಟನೆಗಳಲ್ಲಿ ಗುಜರಾತಿನ ಅಂದಿನ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರ ಪಾತ್ರವೇ ಇಲ್ಲವೆಂದು ಕೇಂದ್ರ ಜೋಶಿ ಸ್ಪಷ್ಟಪಡಿಸಿದರು.

ಮುಡಾ ಹಗರಣದ ಚಕ್ರವ್ಯೂಹದಲ್ಲಿ ಸಿಲುಕಿ ಹತಾಶರಾಗಿರುವ ಸಿಎಂ ಸಿದ್ದರಾಮಯ್ಯ ಅವರು ವಿವೇಚನಾ ರಹಿತರಾಗಿ ಏನೇನೋ ಬಡಬಡಿಸುತ್ತಿದ್ದಾರೆ. ಪ್ರಧಾನಿ ಮೋದಿ ಅವರು ಹಗಲಿರುಳು ಭ್ರಷ್ಟಾಚಾರ ತಡೆ ಹಾಗೂ ದೇಶದ ಅಭಿವೃದ್ಧಿಗೆ ಪ್ರಥಮಾದ್ಯತೆ ನೀಡಿ ಶ್ರಮಿಸುತ್ತಿದ್ದಾರೆ. ಇಂಥವರ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ತಮಗೇ ಇಲ್ಲ ಎಂದು ಸಿಎಂ ವಿರುದ್ಧ ಜೋಶಿ ಕಿಡಿಕಾರಿದ್ದಾರೆ.

ಮೌಲ್ಯಯುತ ರಾಜಕಾರಣ ಹಿನ್ನೆಲೆಯ ಸಿದ್ದರಾಮಯ್ಯ ರಾಜೀನಾಮೆ ನೀಡಲಿ



ಮೈಸೂರು, ಸೆ.28(ಎಸ್‌ಬಿಡಿ)– ಮೌಲ್ಯಯುತ ರಾಜಕಾರಣದ ಹಿನ್ನೆಲೆಯುಳ್ಳ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಗ್ರಹಿಸಿದ್ದಾರೆ.

ಮುಡಾ ನಿವೇಶನ ಹಂಚಿಕೆ ಹಗರಣ ಆರೋಪದಡಿ ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಾಗಿರುವ ಬಗ್ಗೆ ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಪ್ರತಾಪ್ ಸಿಂಹ, ಬಿಜೆಪಿ ನಾಯಕರ ಮೇಲೆ ಎಫ್‌ಐಆರ್ ಇಲ್ವಾ? ಅವರು ರಾಜೀನಾಮೆ ಕೊಡಲಿ, ಇವರು ಕೊಡಲಿ ಎನ್ನುವುದನ್ನು ನಿಲ್ಲಿಸಿ, ರಾಜ್ಯಕ್ಕೆ ಒಳ್ಳೆಯ ಮಾದರಿ ನೀಡಿ. ಎಫ್‌ಐಆರ್ ಆಗಿರುವ ಕಾರಣ ರಾಜೀನಾಮೆ ಕೊಡಿ. ಮೂರೇ ತಿಂಗಳಲ್ಲಿ ತನಿಖೆ ಮುಗಿಸಿ. ತನಿಖೆಯಲ್ಲಿ ನೀವು ತಪ್ಪಿತಸ್ಥರಲ್ಲ ಎಂದು ಸಾಬೀತಾದರೆ ಮತ್ತೆ ಅಧಿಕಾರಕ್ಕೆ ಬನ್ನಿ. ಆಗ ನಾವೇ ಸ್ವಾಗತಿಸುತ್ತೇವೆ ಎಂದು ಹೇಳಿದರು.

ಬಿಜೆಪಿಯಲ್ಲಿ ಇರುವವರೆಲ್ಲಾ ಭ್ರಷ್ಟರು ಎಂಬ ರೀತಿ ಮಾತಾಡಬೇಡಿ. ನಿಮ್ಮ ತಪ್ಪು ಮುಚ್ಚಿಕೊಳ್ಳಲು ಸುಮ್ಮನೆ ಹೆದರಿಸುವ ತಂತ್ರ ಬಳಸಬೇಡಿ. ನಿಮ್ಮದೇ ಸರ್ಕಾರವಿದೆ. ಬಿಜೆಪಿ ನಾಯಕರು ತಪ್ಪು ಮಾಡಿದ್ದರೆ ಕ್ರಮ ಕೈಗೊಳ್ಳಿ, ಬಿಜೆಪಿ ಸರ್ಕಾರದ ವಿರುದ್ಧ ನೀವು ಮಾಡಿದ್ದ ಆರೋಪದ ಬಗ್ಗೆ ಈವರೆಗೆ ಒಂದೇ ಒಂದು ತನಿಖೆ ಮಾಡಿಸಿ ಕ್ರಮ ಕೈಗೊಂಡಿದ್ದಿರಾ? ಸುಮ್ಮನೆ ಹೆದರಿಸುವ ಕೆಲಸ ಮಾಡಬೇಡಿ ಎಂದು ಸಿದ್ದರಾಮಯ್ಯನವರಿಗೆ ಟಾಂಗ್ ನೀಡಿದ್ದಾರೆ.

ಕಸಾಯಿಖಾನೆಗೆ ಸಾಗಿಸುತ್ತಿದ್ದ 34 ಜಾನುವಾರು ರಕ್ಷಣೆ

ಮೈಸೂರು, ಸೆ.28(ಎಸ್‌ಬಿಡಿ)– ಕಸಾಯಿಖಾನೆಗೆ ಸಾಗಿಸುತ್ತಿದ್ದ 34 ಹಸು–ಕರುಗಳನ್ನು ಮೈಸೂರಿನ ಹೆಬ್ಬಾಳ್ ಠಾಣೆ ಪೊಲೀಸರು ರಕ್ಷಿಸಿದ್ದಾರೆ.


ಹೆಬ್ಬಾಳ್ ರಿಂಗ್ ರಸ್ತೆಯಲ್ಲಿ ಸೆ.23ರಂದು ರಾತ್ರಿ ಈಚರ್ ವಾಹನದಲ್ಲಿ ರಾಸುಗಳನ್ನು ಕಸಾಯಿಖಾನೆಗೆ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ಆರಂಭಿಸಿದ ಪೊಲೀಸರು, ಶುಭೋದಿನಿ ಕನ್ವೆನ್ಷನಲ್ ಹಾಲ್ ಜಂಕ್ಷನ್ ಬಳಿ ವಾಹನ ತಡೆದು, ಅದರಲ್ಲಿ ತುಂಬಿದ್ದ ಹಸು–ಕರುಗಳನ್ನು ರಕ್ಷಿಸಿ, ಇಬ್ಬರನ್ನು ಬಂಧಿಸಿದ್ದಾರೆ.

ಡಿಸಿಪಿ ಮುತ್ತುರಾಜ್ ಮಾರ್ಗದರ್ಶನ, ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಹೆಬ್ಬಾಳ್ ಠಾಣೆಯ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಪ್ರವೀಣ್‌ಕುಮಾರ್, ಕೀರ್ತಿ, ಸಿಬ್ಬಂದಿ ಕಾಂತರಾಜ್, ಸಂತೋಷ್ ಕುಮಾರ್, ಅಣ್ಣಪ್ಪ, ಸುಬಾನಲ್ಲಾ, ಶ್ರೀಶೈಲಹುಗ್ಗಿ, ಮಧು ಮತ್ತು ಮೋಹನ್ ಪಾಲ್ಗೊಂಡಿದ್ದರು.

ಶಾಸಕ ಮುನಿರತ್ನ ನಿವಾಸ, ಕಚೇರಿ ಮೇಲೆ ಎಸ್‌ಐಟಿ ದಿಢೀರ್ ದಾಳಿ

ಬೆಂಗಳೂರು, ಸೆ.28– ರಾಜರಾಜೇಶ್ವರಿ ನಗರ ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಪ್ರಕರಣದ ತನಿಖೆಯನ್ನು ಎಸ್‌ಐಟಿ ಚುರುಕುಗೊಳಿಸಿದ್ದು, ತನಿಖಾಧಿಕಾರಿಗಳ ತಂಡ ವೈಯಾಲಿಕಾವಲ್‌ನಲ್ಲಿರುವ ಮುನಿರತ್ನ ನಿವಾಸದ ಮೇಲೆ ದಿಢೀರ್ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದೆ.

ಕಗ್ಗಲಿಪುರ ಅತ್ಯಾಚಾರ ಪ್ರಕರಣ, ಯಶವಂತಪುರ ಪ್ರಕರಣ ಹಾಗೂ ವೈಯಾಲಿಕಾವಲ್‌ನಲ್ಲಿ ದಾಖಲಾಗಿದ್ದ ವಂಚನೆ ಹಾಗೂ ಅಟ್ರಾಸಿಟಿ ಕೇಸ್ ತನಿಖೆ ಕೈಗೊಂಡಿರುವ ಎಸ್‌ಐಟಿ ತಂಡ ಎಫ್‌ಎಸ್‌ಎಲ್ ತಂಡಗಳ ಜೊತೆ ಇಂದು ಬೆಳಗ್ಗೆ 7.30ಕ್ಕೆ ಮನೆ ಮೇಲೆ ರೇಡ್ ಮಾಡಿದೆ. ಸದ್ಯ ಶಾಸಕ ಮುನಿರತ್ನ ಎಸ್‌ಐಟಿ ಕಸ್ಟಡಿಯಲ್ಲಿದ್ದಾರೆ.





ಸೋಕೋ ಟೀಮ್ (FSL)ನಿಂದ ಮನೆ ಶೋಧ ಕಾರ್ಯ ನಡೆಸಿದ್ದು, ಎರಡು ಸೋಕಾ ಟೀಮ್ ಸೇರಿ ನಾಲ್ಕು ವಾಹನಗಳಲ್ಲಿ ಎಸ್‌ಐಟಿ ತಂಡ ಬಂದಿದೆ. ಮುನಿರತ್ನ ಮನೆಯಲ್ಲಿ ದಾಖಲೆ ಹಾಗೂ ಸಾಕ್ಷ್ಯ ಸಂಗ್ರಹ ಮಾಡಿದೆ. ಹೊರ ಜಿಲ್ಲೆಗಳಿಂದ ಎಫ್‌ಎಸ್‌ಎಲ್ ತಂಡವನ್ನು ಕರೆಸಿಕೊಂಡು ಸರ್ಕಾರಿ ಪಂಚರುಗಳೊಂದಿಗೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ. ಪ್ರಕರಣಗಳ ಸಂಬಂಧ ದಾಖಲೆಗಳು, ಟೆಕ್ನಿಕಲ್ ಎವಿಡೆನ್ಸ್‌ಗಳ ಶೋಧ ನಡೆಸಿ ಸಂಗ್ರಹಿಸಲಾಗುತ್ತಿದೆ.

ಮುಖ್ಯವಾಗಿ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ. ತನಿಖಾಧಿಕಾರಿ ಡಿವೈಎಸ್ಪಿ ಕವಿತಾ ನೇತೃತ್ವದಲ್ಲಿ ದಾಳಿ ನಡೆಸಲಾಗಿದ್ದು, ಮೂರು ಕೇಸ್‌ಗಳ ಸಂಬಂಧ ಈ ದಾಳಿಯಾಗಿದೆ.

ಮಹತ್ವದ ದಾಖಲೆ ವಶಕ್ಕೆ

ಮುನಿರತ್ನ ವೈಯಾಲಿಕಾವಲ್ ಮನೆ ಮೇಲೆ SITಯ 15 ಪೊಲೀಸರಿಂದ ದಾಳಿಯಾಗಿದ್ದು, ಮನೆ ಮಾತ್ರವಲ್ಲದೆ ಏಕ ಕಾಲಕ್ಕೆ ಮುನಿರತ್ನ ಆಪ್ತರು ಸೇರಿ 11 ಕಡೆ ಎಸ್ ಐಟಿ ತಂಡ ದಾಳಿ ನಡೆಸಿದೆ.

ಯಶವಂತಪುರದಲ್ಲಿರುವ ಮುನಿರತ್ನ ಆಪ್ತ ಕಿರಣ್‌ಕುಮಾರ್ ಮನೆ ಮೇಲೂ ದಾಳಿ ನಡೆಸಲಾಗಿದೆ. ಎಸ್ ಐಟಿ ದಾಳಿ ಹಿನ್ನಲೆ ಭದ್ರತೆಗಾಗಿ ಸ್ಥಳೀಯ ಪೊಲೀಸರ ನಿಯೋಜಿಸಿತ್ತು. ಮುನಿರತ್ನ ನಿವಾಸದ ಹಿಂದಿನ ಕಚೇರಿಗೂ ಎಸ್ಪಿ ಸೌಮ್ಯ ಲತಾ ಪರಿಶೀಲನೆ ನಡೆಸಿದರು. ಮುನಿರತ್ನ ಕಚೇರಿಗೆ ಬಂದ ಮಹಜರ್ ಹಾಗೂ ಪಂಚನಾಮೆ ಜೊತೆಗೆ ಕಚೇರಿ ಪರಿಶೀಲನೆ ನಡೆಸಲಾಯಿತು.


ಡಾಲರ್ಸ್ ಕಾಲೋನಿಯ ಕೇಬಲ್ ಆಫೀಸ್, ಆರ್‌ಆರ್ ನಗರ ಆಫೀಸ್, ಮಲೇಶ್ವರಂ ಬಳಿ ಹೊಸ ಮನೆ, ಕಚೇರಿ, ಜೆ.ಪಿ.ಪಾರ್ಕ್ ಬಳಿಯ ಕೇಬಲ್ ಕಚೇರಿ ಸೇರಿ 11 ಕಡೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ. ಮುನಿರತ್ನಗೆ ಸೇರಿದ ಕಚೇರಿ ಮೇಲೆ SIT ದಾಳಿ ಹಿನ್ನಲೆ ಜೆಪಿ ಪಾರ್ಕ್ ಬಳಿ ಎಸ್ಪಿ ಸೌಮ್ಯಲತಾ ಆಗಮಿಸಿದ್ದರು. ಇನ್ನು ಇದೇ ವೇಳೆ ಎಸ್‌ಐಟಿ ತಂಡ ತನಿಖೆ ಹಿನ್ನೆಲೆ ಮುನಿರತ್ನ ಮನೆಗೆ ವಕೀಲರು ಆಗಮಿಸಿದ್ದು, ವಕೀಲರನ್ನು ವೈಯಾಲಿಕಾವಲ್ ಪೊಲೀಸರು ಒಳಗೆ ಬಿಡಲಿಲ್ಲ. ಯಾರನ್ನೂ ಒಳಗೆ ಬಿಡದೆ ಸೋಕೋ ಟೀಂ ಸ್ಥಳದಲ್ಲೇ ಬೀಡುಬಿಟ್ಟಿದೆ. ದಾಳಿ ವೇಳೆ ಸೋಕೋ ಟೀಂ ಫೋಟೋ ಹಾಗೂ ವಿಡಿಯೋ ಚಿತ್ರೀಕರಣ ಮಾಡುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಅ.3ರಿಂದ 20ರವರೆಗೆ ಮೈಸೂರಲ್ಲಿ ಆರು ಅಂಬಾರಿ ಬಸ್ ಸಂಚಾರ

ಸಂಜೆ 6.30, ರಾತ್ರಿ 8 ಮತ್ತು 9.30 ಗಂಟೆವರೆಗೆ 3 ಟ್ರಿಪ್



ಮೈಸೂರು, ಸೆ.28(ಆರ್‌ಕೆ)– ಪ್ರತೀ ವರ್ಷದಂತೆ ಈ ಬಾರಿಯ ದಸರಾ ಮಹೋತ್ಸವ ವೇಳೆಯೂ ಅ.3 ರಿಂದ 20ರವರೆಗೆ 6 ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳಲ್ಲಿ ಮೈಸೂರಿನ ವಿದ್ಯುತ್ ದೀಪಾಲಂಕಾರ ವೀಕ್ಷಿಸಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ) ವ್ಯವಸ್ಥೆ ಮಾಡಿದೆ.

ಸಂಜೆ 6.30, ರಾತ್ರಿ 8 ಹಾಗೂ ರಾತ್ರಿ 9.30ಕ್ಕೆ ಅಂಬಾರಿ ಬಸ್‌ಗಳು 3 ಟ್ರಿಪ್ ಸಂಚರಿಸಲಿವೆ. ಮಹಡಿಯಲ್ಲಿ ಒಬ್ಬರಿಗೆ 250 ರೂ, ಅಪ್ಪರ್ ಕ್ಲಾಸ್‌ನಲ್ಲಿ 500 ರೂ. ದರ ನಿಗದಿಪಡಿಸಲಾಗಿದೆ. ಮೈಸೂರಿನ ಜೆಎಲ್‌ಬಿ ರಸ್ತೆಯ ಮಯೂರ ಹೊಯ್ಸಳ ಹೋಟೆಲ್ ಮುಂಭಾಗದಿಂದ ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳು ಹೊರಡಲಿವೆ.

ಆಸಕ್ತರು ಆನ್‌ಲೈನ್ ಮೂಲಕ ಟಿಕೆಟ್ ಕಾಯ್ದಿರಿಸಬೇಕು. KSTDC.CO ವೆಬ್‌ಸೈಟ್‌ನಲ್ಲಿ ಟಿಕೆಟ್ ಬುಕ್ ಮಾಡಿ ಅಂಬಾರಿ ಬಸ್‌ನಲ್ಲಿ ಸವಾರಿ ಮಾಡಿ ದಸರಾ ದೀಪಾಲಂಕಾರ ವೀಕ್ಷಿಸಬಹುದಾಗಿದೆ. ಮಯೂರ ಹೊಯ್ಸಳದಿಂದ ಹೊರಡುವ ಬಸ್, ಹುಣಸೂರು ರಸ್ತೆ, ಕಮಾನು ಗೇಟ್ ಬಳಿ ಎಡಕ್ಕೆ ತಿರುಗಿ ಕ್ರಾಫರ್ಡ್ ಭವನ, ಮಹಾರಾಜ ಕಾಲೇಜು ಮೈದಾನ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ಸರ್ಕಲ್, ಹಾರ್ಡಿಂಜ್ ಸರ್ಕಲ್, ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಸರ್ಕಲ್, ರೈಲ್ವೆ ಸ್ಟೇಷನ್ ವೃತ್ತದ ಮೂಲಕ ವಾಪಸ್ ಮಯೂರ ಹೋಟೆಲ್ ಬಳಿ ಅಂತ್ಯಗೊಳ್ಳುವುದು. ದಸರಾ ಹೊರತುಪಡಿಸಿ ಉಳಿದ ಸಾಮಾನ್ಯ ದಿನಗಳಲ್ಲಿ ಒಂದೇ ಒಂದು ಅಂಬಾರಿ ಬಸ್ಸು ಅರಮನೆ ದಕ್ಷಿಣ ದ್ವಾರದಿಂದ ಸಂಚರಿಸಲಿದ್ದು, ಈ ಬಸ್ಸಿಗೆ ಎರಡೂ ಮಹಡಿಗೆ ತಲಾ 250ರೂ ದರ ನಿಗದಿಪಡಿಸಲಾಗಿದೆ.

47 ಆಸನ ಸಾಮರ್ಥ್ಯವಿರುವ ಅಂಬಾರಿ ಬಸ್‌ನಲ್ಲಿ ಅಪ್ಪರ್ ಸ್ಟೇರ್‌ಗೆ ಭಾರೀ ಬೇಡಿಕೆ ಇರುತ್ತದೆ. ದಸರಾ ಹೊರತುಪಡಿಸಿ ಸಾಮಾನ್ಯ ದಿನಗಳಲ್ಲಿ ಕೆಳಮಹಡಿಯಲ್ಲಿ ಪ್ರಯಾಣಿಸುವವರ ಸಂಖ್ಯೆ ತೀರಾ ವಿರಳ.

ಮಹಿಷ ದಸರಾ ಆಚರಣೆ ನೆಪದಲ್ಲಿ ಕಾನೂನಿಗೆ ಭಂಗ ತಂದರೆ ಕ್ರಮ



ಮೈಸೂರು, ಸೆ.28(ಬಿಎಲ್‌ಯು)– ಮಹಿಷ ದಸರಾ ಆಚರಣೆಗೆ ನಮ್ಮ ಅಭ್ಯಂತರವಿಲ್ಲ. ಆದರೆ ಮಹಿಷ ದಸರಾ ಆಚರಣೆ ನೆಪದಲ್ಲಿ ಕಾನೂನಿಗೆ ಭಂಗ ತಂದರೆ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಎಚ್ಚರಿಸಿದರು.

ಮೈಸೂರಿನ ರಾಮಕೃಷ್ಣನಗರದ ಸಿದ್ದರಾಮಯ್ಯನವರ ಮನೆ ಬಳಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಯಾರಿಗೂ ತೊಂದರೆ ಆಗದಂತೆ ಯಾರು ಬೇಕಾದರೂ ತಮ್ಮ ಧಾರ್ಮಿಕ ಆಚರಣೆ ಮಾಡಿಕೊಳ್ಳಬಹುದು. ಆದರೆ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರಬಾರದಷ್ಟೆ ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು.

ಇಂತಹ ಆಚರಣೆ ಮಾಡಿ, ಮಾಡಬೇಡಿ ಎಂದು ಹೇಳಲು ನಾವು ಯಾರು ಎಂದು ಪ್ರಶ್ನಿಸಿದ ಡಾ.ಮಹದೇವಪ್ಪ, ಭಾರತದ ಸಿಂಧು ನಾಗರಿಕತೆಯಲ್ಲೇ ನೀರು, ಕಲ್ಲು ಹಾಗೂ ಮಣ್ಣನ್ನು ಪೂಜೆ ಮಾಡುವ ಸಂಸ್ಕೃತಿ ಇತ್ತು. ಅವರವರ ಧಾರ್ಮಿಕ ನಂಬಿಕೆಯಂತೆ ಆಚರಣೆ ಮಾಡುತ್ತಾರೆ. ಇದಕ್ಕೆ ನಮ್ಮ ಅಭ್ಯಂತರವಿಲ್ಲ ಎಂದು ಸ್ಪಷ್ಟಪಡಿಸಿದರು.

ಆಚರಣೆ ಮಾಡಬೇಡಿ ಎಂದು ವಿರೋಧ ಮಾಡಲು ಯಾರಿಗೂ ಹಕ್ಕಿಲ್ಲ. ಆದರೆ ಎಲ್ಲಾ ಪರಿಸ್ಥಿತಿಯನ್ನು ಪೊಲೀಸರು ಸಮರ್ಥವಾಗಿ ನಿಭಾಯಿಸುತ್ತಾರೆ ಎಂದು ಹೇಳುವ ಮೂಲಕ ಡಾ.ಮಹದೇವಪ್ಪ, ಮಹಿಷ ದಸರಾ ಆಚರಣೆಗೆ ಪರೋಕ್ಷವಾಗಿ ಒಪ್ಪಿಗೆ ಸೂಚಿಸಿದರು.

ಅ.3, ದಸರಾ ಚಲನಚಿತ್ರೋತ್ಸವ ಉದ್ಘಾಟನೆ



ಮೈಸೂರು.ಸೆ.28–ಮೈಸೂರು ದಸರಾ ಚಲನಚಿತ್ರ ಉಪಸಮಿತಿ ವತಿಯಿಂದ ಅ.3ರಂದು ಬೆಳಗ್ಗೆ 10.30 ಗಂಟೆಗೆ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ದಸರಾ ಚಲನಚಿತ್ರೋತ್ಸವ–2024ರ ಉದ್ಘಾಟನಾ ಸಮಾರಂಭ ನಡೆಯಲಿದೆ.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಕೇಂದ್ರ ಸಚಿವ ಹೆಚ್.ಡಿಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು. ಪಶುಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಅನಿಲ್ ಕುಮಾರ್ ಇನ್ನಿತರರು ಆಗಮಿಸಲಿದ್ದಾರೆ.

MUDA APPROVED
Festival Offers
₹20 Lakhs Only
(20 x 30 Site)
HERITAGE CITY
Uttanahalli, Mysuru
PRM/KA/RERA/1268/PR/160124/006555
READY FOR REGISTRATION
Available Plots 20x30 & 30x40
98448 24772
95384 73755

ದಸರಾ ಬೊನಾನ್ಜಾ
DASARA BONANZA
@
LISHITHA
ESTATES
MUDA APPROVED
RERA APPROVED
4th, 5th & 6th October, 2024
Book Your Dream Plot & Get 5 Gm Gold Coin!
Visit Our Projects & Get Assured Gifts
INFO CITY Behind Infosys, MYSURU
ABHYUDAYA AMBARI ELEGANCE A premium residential layout Mandakalli, MYSURU
Nandana Elegance Off Vijayanagar 4th Stage, MYSURU
Limited Plots & Limited Offer! Don't Miss Out!
Call Us Now: +91 90719 66999
Swimming Pool Road, Near Mahabodhi School, Saraswathipuram, Mysuru, Karnataka - 570 009

ಮರದ ಅಂಬಾರಿ ಹೊತ್ತು ಗಾಂಭೀರ್ಯ ಮೆರೆದ ಧನಂಜಯ



ದಸರಾ ಆನೆ ಧನಂಜಯನಿಗೆ ಶನಿವಾರ ಮರದ ಅಂಬಾರಿ ಹಾಗೂ ಮರಳು ಮೂಟೆಯುಳ್ಳ ಭಾರ ಹೊರುವ ತಾಲೀಮು ನಡೆಸಲಾಯಿತು.

ಮೈಸೂರು, ಸೆ.28(ಎಂಟಿವೈ)– ದಸರಾ ಮಹೋತ್ಸವದ ಗಜಪಡೆ ನೀಡುತ್ತಿರುವ ತಾಲೀಮು ಚುರುಕಾಗಿ ಸಾಗುತ್ತಿದ್ದು, ಶನಿವಾರ ಧನಂಜಯ ಆನೆಗೆ ಮರದ ಅಂಬಾರಿಯೊಂದಿಗೆ ಭಾರ ಹೊರಿಸುವ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.


ಜಂಬೂಸವಾರಿಗೆ ಕೇವಲ 14 ದಿನ ಮಾತ್ರ ವಿದ್ದು, ಚಿನ್ನದ ಅಂಬಾರಿ ಹೊರುವ ಸಾಮರ್ಥ್ಯವನ್ನು ಆನೆಗಳಿಗೆ ಕರಗತ ಮಾಡಲಾಗುತ್ತಿದೆ. ಗಜಪಡೆಯ ನಾಯಕ ಅಭಿಮನ್ಯು ಈಗಾಗಲೇ ಚಿನ್ನದ ಅಂಬಾರಿ ಹೊರುವ ಸಾಮರ್ಥ್ಯವನ್ನು ಪ್ರದರ್ಶಿಸಿದ್ದು, ಅರಣ್ಯ ಇಲಾಖಾ ಅಧಿಕಾರಿಗಳು ಧೈರ್ಯದಿಂದ ಇರುವಂತೆ ಮಾಡಿದ್ದಾನೆ. ಅದರೊಂದಿಗೆ ಪರ್ಯಾಯ ಆನೆಯಾಗಿ ಅಂಬಾರಿ ಹೊರುವ ಸಾಮರ್ಥ್ಯ ತುಂಬಲು ಧನಂಜಯ, ಪ್ರಶಾಂತ ಹಾಗೂ ಮಹೇಂದ್ರ ಆನೆಗೆ ತರಬೇತಿ ನೀಡಿ ಅಣಿಗೊಳಿಸಲಾಗುತ್ತಿದ್ದು, ಇಂದು ಬೆಳಗ್ಗೆ ಧನಂಜಯ ಆನೆಗೆ ಮರದ ಅಂಬಾರಿ ಹಾಗೂ ಮರಳು ಮೂಟೆ ಹೊರಿಸಿ ತಾಲೀಮಿಗೆ ಕರೆದೊಯ್ಯಲಾಯಿತು.

ಕುಮ್ಕಿ ಆನೆಗಳಾದ ಲಕ್ಷ್ಮೀ ಹಾಗೂ ಹಿರಣ್ಯಳ ಜೊತೆಯಾಗಿ ಬೆಳಗ್ಗೆ 7.45ಕ್ಕೆ ಅರಮನೆಯಿಂದ ಹೊರ ಬಂದ ಧನಂಜಯ, ಕೆ.ಆರ್. ವೃತ್ತ, ಸಯ್ಯಾಜಿರಾವ್ ರಸ್ತೆ, ಆರ್‌ಎಂಸಿ ವೃತ್ತ, ಬಂಬೂಬಜಾರ್, ಹೈವೆ ವೃತ್ತ, ನೆಲ್ಸನ್ ಮಂಡೇಲ ರಸ್ತೆಯ ಮೂಲಕ 9.30 ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನ ತಲುಪಿತು. ಮಾರ್ಗದುದ್ದಕ್ಕೂ ಸರಾಗವಾಗಿ ಹೆಜ್ಜೆ ಹಾಕಿದ ಧನಂಜಯ ಅಂಬಾರಿ ಹೊರುವ ಸಾಮರ್ಥ್ಯ ಪ್ರದರ್ಶಿಸಿತು. ಪಂಜಿನ ಕವಾಯತ್ ಮೈದಾನದಲ್ಲಿ ಮರದ ಅಂಬಾರಿ ಹಾಗೂ ಮರಳಿನ ಮೂಟೆಯನ್ನು ಕೆಳಗಿಳಿಸಿ ಕೆಲಕಾಲ ವಿಶ್ರಾಂತಿ ನೀಡಲಾಯಿತು.

ಈ ಸಂದರ್ಭದಲ್ಲಿ ಮಾವುತ, ಕಾವಾಡಿ ಹಾಗೂ ಸಹಾಯಕರಿಗೆ ಉಪಾಹಾರ ನೀಡಲಾಯಿತು. ಬಳಿಕ 10.20ಕ್ಕೆ ಅರಮನೆಯತ್ತ ಹೆಜ್ಜೆ ಹಾಕಿದ ಗಜಪಡೆ, 11.20ರ ವೇಳೆಗೆ ಅರಮನೆ ಆವರಣದ ಬಿಡಾರವನ್ನು ಸುರಕ್ಷಿತವಾಗಿ ತಲುಪಿತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ಆರ್‌ಎಫ್ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್, ಸಹಾಯಕರಾದ ರಂಗರಾಜು, ಅಕ್ರಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗಜಪಡೆ ಮುಂದೆ ರೀಲ್ಸ್, ಫೋಟೋ ಶೂಟ್‌ಗೆ ಕಡಿವಾಣ



ಬಿಕೋ ಎನ್ನುತ್ತಿರುವ ದಸರಾ ಗಜಪಡೆಯ ಬಿಡಾರ

ಮೈಸೂರು,ಸೆ.28(ಎಂಟಿವೈ)– ಗಜಪಡೆಯ ಮುಂದೆ ರೀಲ್ಸ್, ಫೋಟೋ ಶೂಟ್‌ಗೆ ಕಡಿವಾಣ ಹಾಕಲಾಗಿದ್ದು, ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಯಿರುವ ಬೀಡಾರ ಬಿಕೋ ಎನ್ನುತ್ತಿದೆ.

ಕಳೆದ ವಾರ ಕೆಲವರು ಆನೆಗಳ ಮುಂದೆ ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿದ್ದರು. ಅಲ್ಲದೆ, ಫೋಟೋ ಶೂಟ್ ಮಾಡಿಸಿಕೊಳ್ಳಲು ಮುಗಿಬೀಳುತ್ತಿದ್ದಾರೆಂಬ ಆರೋಪವೂ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ದಸರಾ ಗಜಪಡೆಯ ಮುಂದೆ ರೀಲ್ಸ್, ಫೋಟೋ ಶೂಟ್‌ಗೆ ಕಡಿವಾಣ ಹಾಕಿದೆ. ಅಲ್ಲದೆ, ಅರಮನೆ ಆವರಣದಲ್ಲಿ ಗಜಪಡೆ ಬಿಡಾರದ ಬಳಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇದರಿಂದ ಆನೆಗಳಿರುವ ಬಿಡಾರದ ಬಳಿ ಜನ ಸುಳಿಯಲು ಸಾಧ್ಯವಾಗದ ಕಾರಣ, ಆನೆ ಬಿಡಾರ ಬಿಕೋ ಎನ್ನುವಂತಾಗಿದೆ.

ವನ್ಯಜೀವಿ ಸಂರಕ್ಷಣೆಗೆ ಅರಿವು ಮೂಡಿಸುವ ತಾಣವಾಗಬೇಕು: ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಗಜಪಡೆ ಮೈಸೂರಿಗೆ ಆಗಮನದ ದಿನದಿಂದಲೂ ಪ್ರತಿವರ್ಷ ವನ್ಯಜೀವಿ ಸಂರಕ್ಷಣೆಯ ಮಹತ್ವ ಸಾರುವ ಕಾಯಕದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತೊಡಗಿಸಿಕೊಳ್ಳುತ್ತಿದ್ದವು. ಇತ್ತೀಚಿನ ದಿನಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿರುವುದರಿಂದ ವನ್ಯಜೀವಿ ಸಂರಕ್ಷಣೆ ಕುರಿತಂತೆ ಮಾಹಿತಿ ನೀಡುವುದಕ್ಕೆ ದಸರಾ ಗಜಪಡೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ದಸರಾ ಗಜಪಡೆಯ ಬೀಡಾರದ ಮುಂದಿನ ರಸ್ತೆವರೆಗೂ ಅರಮನೆಗೆ ಬರುವ ಪ್ರವಾಸಿಗರು ಬರಲು ಅವಕಾಶ ಮಾಡಿಕೊಡಬೇಕು ಎಂದು ಪ್ರವಾಸಿಗರು ಅವಲತ್ತುಕೊಳ್ಳುತ್ತಿದ್ದಾರೆ.

ಕಣ್ತುಂಬಿಕೊಳ್ಳಲು ಅವಕಾಶ ನೀಡಿ: ಗಜಪಡೆಯನ್ನು ನೋಡುವುದಕ್ಕಾಗಿ ದೂರದ ಊರುಗಳಿಂದ ಅರಮನೆಗೆ ಬರುತ್ತಿದ್ದೇವೆ. ದಸರಾ ವೀಕ್ಷಿಸಲು ನಮಗೆ ಸಾಧ್ಯವಾಗುವುದಿಲ್ಲ. ಆದರೆ, ಅರಮನೆಯಲ್ಲಿ ಬೀಡು ಬಿಟ್ಟಿರುವ ಗಜಪಡೆ ನೋಡುವುದಕ್ಕಾದರೂ ಅವಕಾಶ ಮಾಡಿಕೊಡಬೇಕು. ಯಾರೋ ಕೆಲವರು ಮಾಡಿದ ತಪ್ಪಿನಿಂದಾಗಿ ಎಲ್ಲರಿಗೂ ಅವಕಾಶದಿಂದ ವಂಚಿತರನ್ನಾಗಿಸುವುದು ಸರಿಯಲ್ಲ. ಆನೆಗಳ ಬಳಿ ಫೋಟೋ, ವಿಡಿಯೋ ಮಾಡಿಕೊಳ್ಳುವುದನ್ನು ನಿರ್ಬಂಧಿಸುವ ಆದೇಶ ಮುಂದುವರೆಸಲಿ. ಆದರೆ ದೂರದಿಂದ ನೋಡುವ ಅವಕಾಶ ನೀಡಬೇಕು. ಮಕ್ಕಳಿಗೆ ಆನೆಗಳ ಬಗ್ಗೆ ಮಾಹಿತಿ ನೀಡುವುದರಿಂದ ಮುಂದಿನ ಪೀಳಿಗೆಗೆ ವನ್ಯಜೀವಿ ಸಂರಕ್ಷಣೆಗೆ ಬಗ್ಗೆ ಜಾಗೃತಿ ಮೂಡಿಸಲು ಸಹಕಾರಿಯಾಗುತ್ತದೆ ಎಂದು ಬಿಜಾಪುರದ ಪುನೀತ್ ಅಭಿಪ್ರಾಯಪಟ್ಟಿದ್ದಾರೆ

ಮಾವುತರು, ಕಾವಾಡಿಗಳಿಗೆ ಪಾದರಕ್ಷೆಗಳ ವಿತರಣೆ

ಲಿಡ್ಕರ್ ರಾಯಭಾರಿ ಡಾಲಿ ಧನಂಜಯ ಸೇರಿ ಹಲವರು ಉಪಸ್ಥಿತಿ



ಅರಮನೆ ಆವರಣದಲ್ಲಿ ಗಜಪಡೆಯ ಮಾವುತ, ಕಾವಾಡಿಗಳಿಗೆ ಲಿಡ್ಕರ್ ವತಿಯಿಂದ ಪಾದರಕ್ಷೆ ವಿತರಿಸಲಾಯಿತು.

ಮೈಸೂರು,ಸೆ.28(ಎಂಟಿವೈ)– ದಸರಾ ಗಜಪಡೆಯ ಮಾವುತ, ಕಾವಾಡಿಗಳಿಗೆ ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ (ಲಿಡ್ಕರ್) ವತಿಯಿಂದ ಸಿದ್ಧಪಡಿಸಿದ ಪಾದರಕ್ಷೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿತರಿಸಿದರು.

ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆ ಬಿಡಾರದ ಬಳಿ ಶನಿವಾರ ಮಧ್ಯಾಹ್ನ ದಸರಾ ಗಜಪಡೆಯ 14 ಆನೆಗಳ ಮಾವುತ, ಕಾವಾಡಿ, ಅಡುಗೆ ತಯಾರಕರು ಹಾಗೂ ಸಹಾಯಕರು ಸೇರಿದಂತೆ 50ಕ್ಕೂ ಹೆಚ್ಚು ಮಂದಿಗೆ ಪಾದರಕ್ಷೆ ವಿತರಿಸಲಾಯಿತು.

ಆನೆ ಬಿಡಾರದ ಸಮೀಪವಿರುವ ಕೋಡಿ ಸೋಮೇಶ್ವರ ದೇವಾಲಯ ಸಮೀಪದ ಮೈದಾನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಪಾದರಕ್ಷೆ ವಿತರಿಸಿದ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ನಟ ಡಾಲಿ ಧನಂಜಯ ಅವರು ಲಿಡ್ಕರ್‌ಗೆ ಸರ್ಕಾರದಿಂದ ಒಂದು ಪೈಸೆಯೂ ಗೌರವ ಧನ ಪಡೆಯದೇ ರಾಯಭಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ, ಲಿಡ್ಕರ್ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಚಾರ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದಸರಾ ಗಜಪಡೆಯ ಮಾವುತ, ಕಾವಾಡಿಗಳಿಗೆ ಲಿಡ್ಕರ್ ವತಿಯಿಂದ ಉಚಿತವಾಗಿ ಪಾದರಕ್ಷೆ ವಿತರಿಸಲಾಗಿದೆ.

ದೀರ್ಘಕಾಲ ಬಾಳಿಕೆ ಬರುವ ಗುಣಮಟ್ಟದ ಪಾದರಕ್ಷೆಗಳನ್ನು ನೀಡಿ ಈ ಬಾರಿಯ ಮೈಸೂರು ದಸರಾ ಮಹೋತ್ಸವಕ್ಕೆ ಸಜ್ಜಾಗಲು ಶುಭ ಕೋರಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚಲನಚಿತ್ರ ನಟ, ಲಿಡ್ಕರ್ ರಾಯಭಾರಿ ಡಾಲಿ ಧನಂಜಯ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ವಸುಂದರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದಸರಾ ಫಲ–ಪುಷ್ಪ ಪ್ರದರ್ಶನ: ಲಕ್ಷಾಂತರ ಹೂವುಗಳಿಂದ ಗಾಜಿನ ಮನೆಯಲ್ಲಿ ಸಂಸತ್ ಭವನ, ಅನುಭವ ಮಂಟಪ ತಳೆಯಲಿವೆ




ದಸರಾ ಫಲಪುಷ್ಪ ಪ್ರದರ್ಶನಕ್ಕೆ ಗಾಜಿನ ಮನೆಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿರುವುದು. ಬಲಚಿತ್ರದಲ್ಲಿ ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ನಾನಾ ಹೂವಿನ ಗಿಡಗಳ ಪಾಟ್ ಜೋಡಣೆ ನಡೆಯಲಿದೆ.

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಸೆ.28–ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಲಕ್ಷಾಂತರ ಹೂವುಗಳಿಂದ ಗಾಜಿನ ಮನೆಯಲ್ಲಿ ಸಂಸತ್ ಭವನ, ಅನುಭವ ಮಂಟಪ ಹಾಗೂ ಪ್ರಜಾಪ್ರತಿನಿಧಿ ಸಭಾ ಮಂಟಪ ತಲೆ ಎತ್ತಲಿವೆ.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕಾರ್ಯಕ್ರಮಗಳಲ್ಲಿ ದಸರಾ ಫಲಪುಷ್ಪ ಪ್ರದರ್ಶನವೂ ಒಂದಾಗಿದ್ದು, ಅದಕ್ಕಾಗಿ ಈಗಾಗಲೇ ಒಂದು ಲಕ್ಷಕ್ಕೂ ಅಧಿಕ ಹೂವಿನ ಕುಂಡಗಳಲ್ಲಿ 40ಕ್ಕೂ ಹೆಚ್ಚು ಬಗೆಯ ಹೂವಿನ ಗಿಡ ಬೆಳೆಸಲಾಗಿದೆ. ತೋಟಗಾರಿಕಾ ಇಲಾಖೆಯ ವಿವಿಧ ನರ್ಸರಿಗಳಲ್ಲಿ ಹೂವಿನ ಗಿಡ ಬೆಳೆಸಲಾಗಿದ್ದು, ಅ.2ರೊಳಗೆ ಕುಪ್ಪಣ್ಣ ಪಾರ್ಕ್‌ನಲ್ಲಿ ಜೋಡಣೆ ಮಾಡಲಾಗುತ್ತದೆ.

ಪ್ರತಿವರ್ಷವೂ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಗಾಜಿನಮನೆಯಲ್ಲಿ ಹೂವಿನಿಂದ ತಲೆ ಎತ್ತುವ ವಿವಿಧ ಆಕೃತಿ ಕಣ್ಮನ ಸೆಳೆಯಲಿದೆ. ಪ್ರತಿವರ್ಷವೂ ಒಂದೊಂದು ಆಕೃತಿಗಳನ್ನು ನಿರ್ಮಿಸುವ ಪದ್ಧತಿ ಅನುಸರಿಸಲಾಗುತ್ತಿದೆ. ಈ ಬಾರಿ ಒಂದೇ ಸೂರಿನಡಿ ಮೂರು ಆಕೃತಿಗಳು ಹೂವುಗಳಿಂದ ತಲೆ ಎತ್ತಲಿವೆ. ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾಚರಣೆ ಆಚರಣೆ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ಮಹತ್ವ ಸಾರುವ ನಿಟ್ಟಿನಲ್ಲಿ ಹೂವಿನ ಆಕೃತಿಗಳು ಈ ಬಾರಿ ಗಮನ ಸೆಳೆಯಲಿವೆ.


ಸಂಸತ್ ಭವನ: ಕುಪ್ಪಣ್ಣ ಪಾರ್ಕ್‌ನಲ್ಲಿರುವ ಗಾಜಿನ ಮನೆಯಲ್ಲಿ ಈ ಬಾರಿ ಪ್ರಮುಖ ಆಕರ್ಷಣೆಯಾಗಿ ದೆಹಲಿ ಸಂಸತ್ ಭವನ ಮನಸೂರೆಗೊಳ್ಳಲಿದೆ. ಬಿಳಿ ಹಾಗೂ ಕೆಂಪು ಬಣ್ಣದ ಹೂವುಗಳಿಂದ ಸಂಸತ್ ಭವನ ನಿರ್ಮಾಣವಾಗಲಿದೆ.

ಅನುಭವ ಮಂಟಪ: ಕ್ರಾಂತಿಕಾರಿ ಬಸವಣ್ಣ 12ನೇ ಶತಮಾನದಲ್ಲಿ ಸಾಮಾಜಿಕ ಸುಧಾರಣೆಗಾಗಿ ಎಲ್ಲಾ ಧರ್ಮಗಳ ಸಾಧು–ಸಂತರು, ಧರ್ಮ ಗುರುಗಳೊಂದಿಗೆ ನಡೆಸಿದ ಅನುಭವ ಮಂಟಪ ಆ ಕಾಲದಲ್ಲಿಯೇ ಸಮಾನತೆ ಸಂದೇಶ ಸಾರಿತ್ತು. ಅಲ್ಲದೆ, ಇಂದಿಗೂ ಅನುಭವ ಮಂಟಪದ ಸಂದೇಶ ಅನೇಕ ಸಂದರ್ಭದಲ್ಲಿ ಉಲ್ಲೇಖವೂ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ದಸರಾ ಫಲಪುಷ್ಪ ಪ್ರದರ್ಶನ ಅನುಭವ ಮಂಟಪ ಹೂವುಗಳಿಂದ ಮೂಡಿ ಬರಲಿದೆ.

ಗೌತಮ ಬುದ್ಧರ ಸಭೆ: ಗೌತಮ ಬುದ್ಧರ ಕಾಲದಲ್ಲಿ ಬೌದ್ಧ ಭಿಕ್ಕುಗಳೊಂದಿಗೆ ನಡೆಸಿದ ಪ್ರವಚನದ ಚಿತ್ರವುಳ್ಳ ಸಂದೇಶವನ್ನು ಪ್ರಜಾಪ್ರತಿನಿಧಿ ಸಭಾ ರೂಪದಲ್ಲಿ ಚಿತ್ರೀಕರಿಸಲಾಗುತ್ತಿದೆ. ಗಾಜಿನ ಮನೆಯಲ್ಲಿ ಸಾವಿರಾರು ಹೂವುಗಳಿಂದ ಸಭಾ ಮಂಟಪವನ್ನು ನಿರ್ಮಿಸಲಾಗುತ್ತಿದೆ

ಈ ಬಾರಿ ಗಾಜಿನ ಮನೆಯಲ್ಲಿ ಮೂರು ದಿಕ್ಕುಗಳಲ್ಲೂ ಮೂರು ಆಕೃತಿ ಮೂಡಿ ಬರಲಿದೆ ಮುಂಭಾಗದಲ್ಲಿ ವೃತ್ತಾಕಾರದಲ್ಲಿ ಸಂಸತ್ ಭವನದ ಮಾದರಿ ಆಕೃತಿ ಮೂಡಿ ಬಂದರೆ, ಹಿಂಬದಿಯಲ್ಲಿ ಒಂದು ಕಡೆ ಅನುಭವ ಮಂಟಪ, ಮತ್ತೊಂದು ಕಡೆ ಪ್ರಜಾಪ್ರತಿನಿಧಿ ಸಭೆ ಆಕೃತಿ ತಲೆ ಎತ್ತಲಿದೆ. ಆಕೃತಿಯ ಸುತ್ತಲೂ ಪುಣೆ ಸೇರಿದಂತೆ ವಿವಿಧೆಡೆಯಿಂದ ಖರೀದಿಸಿ ತಂದಿರುವ ವಿವಿಧ ಬಣ್ಣಗಳ ಹೂವಿನ ಗಿಡಗಳ ಕುಂಡವನ್ನು ಜೋಡಿಸಲಾಗುತ್ತದೆ. ಈಗಾಗಲೇ ಬೆಂಗಳೂರು ಹಾಗೂ ಮೈಸೂರಿನ ಪರಿಣಿತರ ತಂಡ ಹೂವಿನ ಆಕೃತಿಗಳ ನಿರ್ಮಾಣಕ್ಕಾಗಿ ಕಬ್ಬಿಣದ ಪೈಪ್‌ಗಳಿಂದ ವೆಲ್ಡಿಂಗ್ ಮಾಡುವ ಕಾರ್ಯ ಸಾಗುತ್ತಿದೆ. ಇನ್ನೆರಡು ದಿನದಲ್ಲಿ ಕಬ್ಬಿಣದ ಕೆಲಸ ಪೂರ್ಣಗೊಳ್ಳಲಿದ್ದು, ಆ ನಂತರ ಸ್ಪಾಂಜ್ ಅಳವಡಿಸಿ ರೂಪು ನೀಡಲಾಗುತ್ತದೆ. ಅಂತಿಮವಾಗಿ ಹೂವು ಜೋಡಿಸಲಾಗುತ್ತದೆ.





ಕುಪ್ಪಣ್ಣ ಪಾರ್ಕ್‌ನಲ್ಲಿ ಸಿದ್ಧಗೊಳ್ಳುತ್ತಿರುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಗಾಜಿನ ಮನೆಯಲ್ಲಿ ತಲೆ ಎತ್ತಲಿರುವ ಸಂಸತ್ ಭವನ, ಅನುಭವ ಮಂಟಪ, ಪ್ರಜಾ ಪ್ರತಿನಿಧಿ ಸಭೆಯ ತ್ರಿಡಿ ಚಿತ್ರಗಳನ್ನು ಕಾಣಬಹುದು.

ಕಿಡ್ನಿ ವೈಫಲ್ಯಕ್ಕೆ ಮಧುಮೇಹ ರೋಗವೇ ಕಾರಣ: ಡಾ.ಅನಿಲ್

ಮಂಡ್ಯ,ಸೆ.28– ಕಿಡ್ನಿ ವೈಫಲ್ಯಕ್ಕೆ ಮಧುಮೇಹ ರೋಗವೇ ಹೆಚ್ಚು ಕಾರಣ ಎಂದು ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮೂತ್ರಪಿಂಡ ವಿಭಾಗದ ಮುಖ್ಯಸ್ಥ ಡಾ.ಬಿ.ಟಿ.ಅನಿಲ್ ಕುಮಾರ್ ತಿಳಿಸಿದರು.

ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಡೆದ ಕಿಡ್ನಿ ವೈಫಲ್ಯ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದಲ್ಲಿ ಡಯಾಬಿಟಿಸ್ ರೋಗಿಗಳ ಸಂಖ್ಯೆ ದಿನ ಕಳೆದಂತೆ ಹೆಚ್ಚಾಗುತ್ತಿದ್ದು, ಮುಖ್ಯವಾಗಿ ಕಿಡ್ನಿ ವೈಫಲ್ಯಕ್ಕೆ ಡಯಾಬಿಟಿಸ್ ಕಾರಣ. 100 ಮಂದಿ ಮಧುಮೇಹಿಗಳಲ್ಲಿ ಸುಮಾರು 18 ಜನರಿಗೆ ಕಿಡ್ನಿ ವಿಫಲತೆ ಕಂಡು ಬರಬಹುದು. ಕಿಡ್ನಿ ವೈಫಲ್ಯಕ್ಕೆ ಕಿಯಾಟಿನ್ ಪರೀಕ್ಷೆ ಮಾಡಿಸಿದ ನಂತರ ಈ ರೋಗಕ್ಕೆ ಚಿಕಿತ್ಸೆ ನೀಡಬಹುದು ಎಂದು ತಿಳಿಸಿದರು.

ಒತ್ತಡದಿಂದಲೂ ಕಿಡ್ನಿ ಸಮಸ್ಯೆ ಎದುರಾಗಬಹುದು. ಈ ರೋಗ ಕೊನೆ ಸ್ಟೇಜಿಗೆ ಬಂದಾಗ ಅರಿವಾಗುತ್ತದೆ ಎಂದು ತಿಳಿಸಿದರು. ಭಾರತದಲ್ಲಿ 10 ಲಕ್ಷ ಮಂದಿಗೆ 800 ಜನರಲ್ಲಿ ಕಿಡ್ನಿ ಸಮಸ್ಯೆ ಕಂಡು ಬರುತ್ತಿದೆ. ಐದು ಹಂತದಲ್ಲಿ ಈ ಸಮಸ್ಯೆ ಬರುತ್ತದೆ. ಕಿಡ್ನಿ ವೈಫಲ್ಯಕ್ಕೆ ಜೀವಿತಾವಧಿ ಡಯಾಲಿಸಿಸ್ ಮಾಡಿಸಬೇಕಾಗುತ್ತದೆ. ಆದರೆ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಿದರೆ ಡಯಾಲಿಸಿಸ್ ಸಮಸ್ಯೆ ಎದುರಾಗುವುದಿಲ್ಲ ಎಂದರು.

10 ವರ್ಷದ ಹಿಂದೆ ಟ್ರಾನ್ಸ್ ಪ್ಲಾಂಟ್ ಸೌಲಭ್ಯ ಇರಲಿಲ್ಲ. ಈಗ ಎಲ್ಲಾ ತಾಲೂಕು ಮತ್ತು ಜಿಲ್ಲಾ ಕೇಂದ್ರದಲ್ಲಿ ಈ ಸೌಲಭ್ಯಗಳಿದೆ. ಹಿಮೋ ಮತ್ತು ಪೆರಿಟೋರಿಯಲ್ ಎನ್ನುವ ಎರಡು ಬಗೆಯಲ್ಲಿ ಡಯಾಲಿಸಿಸ್ ಮಾಡಬಹುದು. ಇದಕ್ಕಿಂತ ಉತ್ತಮ ಎಂದರೆ ಕಿಡ್ನಿ ಕಸಿ ಮಾಡಿಸುವುದು ಎಂದರು. ವ್ಯಕ್ತಿಯ ಬ್ರೈನ್ ಡೆಡ್ ಆದಾಗ ಅವರ ಕುಟುಂಬದವರು ಸಮಲೋಚನೆ ನಡೆಸಿ ಅಂಗಾಂಗವನ್ನು ದಾನ ಮಾಡಿದರೆ ಅದನ್ನು ತೆಗೆದುಕೊಳ್ಳಬಹುದು. ಭಾರತದಲ್ಲಿ ಒಂದೇ ಕುಟುಂಬದವರಿಂದ ಕಿಡ್ನಿ ಪಡೆದು ಟ್ರಾನ್ಸ್ ಪ್ಲಾಂಟ್ ಮಾಡಲಾಗುತ್ತಿದೆ ಎಂದು ಹೇಳಿದರು.



ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವ ಡಾ.ಬಿ.ಟಿ.ಅನಿಲ್ ಕುಮಾರ್.

ಬೆಂಗಳೂರು, ಮೈಸೂರು, ಗುಲ್ಬರ್ಗ, ಮಂಗಳೂರು ಸೇರಿದಂತೆ ಐದು ವಲಯಗಳಲ್ಲಿ ಕಿಡ್ನಿ ದಾನ ಮಾಡುವವರು ಹೆಸರನ್ನು ನೋಂದಣಿ ಮಾಡಬಹುದು ಎಂದು ತಿಳಿಸಿದ ಅವರು, ಒಂದು ವ್ಯಕ್ತಿಗೆ ಕಿಡ್ನಿ ಕಸಿ ಮಾಡಲು ಐದು ವರ್ಷ ಕಾಯಬೇಕಾಗುತ್ತದೆ. ಕಿಡ್ನಿ ಕಸಿ ಮಾಡುವುದರಿಂದ ಸಾಮಾನ್ಯ ವ್ಯಕ್ತಿಯಂತೆ ಜೀವನ ಸಾಗಿಸಬಹುದು. ಎಲ್ಲಾ ಕೆಲಸಗಳನ್ನು ಮಾಡುವ ಶಕ್ತಿ ಇರುತ್ತದೆ. ಜೊತೆಗೆ ಔಷಧಿಗಳನ್ನು ಜೀವನ ಪರ್ಯಂತ ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ತೊಂದರೆ ಆಗುತ್ತದೆ ಎಂದರು.

ಈ ಸಂದರ್ಭದಲ್ಲಿ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡಾ.ಶಿವಕುಮಾರ್, ಡಾ.ನರೇಂದ್ರ, ಕಿಡ್ನಿ ಕಸಿ ಮಾಡಿಸಿಕೊಂಡ ವ್ಯಕ್ತಿ ಹೇಮಂತ್‌ಕುಮಾರ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಪಿ.ಪ್ರಕಾಶ್, ಉಪಾಧ್ಯಕ್ಷ ನವೀನ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಆನಂದ್, ಖಜಾಂಚಿ ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ಗ್ರಾಮ ಲೆಕ್ಕಾಧಿಕಾರಿಗಳ ಮೌನ ಪ್ರತಿಭಟನೆ



ಶಾಸಕ ರಮೇಶ್ ಬಂಡಿಸಿದ್ದೇಗೌಡರಿಗೆ ಬೇಡಿಕೆ ಈಡೇರಿಸುವಂತೆ ಮನವಿ ಪತ್ರ ಸಲ್ಲಿಸಲಾಯಿತು.

ಶ್ರೀರಂಗಪಟ್ಟಣ, ಸೆ.28– ಗ್ರಾಮ ಆಡಳಿತಾಧಿಕಾರಿಗಳ ಹುದ್ದೆಗೆ ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿ ನೀಡಬೇಕು ಎಂಬ ಬೇಡಿಕೆ ಸೇರಿದಂತೆ ನಾನಾ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ವತಿಯಿಂದ ಕಪ್ಪು ಪಟ್ಟಿ ಧರಿಸಿ, ಮೌನ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರು ರಾಜ್ಯ ಸಂಘದ ಕಾರ್ಯಕಾರಿಣಿ ಸಭೆಯ ನಿರ್ಣಯದಂತೆ ತಾಲೂಕು ಅಧ್ಯಕ್ಷ ರಮೇಶ್ ಅವರ ನೇತೃತ್ವದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಮುಷ್ಕರ ನಡೆಸಿದರು.

ಕಂದಾಯ ಇಲಾಖೆಯಿಂದ ನಿರಂತರವಾಗಿ ಅಭಿವೃದ್ಧಿ ಪಡಿಸಿರುವ ವೆಬ್ ಹಾಗೂ ಮೊಬೈಲ್ ತಂತ್ರಾಂಶಗಳ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಹಾಗೂ ಸಿ–ವೃಂದದ ನೌಕರರ ಶೇ.10ರಷ್ಟು ಕೆಲಸಗಳ ಜವಾಬ್ದಾರಿಯನ್ನು ವಹಿಸುತ್ತಿರುವುದರಿಂದ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯನ್ನು ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿಯನ್ನು ನೀಡಬೇಕು. ಜೊತೆಗೆ ಕೇಂದ್ರ ಸ್ಥಾನಗಳಲ್ಲಿ ಗ್ರಾಮ ಆಡಳಿತ ಅಧಿಕಾರಿಗಳಿಗೆ ಸುಸಜ್ಜಿತವಾದ ಕಚೇರಿ, ಟೇಬಲ್, ಕುರ್ಚಿ, ಅಲ್ಮೆರಾ, ಅತ್ಯುತ್ತಮ ಗುಣಮಟ್ಟದ ಮೊಬೈಲ್ ಫೋನ್, ಗೂಗಲ ಕ್ರೋಮ್ ಅಥವಾ ಲ್ಯಾಪ್ ಟಾಪ್, ಪ್ರಿಂಟರ್ ಮತ್ತು ಸ್ಕ್ಯಾನರ್‌ಗಳ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಒತ್ತಾಯಿಸಿದರು.

ಶಾಸಕರಿಗೆ ಮನವಿ: ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ವತಿಯಿಂದ ವಿವಿಧ ಬೇಡಿಕೆಗಾಗಿ ನಡೆಯುತ್ತಿದ್ದ ಮೌನಯುತ ಪ್ರತಿಭಟನಾ ಸ್ಥಳಕ್ಕೆ ಶಾಸಕ ರಮೇಶ ಬಾಬು ಬಂಡಿಸಿದ್ದೇಗೌಡ ಆಗಮಿಸಿ ನೌಕರರ ಸಮಸ್ಯೆಗಳನ್ನು ಆಲಿಸಿದರು. ಈ ವೇಳೆ ಪ್ರತಿಭಟನಾ ನೌಕರರು ಮನವಿ ಸಲ್ಲಿಸಿ ಸರ್ಕಾರದ ಗಮನ ಸೆಳೆಯುವಂತೆ ಒತ್ತಾಯಿಸಿದರು.

ಈ ವೇಳೆ ಸಂಘದ ಕಾರ್ಯದರ್ಶಿ ಮಹೇಂದ್ರ, ಖಜಾಂಚಿ ಉಮೇಶ್ ಸೇರಿದಂತೆ ತಾಲೂಕಿನ ಎಲ್ಲಾ ಗ್ರಾಮ ಆಡಳಿತಾಧಿಕಾರಿಗಳು ಹಾಜರಿದ್ದರು.

ಕೃಷಿಯ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಿ



ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಚಿನಕುರಳಿ: ಹೈನುಗಾರಿಕೆ ರೈತರಿಗೆ ಆರ್ಥಿಕವಾಗಿ ಸಹಕಾರಿಯಾಗಿದ್ದು, ರೈತರು ಕೃಷಿಯ ಜತೆಗೆ ಹೈನುಗಾರಿಯಲ್ಲೂ ತೊಡಗಿಸಿಕೊಳ್ಳಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದರು.

ತಾಲೂಕಿನ ಚಿನಕುರಳಿಯ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಾಲು ಉತ್ಪಾದಕರ ಸಹಕಾರ ಸಂಘಗಳು ರೈತ ಕುಟುಂಬಗಳ ಆರ್ಥಿಕ ನಿರ್ವಹಣೆಗೆ ಸಹಕಾರಿಯಾಗುತ್ತಿವೆ. ರೈತರು ಹೆಚ್ಚಿನ ಮಟ್ಟದಲ್ಲಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಹಾಲು ಉತ್ಪಾದನೆ ಮಾಡುವ ಮೂಲಕ ಆರ್ಥಿಕ ಸಬಲೀಕರಣಗೊಳ್ಳಬೇಕು ಎಂದು ತಿಳಿಸಿದರು. ರೈತರು ಡೇರಿಗಳಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು, ಡೇರಿಯ ಅಧಿಕಾರಿಗಳು ಸಹ ರೈತರಿಗೆ ಉತ್ತಮವಾದ ರೀತಿಯಲ್ಲಿ ಮಾರ್ಗದರ್ಶನ ನೀಡಬೇಕು. ಚಿನಕುರಳಿ ಡೇರಿಯ ಆಡಳಿತ ಮಂಡಳಿ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಿ ಡೇರಿಗೆ ಲಾಭತಂದಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ತಾಪಂ ಮಾಜಿ ಸದಸ್ಯರಾದ ಸಿ.ಎಸ್.ಗೋಪಾಲಗೌಡ, ಗಂಗಾಧರ್, ಗ್ರಾಪಂ ಅಧ್ಯಕ್ಷೆ ಗಾಯಿತ್ರಿಕುಮಾರ್, ಉಪಾಧ್ಯಕ್ಷ ಶ್ರೀನಿವಾಸ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮಂಜುನಾಥ್, ಗ್ರಾಪಂ ಮಾಜಿ ಸದಸ್ಯ ಕಾಳೇಗೌಡ, ಸದಸ್ಯ ಸಿ.ಎ.ಲೋಕೇಶ್, ಪಶುವೈದ್ಯ ಡಾ.ಸಂತೋಷ್, ಮಾರ್ಗವಿಸ್ತರ್ಣಾಧಿಕಾರಿ ನಾಗೇಂದ್ರಕುಮಾರ್, ಮುಖಂಡ ಸಿ.ಡಿ.ಮಹದೇವ್ರ, ಡೇರಿ ಉಪಾಧ್ಯಕ್ಷ ಸಿ.ಆರ್.ರಮೇಶ್, ನಿರ್ದೇಶಕರಾದ ಆರ್.ವರದರಾಜು, ಸಿ.ಎಂ.ರಮೇಶ್, ಸಿ.ಎಸ್. ಲೋಕೇಶ್, ಸಿ.ಎ.ಮಂಜುನಾಥ್, ಸಿ.ಎಸ್.ಕೆಂಪೇಗೌಡ, ಸಿ.ಬಿ.ನಾರಾಯಣಚಾರಿ, ಯೋಗೇಂದ್ರ, ವರಲಕ್ಷ್ಮೀ, ಯಶೋಧಮ್ಮ, ಹೇಮಾ ಪುಟ್ಟಯ್ಯ, ಕಾರ್ಯದರ್ಶಿ ಸಿ.ಕೆ.ಲೋಕೇಶ್, ಪರೀಕ್ಷಕ ಸಿ.ಆರ್.ಯೋಗೇಶ್, ಸಿ.ಪಿ.ಜಗದೀಶ್, ಯಶ್ವಂತ್ ಇದ್ದರು.

10 ದಿನಗಳ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ

ಪಾಂಡವಪುರ, ಸೆ.28– ಪಟ್ಟಣದ ಲಯನ್ಸ್ ಕ್ಲಬ್ ಆಫ್ ಫ್ರೆಂಚ್‌ರಾಕ್ಸ್ ಸಂಸ್ಥೆಯಿಂದ ತಾಲೂಕಿನ ವಿವಿಧಡೆ 10 ದಿನಗಳ ಕಾಲ ಹಮ್ಮಿಕೊಂಡಿರುವ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮಕ್ಕೆ ಹಳೇಬೀಡು ಗ್ರಾಮದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ತಾಲೂಕಿನ ಹಳೇಬೀಡು ಗ್ರಾಮದಲ್ಲಿ ನಡೆಯುತ್ತಿರುವ ಸರಕಾರಿ ಸೇವೆಗಳು ಮನೆ ಬಾಗಿಲಿಗೆ ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ ಆಫ್ ಫ್ರೆಂಚ್‌ರಾಕ್ಸ್ ಪಾಂಡವಪುರ, ಅಂತರಾಷ್ಟ್ರೀಯ ಲಯನ್ ಸಂಸ್ಥೆ, ಲಯನ್ಸ್‌ಕ್ಲಬ್ ಆಫ್ ಬೆಂಗಳೂರು ಈಸ್ಟ್ ಪ್ರಾಜೆಕ್ಟ್, ನಯನಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮೈಸೂರು. ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮೈಸೂರು. ಆಪ್ತ ಪಾಲಿ ಕ್ಲಿನಿಕ್ ಮತ್ತು ಡೇ ಕೇರ್ ಸೆಂಟರ್ ಪಾಂಡವಪುರ ಹಾಗೂ ಪ್ರಕಾಶ್ ಗ್ಯಾಸ್ ಏಜೆನ್ಸಿ ಸಂಯುಕ್ತಾಶ್ರಯದಲ್ಲಿ 10 ದಿನಗಳ ಕಾಲ ತಾಲೂಕಿನ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಲಯನ್ಸ್ ಕ್ಲಬ್ ಆಫ್ ಸಂಸ್ಥೆಯೂ ಆರೋಗ್ಯ ತಪಾಸಣೆ ಶಿಬಿರಗಳನ್ನು ಆಯೋಜನೆ ಮಾಡುವ ಮೂಲಕ ಅನುಕೂಲ ಮಾಡಿಕೊಡುತ್ತಿದೆ. ಜನರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಜನರಿಗೆ ಪ್ರಮುಖವಾಗಿ ಬಹುದೊಡ್ಡ ಸಮಸ್ಯೆ ಎಂದರೆ ಅದು ಆರೋಗ್ಯ ಸಮಸ್ಯೆಯಾಗಿದೆ. ಇಂತಹ ಶಿಬಿರಗಳು ಜನರ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಿವೆ ಎಂದರು.



ಪಾಂಡವಪುರ ತಾಲೂಕಿನ ಹಳೇಬೀಡು ಗ್ರಾಮದಲ್ಲಿ ಲಯನ್ಸ್ ಕ್ಲಬ್ ಆಫ್ ಫ್ರೆಂಚ್‌ರಾಕ್ಸ್ ಸಂಸ್ಥೆ ವತಿಯಿಂದ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ತಹಶೀಲ್ದಾರ್ ಸಂತೋಷ್, ಸಂಸ್ಥೆ ತಾಲೂಕು ಅಧ್ಯಕ್ಷ ಕರೀಗೌಡ ಮಾತನಾಡಿದರು. ಸಂದರ್ಭದಲ್ಲಿ ತಾಪಂ ಇಓ ಲೋಕೇಶ್ ಮೂರ್ತಿ, ಸಂಸ್ಥೆ ಕಾರ್ಯದರ್ಶಿ ಪುಟ್ಟ ಬಸವೇಗೌಡ, ಡಾ॥ಕೆ.ಆರ್. ಸ್ವಾಮಿಗೌಡ, ಗ್ರಾಪಂ ಅಧ್ಯಕ್ಷ ಧನಂಜಯ, ಉಪಾಧ್ಯಕ್ಷೆ ಗೌರಮ್ಮ, ಸದಸ್ಯೆ ಪುಟ್ಟೇಗೌಡ, ಲಯನ್ಸ್ ಸದಸ್ಯರಾದ ದಯಾನಂದ, ವಿಜಯೇಂದ್ರ, ವಿಜಿಕುಮಾರ್, ತಿಮ್ಮೇಗೌಡ, ಡಾ.ಸಿ.ಎ.ಅರವಿಂದ್ ಸೇರಿದಂತೆ ಹಲವರು ಇದ್ದರು.

ಅ.8, ಅಂಚೆ ಅದಾಲತ್

ಮಂಡ್ಯ,ಸೆ.28– ಮಂಡ್ಯ ವಿಭಾಗದ ಅಂಚೆ ಅಧೀಕ್ಷಕರ ಕಛೇರಿಯಲ್ಲಿ ಅಂಚೆ ಅದಾಲತ್ ಅನ್ನು ಅ.8 ರಂದು ಮಧ್ಯಾಹ್ನ 3 ಗಂಟೆಗೆ ಏರ್ಪಡಿಸಲಾಗಿದೆ. ಸಾರ್ವಜನಿಕರು ಅಂಚೆ ಸೇವೆಗಳ ಬಗ್ಗೆ ಕುಂದು ಕೊರತೆಗಳಿದ್ದರೆ ಸೆ.30 ರೊಳಗೆ ಅಂಚೆ ಅಧೀಕ್ಷಕರ ಕಛೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದು.

ಕಾಳಯ್ಯ ನಿಧನ

ಕೆ.ಆರ್.ಪೇಟೆ: ತಾಲೂಕಿನ ರಾಯಸಮುದ್ರ ಗ್ರಾಮದ ಹಿರಿಯ ಮುಖಂಡರು, ಮಂಡ್ಯ ಜಿ.ಪಂ ಮಾಜಿ ಅಧ್ಯಕ್ಷರು ಹಾಗೂ ಪ್ರಥಮ ದರ್ಜೆ ವಿದ್ಯುತ್ ಗುತ್ತಿಗೆದಾರರಾದ ಆರ್.ಕೆ.ಕುಮಾರ್ ಅವರ ತಂದೆ ಕಾಳಯ್ಯ(87) ಶನಿವಾರ ನಿಧನರಾದರು.



ಮೃತರು ಇಬ್ಬರು ಪುತ್ರರು ಹಾಗೂ ನಾಲ್ವರು ಪುತ್ರಿಯರು, ಮೊಮ್ಮೊಕ್ಕಳು, ಸೊಸೆಯಂದಿರು, ಅಳಿಯಂದಿರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಸೆ.29ರಂದು ಸ್ವಗ್ರಾಮ ರಾಯಸಮುದ್ರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಬನ್ನಿ, ನೋಡೇ ಬಿಡೋಣ!

ನೇತೃತ್ವದ ಬಿಜೆಪಿ ಕಾರ್ಯಕರ್ತರ ತಂಡ ಚಾಮುಂಡಿ ಬೆಟ್ಟ ಚಲೋ ಹಮ್ಮಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡ ಜಿಲ್ಲಾಡಳಿತವು ಎರಡೂ ಕಡೆಯವರಿಗೆ ಚಾಮುಂಡಿ ಬೆಟ್ಟ ಪ್ರವೇಶಕ್ಕೆ ಅನುಮತಿ ನೀಡಲಿಲ್ಲ ಹೀಗಾಗಿ ಪುರಭವನದಲ್ಲಿ ಮಹಿಷಾ ದಸರಾ ಆಚರಣೆಯ ವೇದಿಕೆ ಕಾರ್ಯಕ್ರಮ ಮಾತ್ರ ನಡೆದಿತ್ತು. ಈ ಬಾರಿ ಮಹಿಷ ಮಂಡಲೋತ್ಸವ ಆಚರಿಸಿ ಮಹಿಷನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಗುವುದು ಎಂದು ಸಮಿತ ಅಧ್ಯಕ್ಷ ಪುರುಷೋತ್ತಮ್ ತಿಳಿಸಿದ್ದಾರೆ. ಈ ಬಗ್ಗೆ ಶುಕ್ರವಾರ ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಅವರು ಈ ಬಾರಿ ನಮ್ಮ ಆಚರಣೆಗೆ ಜಿಲ್ಲಾಡಳಿತ ಸಹಕರಿಸಬೇಕು. ಪ್ರತಿಮೆಗೆ ಸುಣ್ಣಬಣ್ಣ ಬಳಿಯುವ ನೆಪದಲ್ಲಿ ಮುಸುಕು ಹಾಕಲು ಮುಂದಾಗಬಾರದು. ಕಳೆದ ಮೂರ್ನಾಲ್ಕು ವರ್ಷದಿಂದ ಇದೇ ನಡೆದುಕೊಂಡು ಬರುತ್ತಿದ್ದು ನಮ್ಮ ತಾಳ್ಮೆಗೂ ಮಿತಿ ಇದೆ ಎಂದು ಎಚ್ಚರಿಸಿದ್ದರು.

ಎಫ್‌ಐಆರ್

ಚುನಾವಣಾ ಬಾಂಡ್‌ಗಳನ್ನು 2018ರ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿತ್ತು. ಅದಾದ ಬಳಿಕ ಬಾಂಡ್‌ಗಳು ಸಾರ್ವಜನಿಕವಾಗಿ ಬಳಕೆಗೆ ಬಂದವು. ನಿಗದಿತ ಬ್ಯಾಂಕ್ ಶಾಖೆಗಳಲ್ಲಿ ಈ ಬಾಂಡ್‌ಗಳನ್ನು ಹಣ ಕೊಟ್ಟು ಖರೀದಿಸುವ ಮೂಲಕ ಯಾವುದೇ ರಾಜಕೀಯ ಪಕ್ಷಕ್ಕೆ ದೇಣಿಗೆ ನೀಡಲು ಅವಕಾಶ ನೀಡಲಾಗಿತ್ತು. ಆ ಮೂಲಕ ರಾಜಕೀಯ ಪಕ್ಷಗಳಿಗೆ ಬರುವ ದೇಣಿಗೆಯನ್ನು ಪಾರದರ್ಶಕವಾಗಿಸುವ ಪ್ರಯತ್ನ ಅದಾಗಿತ್ತು. ಆದರೆ, ದೇಣಿಗೆ ನೀಡಿದವರ ಹೆಸರುಗಳನ್ನು ಬಹಿರಂಗ ಪಡಿಸಲು ಬ್ಯಾಂಕುಗಳು ನಿರಾಕರಿಸಿದ್ದವು.

ಕಾಲಾನುಕ್ರಮದಲ್ಲಿ ನಾನಾ ಸರ್ಕಾರೇತರ ಸಂಸ್ಥೆಗಳು, ಆರ್‌ಟಿಐ ಕಾರ್ಯಕರ್ತರು ನೀಡಿದ ದೇಣಿಗೆಯ ರೂಪದಲ್ಲಿ ಸಾವಿರಾರು ಕೋಟಿ ರೂ.ಗಳ ರಾಜಕೀಯ ಪಕ್ಷಕ್ಕೆ ಸಂದಾಯವಾಗಿದೆ ಎಂಬ ವಿಚಾರ ಬೆಳಕಿಗೆ ಬಂದಿತ್ತು. ಅವುಗಳಲ್ಲಿ ಸಿಂಹಪಾಲು ಬಿಜೆಪಿಗೇ ಹೋಗಿರುವುದು, ಹಾಗೂ ನಾನಾ ಖಾಸಗಿ ಕಂಪನಿಗಳು ಸಾವಿರಾರು ಅಥವಾ ನೂರಾರು ಕೋಟಿ ರೂ.ಗಳನ್ನು ಬಿಜೆಪಿಗೆ ದೇಣಿಗೆ ನೀಡಿರುವುದು ಬೆಳಕಿಗೆ ಬಂದಿತ್ತು. ಈ ವಿಚಾರ ಸುಪ್ರೀಂಕೋರ್ಟ್‌ಗೆ ಹೋಗಿ ನ್ಯಾಯಾಲಯವು ಚುನಾವಣಾ ಬಾಂಡ್‌ಗಳನ್ನು ಕಾನೂನು ಬಾಹಿರ ಎಂದು ಘೋಷಿಸಿತು.

ನಿರ್ಮಲಾ ಸೀತಾರಾಮನ್ ರಾಜೀನಾಮೆ ನೀಡಲಿ: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಬೆಂಗಳೂರಿನ ಜನಪ್ರತಿನಿಧಿ ನ್ಯಾಯಾಲಯ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಅವರು (ನಿರ್ಮಲಾ) ರಾಜೀನಾಮೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ನನ್ನ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಬಿಜೆಪಿ ನಾಯಕರು ನನ್ನ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದಾರೆ.

ತನಿಖೆಗೆ 4 ತಂಡ ರಚನೆ?

ಆರೋಪಿಗಳ ಲಿಖಿತ ಹೇಳಿಕೆ ದಾಖಲಿಸುವುದು, ಅಗತ್ಯ ಬಿದ್ದಾಗ ಸಂಬಂಧಪಟ್ಟ ಅಧಿಕಾರಿಗಳನ್ನೂ ವಿಚಾರಣೆಗೆ ನೋಟಿಸ್ ನೀಡಿ ಕರೆಸಿ ಹೇಳಿಕೆ ಪಡೆಯುವ ಜವಾಬ್ದಾರಿಯನ್ನೂ ಲೋಕಾಯುಕ್ತ ಪೊಲೀಸ್ ತನಿಖಾ ತಂಡಕ್ಕೆ ವಹಿಸಲಾಗಿದೆ ಎನ್ನಲಾಗಿದೆ. ನಿನ್ನೆಯಷ್ಟೇ ಲೋಕಾಯುಕ್ತ ಎಸ್ಪಿ ಉದೇಶ ತಮ್ಮ ಕಚೇರಿಯಲ್ಲಿ ಅಧೀನಾಧಿಕಾರಿಗಳೊಂದಿಗೆ ಸಭೆ ನಡೆಸಿ, ಮುಖ್ಯಮಂತ್ರಿಗಳ ವಿರುದ್ಧ ದಾಖಲಾಗಿರುವ ಪ್ರಕರಣ ಸಂಬಂಧ ಮುಕ್ತ ಹಾಗೂ ನ್ಯಾಯಸಮ್ಮತ ತನಿಖೆ ನಡೆಸಿ 3 ತಿಂಗಳೊಳಗಾಗಿ ನ್ಯಾಯಾಲಯಕ್ಕೆ ವರದಿ ನೀಡಬೇಕಾಗಿರುವುದರಿಂದ ಯಾವ ಹಂತದಲ್ಲೂ ಲೋಪವಾಗದಂತೆ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕೆಂದೂ ಉದೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಹೈಕೋರ್ಟ್ ಮೊರೆ: ದೂರುದಾರ ಸ್ನೇಹಮಯಿ ಕೃಷ್ಣ ಸಿಬಿಐಗೆ ತನಿಖೆ ಒಪ್ಪಿಸಬೇಕೆಂದು ಶುಕ್ರವಾರ ಸಲ್ಲಿಸಿರುವ ಮನವಿ ಅರ್ಜಿ ವಿಚಾರಣೆ ಸೆಪ್ಟೆಂಬರ್ 30ರಂದು ಹೈಕೋರ್ಟ್ ವಿಚಾರಣೆ ನಡೆಸುವ ಸಾಧ್ಯತೆ ಇದೆ ಎಂದು ಸ್ನೇಹಮಯಿ ಕೃಷ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ತಾನು ಈ ಪ್ರಕರಣದಲ್ಲಿ ಮಧ್ಯ ಪ್ರವೇಶಿಸಿ ಕೋಟ್ಯಾಂತರ ರೂ. ಮೌಲ್ಯದ ಆಸ್ತಿ ವಿಚಾರವಾಗಿರುವುದರಿಂದ ಪರಿಶೀಲನೆ ನಡೆಸಬೇಕೆಂದು ಸೋಮವಾರ ಜಾರಿ ನಿರ್ದೇಶನಾಲಯ (ಇಡಿ)ದ ನಿರ್ದೇಶಕರಿಗೂ ಮನವಿ ಸಲ್ಲಿಸುವುದಾಗಿಯೂ ತಿಳಿಸಿದ್ದಾರೆ. ತನಿಖೆ ಸಂಬಂಧ ಪ್ರತಿಕ್ರಿಯೆ ಪಡೆಯಲು 'ಮೈಸೂರು ಮಿತ್ರ' ಯತ್ನಿಸಿತಾದರೂ ಲೋಕಾಯುಕ್ತ ಎಸ್ಪಿ ಉದೇಶ ದೂರವಾಣಿ ಸಂಪರ್ಕಕ್ಕೆ ಸಿಗಲಿಲ್ಲ.

ರಿಲ್ಯಾಕ್ಸ್‌ಗೆ ಮಡಿಕೇರಿಗೆ ಹೋಗ್ತಿದ್ದೀನಿ!

ತಿಳಿಯಬೇಡಿ, ಸಾಮಾನ್ಯವಾಗಿ ಬರುತ್ತದಲ್ಲ ಆ ತಲೆ ನೋವು ಇದು ಎಂದರು. ಸಿದ್ದರಾಮಯ್ಯ ಜೊತೆ ಉಪಹಾರ ಸ್ವೀಕರಿಸಿ, ಕೆಲ ಸಮಯ ಮಾತುಕತೆ ನಂತರ ಮಡಿಕೇರಿಗೆ ಹೋಗುತ್ತಿದ್ದೇನೆ. ಬೇರೆ ಕಾರಣಕ್ಕೆ ತಲೆ ನೋವು ಇದೆ. ಅದಕ್ಕೆ ರಿಲ್ಯಾಕ್ಸ್‌ಗಾಗಿ ಮಡಿಕೇರಿಗೆ ಹೋಗುತ್ತಿದ್ದೇನೆ. ನಮಗೆ ಮುಡಾ ಪ್ರಕರಣ ತಲೆ ನೋವು ಅನ್ನಿಸುತ್ತಿಲ್ಲ ಎಂದು ಪುನರ್ ಸ್ಪಷ್ಟಪಡಿಸಿದರು. ಸಿದ್ದರಾಮಯ್ಯ ವಿರುದ್ಧ ನಿನ್ನೆ ದಾಖಲಾದ ಎಫ್‌ಐಆರ್ ನಿರೀಕ್ಷಿತ. ಅದು ನಮಗೆ ಗೊತ್ತಿತ್ತು. ಇದನ್ನು ನಾವು ಕಾನೂನಾತ್ಮಕವಾಗಿ ಎದುರಿಸುತ್ತೇವೆ ಎಂದು ಅವರು ಹೇಳಿದರು.

ಮೈಸೂರು ಹಾದಿ–ಬೀದಿಯಲ್ಲಿ ಆನೆಗಳ ಚಿತ್ರ ಬಿಡಿಸಿ ಅಪಚಾರ!

ಚಪ್ಪಲಿ ಕಾಲಿನಿಂದ ತುಳಿಯುವುದಾ... ವಾಹನಗಳು ಹಾದು ಹೋಗುವುದಾ ಕಂಡು ಆಸ್ತಿಕರಲ್ಲಿ ಆಘಾತ!





ಮೈಸೂರು, ಸೆ.28–ಹಿಂದೂ ಪರಂಪರೆಯಲ್ಲಿ ಆನೆಗಳಿಗೆ ಪವಿತ್ರ ಹಾಗೂ ಮಹತ್ವದ ಸ್ಥಾನವಿದೆ. ಆನೆಯನ್ನು ಗಜಾನನ ಪ್ರತಿರೂಪ ಪೂಜನೀಯ ಭಾವನೆಯು ಇದೆ. ಆನೆಯ ದರ್ಶನ ಹಾಗೂ ಆರಾಧನೆ ಶ್ರೇಯಸ್ಕರ ಎಂಬ ನಂಬಿಕೆ ಬಲವಾಗಿದೆ.

ವಿಶ್ವ ವಿಖ್ಯಾತ ಮೈಸೂರು ದಸರೆಯಲ್ಲಿ ಪ್ರಾರಂಭದಿಂದ ಕೊನೆಯವರೆಗೂ ಗಜಪಡೆಯದ್ದೇ ಮೇರು. ಗಜಪಡೆ ಇಲ್ಲದೆ ದಸರಾವೇ ಇಲ್ಲ ಎಂಬುದು ಸತ್ಯ. ಆದರೆ ದಸರಾ ಹೆಸರಿನಲ್ಲಿ ಆನೆಗಳಿಗೆ ಮಹತ್ವ ನೀಡುತ್ತಿದ್ದೇವೆ ಎಂಬ ಭ್ರಮೆಯಲ್ಲಿ ಮೈಸೂರು ಜಿಲ್ಲಾಡಳಿತ ಆನೆಯ ಮೇಲಿನ ನಂಬಿಕೆಗೆ ಘಾಸಿಯನ್ನುಂಟು ಮಾಡಿದೆ. ಮೈಸೂರಿಗರು ಮಾತ್ರವಲ್ಲ, ಇಲ್ಲಿಗೆ ಆಗಮಿಸುವ ಪ್ರವಾಸಿಗರ ಮನಸ್ಸನ್ನು ನೋಯಿಸುವ ಕೆಲಸಕ್ಕೆ ಜಿಲ್ಲಾಡಳಿತ ಕೈಹಾಕಿದೆ.

ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಪವಿತ್ರ ಸ್ಥಾನವನ್ನು ಹೊಂದಿರುವ ಆನೆಯ ಚಿತ್ರವನ್ನು ಕಂಡ ಕಂಡ ರಸ್ತೆಗಳಲ್ಲಿ ರಚಿಸುವ ಮೂಲಕ ಆಸ್ತಿಕ ಮಹಾಶಯರ ಭಾವನೆಗೆ ಅಪಚಾರವೆಸಗಲಾಗಿದೆ. ಆನೆ ಚಿತ್ರದ ಮೇಲೆ ಜನರು ಚಪ್ಪಲಿ ಕಾಲಿನಲ್ಲಿ ನಡೆದಾಡುವಂತಹ ಪರಿಸ್ಥಿತಿಯನ್ನು ಜಿಲ್ಲಾಡಳಿತ ನಿರ್ಮಿಸಿದೆ. ಆನೆಯ ಚಿತ್ರದ ಮೇಲೆಯೇ ವಾಹನಗಳು ಓಡಾಡುತ್ತಿದ್ದು, ಟಯರ್‌ಗಳ ಗುರುತು ಮೂಡುತ್ತಿದೆ. ಆನೆ ಚಿತ್ರದ ಮೇಲೆಲ್ಲಾ ವಾಹನಗಳ ಟಯರ್ ಗುರುತುಗಳು ಬಾಸುಂಡೆ ಬಾರಿಸಿದಂತೆ ಭಾಸವಾಗುತ್ತಿದ್ದು, ಆನೆಯ ಮೇಲೆ ಅಭಿಮಾನ, ನಂಬಿಕೆ ಹೊಂದಿರುವವರು ಜಿಲ್ಲಾಡಳಿತಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ.

ಆನೆಗಳಿಗೆ ಮೈಸೂರು ದಸರೆಯಲ್ಲಿ ಮಾತ್ರವಲ್ಲದೆ, ಭಾರತ ದೇಶದ ಹಲವು ರಾಜ್ಯಗಳಲ್ಲಿ ಮಹತ್ವದ ಸ್ಥಾನವನ್ನು ನೀಡಲಾಗಿದೆ. ಉತ್ತರ ಭಾರತದಲ್ಲಿ ದಸರಾ, ದುರ್ಗೆ ಉತ್ಸವ, ಹೋಳಿ–ಹುಣ್ಣಿಮೆ ಮುಂತಾದ ಹಬ್ಬಗಳಲ್ಲಿ ಆನೆಗಳನ್ನು ಅಲಂಕರಿಸಿ, ಅದರ ಮೇಲೆ ದೇವರ ಮೂರ್ತಿ ಪ್ರತಿಷ್ಠಾಪಿಸಿ ಮೆರವಣಿಗೆ ಮಾಡಲಾಗುತ್ತದೆ. ಕೇರಳದಲ್ಲಿ ತ್ರಿಚೂರು ಪೂರಂ ಹಾಗೂ ಮೆಮ್ಮಾರೆ ವೇಲಾ ಹಬ್ಬಗಳಲ್ಲಿ ರಾತ್ರಿಯಿಡೀ ಅಲಂಕೃತ ಗಜಪಡೆಯ ಮುಂದೆ ಬಾಣ–ಬಿರುಸುಗಳನ್ನು ಬಿಟ್ಟು ಸಂಭ್ರಮಿಸಲಾಗುತ್ತದೆ. ಕೇರಳದ ಯಾವುದೇ ಊರಿನಲ್ಲಿ ಯಾವುದೇ ಹಬ್ಬ ನಡೆದರೂ ಆನೆ ಇಲ್ಲದಿದ್ದರೆ ಕಳೆ ಕಟ್ಟುವುದಿಲ್ಲ. ಎಲ್ಲೇ ಸಾಕಾನೆಗಳ ಕಂಡರೂ ಅವುಗಳ ಮುಟ್ಟಿ, ನಮಸ್ಕರಿಸುತ್ತಾರೆ. ಅವುಗಳಿಗೆ ಹಣ್ಣು–ಹಂಪಲು ನೀಡುತ್ತಾರೆ. ಅಷ್ಟರ ಮಟ್ಟಿಗೆ ಆನೆಯ ಮೇಲಿನ ಭಕ್ತಿ–ಭಾವವನ್ನು ಜನರು ಹೊಂದಿದ್ದಾರೆ. ದಕ್ಷಿಣ ಭಾರತದ ಅನೇಕ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ಆನೆಗಳನ್ನು ಸಾಕಲಾಗುತ್ತದೆ. ಈ ಆನೆಗಳನ್ನು ಪ್ರತೀ ದಿನ ಪೂಜಿಸಲಾಗುತ್ತದೆ. ದೇವಸ್ಥಾನಗಳಿಗೆ ಬರುವ ಭಕ್ತರು ತಪ್ಪದೇ ಆನೆಯನ್ನು ದರ್ಶನ ಮಾಡಿ ಪುನೀತರಾಗುತ್ತಾರೆ. ಇದು ನಮ್ಮ ಪರಂಪರೆ ಹಾಗೂ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಇಂತಹ ಆನೆಗೆ ಮೈಸೂರು ದಸರಾ ಸಂದರ್ಭದಲ್ಲೇ ಜಿಲ್ಲಾಡಳಿತ ಅಪಚಾರ ವೆಸಗಿರುವುದು ತೀವ್ರ ಟೀಕೆಗೆ ಗುರಿಯಾಗಿದೆ. ಸಾಂಸ್ಕೃತಿಕ ನಗರಿಯ ಪಾರಂಪರಿಕ ಸ್ಮಾರಕಗಳ ಸುತ್ತ ಚಿತ್ರ–ವಿಚಿತ್ರವಾದ ಚಿತ್ರಗಳನ್ನು ರಚಿಸುವ ಮೂಲಕ ಅವುಗಳ ಅಂದವನ್ನು ಹಾಳು ಮಾಡಿದ ಕೆಟ್ಟ ಪರಂಪರೆಗೆ ನಾಂದಿ ಹಾಡಿದ್ದ ಮೈಸೂರು ಜಿಲ್ಲಾಡಳಿತ, ಇದೀಗ ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಎಲ್ಲರಲ್ಲೂ ಪೂಜನೀಯ ಸ್ಥಾನ ಹೊಂದಿರುವ ಆನೆಗಳಿಗೆ ಅಪಚಾರವೆಸಗಿರುವುದು ಆಘಾತವನ್ನೇ ಉಂಟು ಮಾಡಿದ್ದು, ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅ.2ರಂದು ರಾಜ್ಯಾದ್ಯಂತ 'ಗಾಂಧಿ ನಡಿಗೆ': ಒಂದು ವರ್ಷ ಕಾರ್ಯಕ್ರಮ ಆಯೋಜನೆ

ಬೆಂಗಳೂರು, ಸೆ.28– ಅ.2ರಂದು ರಾಜ್ಯಾದ್ಯಂತ 'ಗಾಂಧಿ ನಡಿಗೆ' ಹಾಗೂ 'ಸ್ವಚ್ಛತೆಯ ಪ್ರತಿಜ್ಞಾ ಸ್ವೀಕಾರ' ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿಯವರು ಬೆಳಗಾವಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿಕೊಂಡು 100 ವರ್ಷವಾಗಿರುವ ಹಿನ್ನೆಲೆಯಲ್ಲಿ ಒಂದು ವರ್ಷಗಳ ಕಾಲ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಕಾರ್ಯಕ್ರಮದ ಮೊದಲ ಭಾಗವಾಗಿ ಅ.2 ಗಾಂಧಿ ಜಯಂತಿಯಂದು 1 ಕಿ.ಮೀ. 'ಗಾಂಧಿ ನಡಿಗೆ' ಮತ್ತು 'ಸ್ವಚ್ಛತಾ ಪ್ರತಿಜ್ಞಾ ಸ್ವೀಕಾರ' ಅಭಿಯಾನ ಹಮ್ಮಿಕೊಳ್ಳಲಾಗುವುದು. ರಾಜ್ಯಾದ್ಯಂತ ಜಿಲ್ಲಾ, ತಾಲೂಕು ಕೇಂದ್ರ ಹಾಗೂ ಪಾಲಿಕೆ ಮಟ್ಟದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ಬೆಂಗಳೂರಿನಲ್ಲಿ ಬುಧವಾರ ಬೆಳಗ್ಗೆ 9 ಗಂಟೆಗೆ ಗಾಂಧಿ ಭವನದಿಂದ ವಿಧಾನ ಸೌಧದ ಗಾಂಧಿ ಪ್ರತಿಮೆ ವರೆಗೂ ನಡಿಗೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಪಕ್ಷಾತೀತವಾಗಿ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು ಎಂದಿದ್ದಾರೆ.



500 ಶಾಲಾ ಮಕ್ಕಳಿಗೆ ಜೂಮ್ ಮೂಲಕ ಪ್ರತಿಜ್ಞಾವಿಧಿ: ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಇಬ್ಬರ ಜನ್ಮದಿನವೂ ಒಂದೇ ದಿನ ಆಗಿರುವ ಕಾರಣ ಇಬ್ಬರ ಪ್ರತಿಮೆಗೂ ಮಾಲಾರ್ಪಣೆ ಮಾಡಲಾಗುವುದು. ನಂತರ ನಡಿಗೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಹಾಗೂ ಬೆಂಗಳೂರಿನ 500 ಶಾಲಾ, ಕಾಲೇಜು ಮಕ್ಕಳಿಗೆ ಜೂಮ್ ಮೂಲಕ ಪ್ರತಿಜ್ಞಾ ವಿಧಿ ಬೋಧನೆ ಮಾಡಲಾಗುವುದು. ಇದು ಸರ್ಕಾರದ ಕಾರ್ಯಕ್ರಮ, ಗಾಂಧಿ ಅವರ ಆದರ್ಶವನ್ನು ಯುವ ಪೀಳಿಗೆಗೆ ತಲುಪಿಸಲು ಈ ಕಾರ್ಯಕ್ರಮ ರೂಪಿಸಿದೆ ಎಂದರು.

ಶ್ವೇತ ವಸ್ತ್ರ ಧರಿಸಿ ನಡಿಗೆ: ಜಿಲ್ಲಾ ಕೇಂದ್ರದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ತಾಲೂಕು ಮಟ್ಟದಲ್ಲಿ ಸ್ಥಳೀಯ ಶಾಸಕರು ಭಾಗವಹಿಸಲಿದ್ದಾರೆ. ಈ ನಡಿಗೆ ವೇಳೆ ಬಿಳಿ ವಸ್ತ್ರ, ಗಾಂಧಿ ಟೋಪಿ ಧರಿಸಿ ಹೆಜ್ಜೆ ಹಾಕುವಂತೆ ಮನವಿ ಮಾಡಲಾಗುವುದು. ಗಾಂಧಿ ಜಯಂತಿಯನ್ನು ವಿಶಿಷ್ಟವಾಗಿ ಆಚರಣೆ ಮಾಡುತ್ತಿದೆ ಎಂದರು.

ಹಿರಿಯ ಐಪಿಎಸ್ ಅಧಿಕಾರಿ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ಗಂಭೀರ ಆರೋಪ

● ಈ ಅಧಿಕಾರಿ ಬೆನ್ನಿಗೆ ರಾಜ್ಯ ಸರ್ಕಾರ ನಿಂತಿರುವುದಾಗಿ ವಾಗ್ದಾಳಿ ● ರಾಜ್ಯಪಾಲರ ಸಿಬ್ಬಂದಿಯನ್ನೇ ತನಿಖೆಗೆ ಒಳಪಡಿಸುವ ತಂತ್ರ ನಡೆಸಿರುವ ಆರೋಪ

ಬೆಂಗಳೂರು, ಸೆ.28(ಕೆಎಂಶಿ)–ಸರಣಿ ಅಪರಾಧಗಳನ್ನು ಎಸಗಿರುವ ಭ್ರಷ್ಟ ಐಪಿಎಸ್ ಅಧಿಕಾರಿಯೊಬ್ಬರು ರಾಜ್ಯಪಾಲರ ಕಚೇರಿ ಸಿಬ್ಬಂದಿಯನ್ನೇ ತನಿಖೆಗೆ ಒಳಪಡಿಸಲು ಅನುಮತಿ ಕೋರಿದ್ದು, ಈತನಿಗೆ ರಾಜ್ಯ ಕಾಂಗ್ರೆಸ್ ಸರ್ಕಾರದ ಪೂರ್ಣ ಕೃಪಾಕಟಾಕ್ಷವಿದೆ ಎಂದು ಕೇಂದ್ರದ ಭಾರೀ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಗುರುತರ ಆರೋಪ ಮಾಡಿದ್ದಾರೆ.

ಲೋಕಾಯುಕ್ತ ವಿಶೇಷ ತನಿಖಾ ದಳದ ಐಜಿಪಿ ಎಂ.ಚಂದ್ರಶೇಖರ್ ಆ ಭ್ರಷ್ಟ ಅಧಿಕಾರಿಯಾಗಿದ್ದು, ಇಂಥ ದರೋಡೆಕೋರ ಅಧಿಕಾರಿಗಳನ್ನು ಇಟ್ಟುಕೊಂಡು ರಾಜ್ಯ ಸರ್ಕಾರ ತನಿಖೆ ಮಾಡಿಸುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಐಪಿಎಸ್ ಅಧಿಕಾರಿ ಚಂದ್ರಶೇಖರ್ ವಿರುದ್ಧ ಸರಣಿ ದಾಖಲೆಗಳ ಸಮೇತ ಆರೋಪ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ಯಾವ ತನಿಖೆಯೂ ಪಾರದರ್ಶಕವಾಗಿ ನಡೆಯುತ್ತಿಲ್ಲ. ರಾಜಕೀಯ ಸೇಡಿಗಾಗಿ ತನಿಖೆ ನಡೆಸಲಾಗುತ್ತಿದೆ. ಅದಕ್ಕೆ ಚಂದ್ರಶೇಖರ್ ಅವರಂಥ ಕಳಂಕಿತ ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಈ ಅಧಿಕಾರಿ ವಿರುದ್ಧ ಕೇಂದ್ರ ಗೃಹ ಸಚಿವಾಲಯಕ್ಕೆ ದೂರು ನೀಡಲಾಗುವುದು ಎಂದರು.

ನನ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಲೋಕಾಯುಕ್ತಕ್ಕೆ ಬರೆದಿದ್ದ ಅತೀ ಗೌಪ್ಯ ಪತ್ರವೊಂದು ಸೋರಿಕೆಯಾಗಿತ್ತು. ಅದು ನಮ್ಮ ಕುಟುಂಬದ ವಿರುದ್ಧ ಅನೇಕ ತಿಂಗಳಿನಿಂದ ವೈಯಕ್ತಿಕವಾಗಿ ತೇಜೋವಧೆ ಮಾಡುತ್ತಿರುವ ಖಾಸಗಿ ಸುದ್ದಿವಾಹಿನಿಯೊಂದಕ್ಕೆ ಆ ಪತ್ರ ಲಭ್ಯವಾಗಿತ್ತು. ಅದು ಐಜಿಪಿ ಚಂದ್ರಶೇಖರ್ ಅವರಿಂದಲೇ ಸೋರಿಕೆಯಾಗಿದೆ. ಆದರೆ, ಅದೇ ಅಧಿಕಾರಿ ರಾಜ್ಯಪಾಲರ ಕಚೇರಿಯಿಂದಲೇ ಪತ್ರ ಸೋರಿಕೆ ಆಗಿದೆ ಎಂದು ಕಥೆ ಕಟ್ಟಿ ರಾಜ್ಯಪಾಲರ ಕಾರ್ಯಾ



ಲಯದ ಸಿಬ್ಬಂದಿಯನ್ನು ತನಿಖೆಗೆ ಒಳಪಡಿಸಲು ಅನುಮತಿ ಕೊಡುವಂತೆ ಲೋಕಾಯುಕ್ತ ತನಿಖಾ ಸಂಸ್ಥೆಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. ಸಂವಿಧಾನ ಮತ್ತು ರಾಷ್ಟ್ರಪತಿಗಳ ಪ್ರತಿನಿಧಿಯಾಗಿ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುವ ರಾಜ್ಯಪಾಲರ ಕಾರ್ಯಾಲಯದ ಬಗ್ಗೆ ತನಿಖೆಗೆ ಅನುಮತಿ ಕೋರುವ ದರ್ಪವನ್ನು ಈ ಅಧಿಕಾರಿ ತೋರಿಸಿದ್ದಾರೆ. ಈ ಅಧಿಕಾರಿಗೆ ತಕ್ಕ ಶಾಸ್ತಿ ಕಾದಿದೆ ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಮೊದಲೇ ಸರಣಿ ಅಪರಾಧಗಳನ್ನು ಮಾಡಿ ಸಿಕ್ಕಿಹಾಕಿಕೊಂಡಿರುವ ಐಜಿಪಿ ಚಂದ್ರಶೇಖರ್ ಅವರಿಗೆ ರಾಜ್ಯ ಸರ್ಕಾರ ಆಮಿಷಗಳನ್ನು ಒಡ್ಡಿ, ಇಂತಹ ಕಾನೂನು ಬಾಹಿರ ಕೃತ್ಯ ಮಾಡಿಸುತ್ತಿದೆ. ಅವರಿಗೆ ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಹುದ್ದೆಯ ಆಮಿಷ ಒಡ್ಡಲಾಗಿದೆ, ಈ ಸರ್ಕಾರ ಒಬ್ಬರಿಗೆ ಇಂತಹ ಆಮಿಷ ಒಡ್ಡಿಲ್ಲ, ಬಿ.ಕೆ.ಸಿಂಗ್, ಎಂ.ಚಂದ್ರಶೇಖರ್, ಗುಪ್ತದಳ ಮುಖ್ಯಸ್ಥರು ಸೇರಿದಂತೆ ಅನೇಕರಿಗೆ ಕಮಿಷನರ್ ಮಾಡುತ್ತೇವೆ ಎಂದು ಟೋಪಿ ಹಾಕಿದೆ. ಇಂಥ ಸರ್ಕಾರದಲ್ಲಿ ತನಿಖೆಗಳು ಪಾರದರ್ಶಕವಾಗಿ ನಡೆಯುತ್ತವೆ ಎನ್ನುವ ನಂಬಿಕೆ ಇಲ್ಲ ಎಂದರು.

ಪತ್ರ ಸೋರಿಕೆ ಬಗ್ಗೆ ರಾಜ್ಯಪಾಲರ ಸಿಬ್ಬಂದಿ ವಿಚಾರಣೆಗೆ ಚಂದ್ರಶೇಖರ್ ಪತ್ರ ಬರೆದು ಉದ್ಧಟತನ ತೋರಿಸಿದ್ದಾರೆ, ರಾಜ್ಯಪಾಲರ ಕಚೇರಿ ಪರಿಶೀಲನೆ ಮಾಡುತ್ತೇನೆ ಎಂದು ಚಂದ್ರಶೇಖರ್ ಕೇಳುತ್ತಾರೆಂದರೆ, ಈತನಲ್ಲಿ ಎಷ್ಟು ಉದ್ಧಟತನ ಇದೆ, ರಾಜ್ಯಪಾಲರ ಕಚೇರಿ ಸರ್ಚ್ ಮಾಡುವ ಸೂಪರ್‌ಕಾಪ್ ಯಾರಿರಬಹುದೆಂದು ಕೆದಕಿದಾಗ ತಮಗೆ ಈ ವ್ಯಕ್ತಿಯ ಹಿನ್ನೆಲೆ ಗೊತ್ತಾಯಿತು ಎಂದರು.

> “ನಾನು ಬಹಳ ಕ್ಲೀನ್, ಪಾರದರ್ಶಕ, ನನ್ನ ಜೀವನ ತೆರೆದ ಪುಸ್ತಕ ಎಂದೆಲ್ಲಾ ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತದಲ್ಲಿ 70ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಆ ಪ್ರಕರಣಗಳ ಕಥೆ ಏನಾಗಿದೆ. ಅವುಗಳ ತನಿಖೆ ಎಲ್ಲಿವರೆಗೆ ಬಂದಿದೆ ಎಂಬುದನ್ನು ಜನರಿಗೆ ಹೇಳಬೇಕಲ್ಲವೇ. ಇವರು ಕ್ಲೀನ್, ಸ್ವಚ್ಛ ಆಗಿದ್ದರೆ, ಇಷ್ಟು ಪ್ರಕರಣಗಳು ಇವರ ಮೇಲೆ ಏಕೆ ದಾಖಲಾಗುತ್ತಿದ್ದವು, ತಮ್ಮ ವಿರುದ್ಧದ ಪ್ರಕರಣಗಳನ್ನು ಮುಚ್ಚಿಹಾಕಲು ಸಿದ್ದರಾಮಯ್ಯ, ಈ ಹಿಂದೆ ಲೋಕಾಯುಕ್ತ ಮುಗಿಸಿ ಎಸಿಬಿ ರಚನೆ ಮಾಡಿಕೊಂಡಿದ್ದರು.
>
> –ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಈ ಚಂದ್ರಶೇಖರ್ ಮೂಲತಃ ಹಿಮಾಚಲ ಪ್ರದೇಶ ಕೇಡರ್‌ನ ಐಪಿಎಸ್ ಅಧಿಕಾರಿ. 1998ರಲ್ಲಿ ಹಿಮಾಚಲ ಪ್ರದೇಶ ಕೇಡರ್‌ನಿಂದ ಆಯ್ಕೆಯಾಗಿದ್ದವರು. ಐದು ವರ್ಷಗಳ ಅವಧಿಗೆ ನಿಯೋಜನೆ ಮೇಲೆ ಕರ್ನಾಟಕಕ್ಕೆ ಬಂದರು. ಈ ಅಧಿಕಾರಿ ಹಿಮಾಚಲ ಪ್ರದೇಶದಲ್ಲಿ ಹವಾಮಾನ ಸರಿಯಾಗಿಲ್ಲ ಎಂದು ಸುಳ್ಳು ದಾಖಲೆ ಸೃಷ್ಟಿ ಮಾಡಿ ಕರ್ನಾಟಕದಲ್ಲೇ ಅಧಿಕಾರದಲ್ಲಿ ಮುಂದುವರೆದಿದ್ದಾರೆ ಎಂದು ಮಾಹಿತಿ ನೀಡಿದರು.

ನಿಯೋಜನೆ ಮೇಲೆ ಬಂದ ಈ ವ್ಯಕ್ತಿ ನಂತರ ಕರ್ನಾಟಕ ಕೇಡರ್ ಅಧಿಕಾರಿ ಆಗಲು ಏನೆಲ್ಲಾ ಅಕ್ರಮ ಎಸಗಿದರು, ಯಾರ ನೆರವು ಪಡೆದುಕೊಂಡರು ಎನ್ನುವುದನ್ನು ನಾನು ಇಲ್ಲಿ ಹೇಳುವಂತಿಲ್ಲ. ಅದು ಬಹಳ ಸೂಕ್ಷ್ಮ ವಿಚಾರ ಎಂದು ಉತ್ತರಿಸಿದರು.

ಎಡಿಜಿಪಿ ಚಂದ್ರಶೇಖರ್ ತೀಕ್ಷ್ಣ ಪ್ರತಿಕ್ರಿಯೆ

ಬೆಂಗಳೂರು, ಸೆ.28–ತಮ್ಮ ವಿರುದ್ಧ ಆರೋಪ ಮಾಡಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಎಸ್‌ಐಟಿ ಎಡಿಜಿಪಿ ಚಂದ್ರಶೇಖರ್ ಅವರು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.

ಎಸ್‌ಐಟಿ ಮುಖ್ಯಸ್ಥರಾಗಿರುವ ತಮ್ಮ ವಿರುದ್ಧ ಕೇಂದ್ರ ಸಚಿವರು ಆರೋಪ ಮಾಡಿರುವುದರಿಂದ ತಮ್ಮ ಸಿಬ್ಬಂದಿಯ ಆತ್ಮಸ್ಥೈರ್ಯ ಕುಗ್ಗಬಹುದು ಎಂಬ ಉದ್ದೇಶದಿಂದ ಅವರು ಸಿಬ್ಬಂದಿಯನ್ನುದ್ದೇಶಿಸಿ ವಿಶ್ವಾಸದ ಮಾತುಗಳನ್ನಾಡಿದ್ದಾರೆ.

ಆರೋಪಿಯೊಬ್ಬ ಎಂದು ಪತ್ರವನ್ನು ಪ್ರಾರಂಭಿಸಿರುವ ಅವರು, ಅವನು ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಆರೋಪಿಯೇ ಎಂದಿದ್ದಾರೆ. ಎಸ್‌ಐಟಿ ಸೆಕ್ಷನ್ ಪ್ರಾಧಿಕಾರದಿಂದ ತನಿಖೆಗೆ ಅನುಮತಿ ಕೇಳಿದೆ. ಆತನೊಬ್ಬ ಆರೋಪಿ. ಜಾಮೀನಿನ ಮೇಲಿದ್ದಾರೆ. ನಮ್ಮ ಕೆಲಸ ನಾವು ಮಾಡುತ್ತಿರಬೇಕು. ಹಂದಿಗಳೊಂದಿಗೆ ಎಂದಿಗೂ ಜಗಳಕ್ಕೆ ಇಳಿಯಬೇಡಿ. ಹಂದಿಗಳ ಜೊತೆ ಜಗಳಕ್ಕಿಳಿದರೆ ನಾವೇ ಕೊಳಕಾಗುತ್ತೇವೆ. ಯಾಕೆಂದರೆ ಹಂದಿಗಳು ಕೊಳಕ್ಕನ್ನೇ ಇಷ್ಟಪಡುತ್ತವೆ ಎಂದಿರುವ ಅವರು, ಎಸ್‌ಐಟಿ ಮುಖ್ಯಸ್ಥನಾಗಿ ಸತ್ಯವನ್ನು ಹೊರಗೆ ತರುತ್ತೇನೆ. ಎಲ್ಲಾ ಬಾಹ್ಯ ಪ್ರಭಾವದಿಂದ ನಿಮ್ಮನ್ನು (ಸಿಬ್ಬಂದಿ) ರಕ್ಷಿಸುತ್ತೇನೆ. ಸತ್ಯ, ದೇವರು, ಕಾನೂನಿನ ಮೇಲೆ ನಂಬಿಕೆ ಇಡಿ. ಸತ್ಯವು ಯಾವಾಗಲೂ ಜಯಿಸುತ್ತದೆ ಎಂದು ತಮ್ಮ ಸಿಬ್ಬಂದಿಗೆ ಸ್ಥೈರ್ಯ ತುಂಬಿದ್ದಾರೆ.

ಮಾಜಿ ಸೈನಿಕರಿಗೆ ಹುತಾತ್ಮ ಕ್ರಾಂತಿಕಾರಿ ಶ್ರೀ ಭಗತ್ ಸಿಂಗ್ ಪ್ರಶಸ್ತಿ ಪ್ರದಾನ



ಮೈಸೂರಿನ ಭಗತ್ ಸಿಂಗ್ ವೃತ್ತದಲ್ಲಿ ಕ್ರಾಂತಿಕಾರಿ ಹುತಾತ್ಮ ಶ್ರೀ ಭಗತ್ ಸಿಂಗ್ ಅವರ 117ನೇ ಜಯಂತಿ ಅಂಗವಾಗಿ ಭಗತ್ ಸಿಂಗ್ ಭಾವಚಿತ್ರಕ್ಕೆ ಶಾಸಕ ಜಿ.ಟಿ.ದೇವೇಗೌಡ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಸೆ. 28– ಸಾತಗಳ್ಳಿ ಬಿ ಜೋನ್ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಭಗತ್ ಸಿಂಗ್ ವೃತ್ತದಲ್ಲಿ ಕ್ರಾಂತಿಕಾರಿ ಹುತಾತ್ಮ ಶ್ರೀ ಭಗತ್ ಸಿಂಗ್ ಅವರ 117ನೇ ಜಯಂತಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಪುಷ್ಪಾರ್ಚನೆ ಮಾಡಿದರು.

ಇದೇ ವೇಳೆ ಮೈಸೂರು ಎಕ್ಸ್ ಸರ್ವೀಸ್ ಮೆನ್ ಮೂವ್‌ಮೆಂಟ್‌ನ 40 ಮಾಜಿ ಸೈನಿಕರಿಗೆ ಹುತಾತ್ಮ ಕ್ರಾಂತಿಕಾರಿ ಶ್ರೀ ಭಗತ್ ಸಿಂಗ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ಎಕ್ಸ್ ಸರ್ವೀಸ್‌ಮೆನ್ ಮೂವಮೆಂಟ್‌ನ ಪರೇಡ್ ಕಮಾಂಡರ್ ಜಿ.ಜಿ.ಗಣೇಶ್, ಮಹೇಶ್, ಅಸೋಸಿಯೇಷನ್ ಅಧ್ಯಕ್ಷ ಎಂ.ಹೆಚ್.ಚಲುವೇಗೌಡ, ಖಜಾಂಚಿ ಶ್ರೀರಾಮ್, ಜೆಡಿಎಸ್ ಮುಖಂಡರಾದ ಸುರೇಶ್‌ಗೌಡ, ಕಾಂತರಾಜ್, ರಾಜೇಂದ್ರ, ಜೀವಧಾರ ಬ್ಲಡ್‌ನ ಸಂಸ್ಥಾಪಕರಾದ ಗಿರೀಶ್, ನಗರ ಉಪ ಆಯುಕ್ತ ಮಂಜುನಾಥ್ ರೆಡ್ಡಿ, ನಂಜನಗೂಡು ತಹಸೀಲ್ದಾರ್ ಶಿವಕುಮಾರ್, ಬಡಾವಣೆಯ ಉಪಾಧ್ಯಕ್ಷ ತಿರುಮಲಾಚಾರ್, ಶೇಖರ್, ಜಯಸ್ವಾಮಿ, ರಾಮು, ಪ್ರತಿಭಾ ಪಾಟೀಲ್, ಸಂಘದ ಸದಸ್ಯರು ಇದ್ದರು.

ಹುಯಿಲಾಳು ರಾಮಸ್ವಾಮಿಗೆ ಸೇವಾ ಭೂಷಣ ಪ್ರಶಸ್ತಿ ಪ್ರದಾನ



ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯಿಂದ ಕೊಡಮಾಡುವ ಸೇವಾ ಭೂಷಣ ಪ್ರಶಸ್ತಿಯನ್ನು ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು. ವೇದಿಕೆ ಅಧ್ಯಕ್ಷೆ ಯಮುನಾ, ಗೌರವಾಧ್ಯಕ್ಷ ಹೆಚ್.ಕೆ.ರಾಮು, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಚಿತ್ರದಲ್ಲಿದ್ದಾರೆ.

ಸಿಎಂ ಸಿದ್ದರಾಮಯ್ಯರ ರಾಜೀನಾಮೆಗೆ ಆಗ್ರಹಿಸುತ್ತಿರುವುದು ಹಾಸ್ಯಾಸ್ಪದ

ಬಿಜೆಪಿ, ಜೆಡಿಎಸ್ ವಿರುದ್ಧ ವಾಗ್ದಾಳಿ

ಮೈಸೂರು, ಸೆ.28(ಜಿಎ)–ಮುಖ್ಯಮಂತ್ರಿಗಳ ರಾಜೀನಾಮೆಗೆ ಬಿಜೆಪಿ ಹಾಗೂ ಜೆಡಿಎಸ್‌ನವರು ಆಗ್ರಹಿಸುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದು ಹಿರಿಯ ವಕೀಲ ಪುಟ್ಟಸಿದ್ದೇಗೌಡ ವಾಗ್ದಾಳಿ ನಡೆಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಸ್ವತಃ ವಕೀಲರಾಗಿರುವ ಕಾರಣ ತನಿಖೆಗೆ ಸಹಕರಿಸುತ್ತಾರೆ. ಮುಖ್ಯಮಂತ್ರಿಗಳ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದುದನ್ನು ಹೈಕೋರ್ಟ್ ಏಕ ಸದಸ್ಯ ಪೀಠ ಎತ್ತಿಹಿಡಿದಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಸಹಾ ಅವಕಾಶವಿದೆ ಎಂದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಮಾಜಿ ಸಿಎಂ ಹಾಗೂ ಈಗ ಕೇಂದ್ರ ಸಚಿವರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧವೂ ಹಲವಾರು ಆರೋಪಗಳಿವೆ. ಕುಮಾರಸ್ವಾಮಿ ಅವರ ವಿರುದ್ಧವೂ ಎಫ್‌ಐಆರ್ ದಾಖಲಾಗಿದ್ದು, ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದೆ. ಹೀಗಿದ್ದರೂ ಅವರು ನೈತಿಕತೆ ಆಧಾರದ ಮೇಲೆ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡುವಂತೆ ಜೆಡಿಎಸ್ ಒತ್ತಾಯಿಸುತ್ತಿರುವುದು ಎಷ್ಟು ಸರಿ ಎಂದರು.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ವಿರುದ್ಧ ಸಹಾ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಎಫ್‌ಐಆರ್ ದಾಖಲಿಸುವಂತೆ ಆದೇಶವಾಗಿದೆ. ಇದೇ ರೀತಿ ಚುನಾವಣಾ ಬಾಂಡ್ ಹಗರಣದಲ್ಲಿಯೂ ಕೇಂದ್ರದ ವಿರುದ್ಧ ಆರೋಪವಿದೆ. ಹೀಗಿರುವಾಗ ಪ್ರಧಾನಿ ಹಾಗೂ ಕೇಂದ್ರ ಹಣಕಾಸು ಸಚಿವರು ರಾಜೀನಾಮೆ ನೀಡುವರೇ ಎಂದು ಮರು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರು ಶೋಷಿತರು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಪರ ಧ್ವನಿಯಾಗಿದ್ದಾರೆ. ಇದನ್ನು ಸಹಿಸದೇ ವಿರೋಧ ಪಕ್ಷಗಳು ನಡೆಸುವ ಪಿತೂರಿಗೆ ಅವರು ಮಣಿಯಬಾರದೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ವಕೀಲರಾದ ವಿಷ್ಣುವರ್ಧನ್, ಗಿರೀಶ್, ಶಂಕರ್, ಸೋಮರಾಜು, ಕೆ.ಎಸ್.ಅಂದಾನಿ ಉಪಸ್ಥಿತರಿದ್ದರು.

ಎಸ್.ಪಿ.ಬಾಲಸುಬ್ರಮಣ್ಯಂ ನೆನಪಿನಲ್ಲಿ ಇಂದು ಗೀತಾಂಜಲಿ ಕಾರ್ಯಕ್ರಮ

ಮೈಸೂರು, ಸೆ.28(ಜಿಎ)–ಹಿಮದೀಪ ಕ್ರಿಯೇಷನ್ಸ್ ವತಿಯಿಂದ ಸೆ.29ರಂದು ನಗರದ ಕೃಷ್ಣಮೂರ್ತಿಪುರಂ ಶಾರದಾ ವಿಲಾಸ ಕಾಲೇಜು ಆವರಣದ ಶತಮಾನೋತ್ಸವ ಭವನದಲ್ಲಿ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ನೆನಪಿನಲ್ಲಿ ಗೀತಾಂಜಲಿ ಚಿತ್ರಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಅಧ್ಯಕ್ಷ ನಾಗೇಶ್ ಹಿಮದೀಪ್ ಈ ವಿಷಯ ತಿಳಿಸಿ, ಅಂದು ಸಂಜೆ 4.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಎಸ್.ಪಿ.ಬಾಲಸುಬ್ರಮಣ್ಯ ಅವರು ಹಾಡಿರುವ ಸುಮಾರು 43 ಹಾಡುಗಳನ್ನು ಹಾಡಲಾಗುವುದು. ಗಾಯಕರಾದ ಜಯಲಕ್ಷ್ಮಿ ನಾಯ್ಡು, ದಿವ್ಯಾ ಸಚ್ಚಿದಾನಂದ, ಪೂರ್ಣಿಮಾ ಲೋಕೇಶ್, ನಾಗರತ್ನ, ಅರುಣಾಚಲಂ, ಹಿಮಾಲಯ ನಾಗ್, ದೀಪಾಂಜಲಿ ನಾಗ್ ಹಾಡಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಪೂರ್ಣಿಮಾ ಲೋಕೇಶ್, ಗುರೂಜಿ ಅಮೃತ್ ಯೋಗಿ, ಬಿ.ಮಂಜುನಾಥ್, ಹಿಮಾಲಯ ನಾಗ್ ಉಪಸ್ಥಿತರಿದ್ದರು.



ಹೊನಲು ಬೆಳಕಿನ ಪ್ರೊ ಕಬಡ್ಡಿ ಮಾದರಿ ಪಂದ್ಯಾವಳಿಯ ಲಾಂಛನ ಬಿಡುಗಡೆ



ಮೈಸೂರಿನ ಕುಂಬಾರಕೊಪ್ಪಲಿನ ಕೆಂಪೇಗೌಡ ಕ್ರೀಡಾಂಗಣದಲ್ಲಿ ದೀಪಾವಳಿ ಹಾಗೂ ಶ್ರೀ ಮಲೆ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಕುಂಬಾರಕೊಪ್ಪಲು ಅಭ್ಯುದಯ ಸಂಘ, ಎಂ.ಜಿ.ಗ್ರೂಪ್ಸ್, ಗಂಧರ್ವ ಸ್ಪೋರ್ಟ್ಸ್ ಕ್ಲಬ್ ಸಹಯೋಗದಲ್ಲಿ ನವೆಂಬರ್ 1ರಿಂದ 3ರವರೆಗೆ ಆಯೋಜಿಸಿರುವ ಮೈಸೂರು ವಿಭಾಗ ಮಟ್ಟದ ಹೊನಲು ಬೆಳಕಿನ ಪ್ರೊ.ಕಬಡ್ಡಿ ಮಾದರಿಯ ಪಂದ್ಯಾವಳಿಯ ಲಾಂಛನವನ್ನು ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್‌ಕುಮಾರ್, ವಿಷಕಂಠೇಗೌಡ, ಅನಿಲ್‌ಕುಮಾರ್, ನಾಗರಾಜು, ರವಿ, ದಿನೇಶ್, ರವಿ ರಾಜಕೀಯ, ಪ್ರಸನ್ನ, ಸುರೇಶ್ ಇನ್ನಿತರರು ಉಪಸ್ಥಿತರಿದ್ದರು.

ಗ್ರಾಪಂ ನೌಕರರ ಬೇಡಿಕೆ ಈಡೇರಿಸದಿದ್ದಲ್ಲಿ ಕಲ್ಬುರ್ಗಿಯಲ್ಲಿ ಸಚಿವರ ಮನೆ ಚಲೋ

ಮೈಸೂರು, ಸೆ.28(ಜಿಎ)–ಸರ್ಕಾರ ಗ್ರಾಮ ಪಂಚಾಯತ್ ನೌಕರರ ಬೇಡಿಕೆ ಈಡೇರಿಸದಿದ್ದಲ್ಲಿ ಅ.1ರಂದು ಕಲ್ಬುರ್ಗಿಯಲ್ಲಿ ಸಚಿವರ ಮನೆ ಚಲೋ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ರಾಜ್ಯ ಗ್ರಾಮ ಪಂಚಾಯಿತ್ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ.ಬಸವರಾಜು ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ಕಳೆದ ಜು.23, 24ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಿದಾಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮೊದಲಾದವುಗಳಿಗೆ ಸಂಬಂಧಿಸಿದ ಹಿರಿಯ ಅಧಿಕಾರಿಗಳು ಮನವಿ ಸ್ವೀಕರಿಸಿದರು. ಬಳಿಕ ನೀಡಿದ ಭರವಸೆ ಹಿನ್ನೆಲೆಯಲ್ಲಿ ಧರಣಿ ವಾಪಸು ಪಡೆಯಲಾಗಿತ್ತು. ಆದರೂ ಇದುವರೆಗೆ ಯಾವುದೇ ಪ್ರಯೋಜನವಾಗಿಲ್ಲ ಎಂದರು.

ಹೀಗಾಗಿ ಈಗ ಕಲ್ಬುರ್ಗಿಯಲ್ಲಿ ಸಚಿವರ ಮನೆ ಚಲೋ ಪ್ರತಿಭಟನೆಗೆ ನಿರ್ಧರಿಸಲಾಗಿದೆ. ಒಂದು ವೇಳೆ ವಿವಿಧ ಬೇಡಿಕೆ ಈಡೇರಿಕೆಗೆ ಸರ್ಕಾರ ಆದೇಶಿಸಿದರೆ ಪ್ರತಿಭಟನೆ ಕೈಬಿಡಲಾಗುವುದು. ಆಗಲೂ ಸಮಸ್ಯೆ ಬಗೆಹರಿಸದಿದ್ದರೆ, ಅ.23 ರಂದು ಮತ್ತೆ ವಿಧಾನಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ. ರಾಮಕೃಷ್ಣ, ಬಸವರಾಜು, ಟಿ.ಎಸ್. ದಿನೇಶ್ ಉಪಸ್ಥಿತರಿದ್ದರು.

ಇಂದು ವಿವಿಧ ಕಾಮಗಾರಿಗಳಿಗೆ ಸಿಎಂ ಚಾಲನೆ

ಮೈಸೂರು, ಸೆ.28(ಜಿಎ)–ಮೈಸೂರಿನ ಅಶೋಕಪುರಂನಲ್ಲಿರುವ ದೊಡ್ಡಗರಡಿ, ಚಿಕ್ಕಗರಡಿ ಆವರಣದಲ್ಲಿ ವ್ಯಾಯಾಮ ಶಾಲೆ, ವಾಣಿಜ್ಯ ಸಂಕೀರ್ಣ, ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೆ.29ರಂದು ಚಾಲನೆ ನೀಡಲಿದ್ದಾರೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಗೆ ಅಶೋಕಪುರಂನ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಟಿ.ಎಸ್. ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸುಮಾರು 10.5 ಕೋಟಿ ರೂ. ವೆಚ್ಚದಲ್ಲಿ ಯುವಕರಿಗಾಗಿ ವ್ಯಾಯಾಮ ಶಾಲೆ, ಸಭಾ ಭವನ, ವಾಣಿಜ್ಯ ಸಂಕೀರ್ಣ, ಡಾ.ಅಂಬೇಡ್ಕರ್ ಉದ್ಯಾನವನ, ಭವನ ನವೀಕರಣ ಕಾಮಗಾರಿಗೆ ಚಾಲನೆ ದೊರೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಆದಿ ಕರ್ನಾಟಕ ಮಹಾ ಸಂಸ್ಥೆಯ ಅಧ್ಯಕ್ಷ ಪಿ.ಸಿದ್ದರಾಜು, ಶಿವಸ್ವಾಮಿ, ರಾಜು, ಜಯಕುಮಾರ್, ಕೃಷ್ಣಮೂರ್ತಿ, ಮಹಾಲಿಂಗಯ್ಯ ಉಪಸ್ಥಿತರಿದ್ದರು.

ಕಾನೂನು ಪಾಲಿಸುತ್ತೇವೆ



ಮಹಿಷ ಮಂಡಲೋತ್ಸವ ಆಚರಣೆ ಹಿನ್ನೆಲೆಯಲ್ಲಿ ನಗರಾದ್ಯಂತ ನಿಷೇಧಾಜ್ಞೆ ಜಾರಿಗೆಗೊಳಿಸಿರುವ ಕುರಿತು ಪ್ರತಿಕ್ರಿಯಿಸಿದ ಮಾಜಿ ಮೇಯರ್ ಪುರುಷೋತ್ತಮ್, ಕಾನೂನುಬಾಹಿರವಾಗಿ ಯಾವುದೇ ಆಚರಣೆ ಮಾಡುವುದಿಲ್ಲ. ಕಾನೂನು ಪಾಲಿಸುತ್ತೇವೆ. ಹಾಗೇ ನಾವು ಎಲ್ಲಿಯೂ ಕಲ್ಲು ಹೊಡೆಯುವುದಿಲ್ಲ. ಬಂದೂಕು ಬಳಸುವುದಿಲ್ಲ. ಆದರೂ ಏಕೆ ಈ ರೀತಿ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಮಹಿಷ ಮಂಡಲ ಎಂದರೆ ಕೇವಲ ಮೈಸೂರು, ಚಾಮುಂಡಿ ಬೆಟ್ಟದ ವ್ಯಾಪ್ತಿ ಮಾತ್ರವಲ್ಲ. ಹಲವಾರು ಭಾಗಗಳಿವೆ. ಆದ್ದರಿಂದ ಎಲ್ಲಿ ಬೇಕಾದರೂ ಮಾಡಬಹುದು. ನಾಳೆ ನಾನು ಚಾಮುಂಡಿಬೆಟ್ಟಕ್ಕೆ ತೆರಳಿ ಮಹಿಷನಿಗೆ ಪುಷ್ಪಾರ್ಚನೆ ಮಾಡಿ, ನಂತರ ಚಾಮುಂಡೇಶ್ವರಿಯ ದರ್ಶನ ಮಾಡುತ್ತೇನೆ ಎಂದರು.

ಎಕ್ಮೋ ಚಿಕಿತ್ಸೆ ಮೂಲಕ ಬಾಲಕಿ ಜೀವ ರಕ್ಷಣೆ

ಶ್ವಾಸಕೋಶ ಹಾನಿಗೆ ಯಶಸ್ವಿ ಚಿಕಿತ್ಸೆ

ಮೈಸೂರು, ಸೆ.28(ಜಿಎ)–ಮೈಸೂರಲ್ಲೇ ಮೊದಲ ಬಾರಿ ಎಕ್ಮೋ ಚಿಕಿತ್ಸೆ ಮೂಲಕ ಅಪ್ರಾಪ್ತೆಯೊಬ್ಬರ ಜೀವ ಉಳಿಸಲಾಗಿದೆ. ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಸುಮಾರು 15 ವರ್ಷದ ಬಾಲಕಿ ಈಗ ಚೇತರಿಸಿಕೊಂಡಿದ್ದಾರೆ ಎಂದು ಮಿಡಿತಾ ಲೈಫ್ ಕೇರ್ ಕೇಂದ್ರ ವೈದ್ಯ ಡಾ. ರಘುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೀವ್ರ ಶ್ವಾಸಕೋಶ ಹಾನಿ ಕಾರಣದಿಂದ ಬಾಲಕಿ ಚಿಕಿತ್ಸೆಗಾಗಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಳು. ವೆಂಟಿಲೇಟರ್ ವಿಧಾನದ ಮೂಲಕ ಆಮ್ಲಜನಕ ನೀಡಿದರೂ ರೋಗಿಯ ಪ್ರಮುಖ ಅಂಗಗಳಿಗೆ ಪ್ರಯೋಜನವಾಗುತ್ತಿರಲಿಲ್ಲ.

ಹೀಗಾಗಿ ಅಂತಿಮ ಪ್ರಯತ್ನ ಎಂಬಂತೆ ಎಕ್ಮೋ ಯಂತ್ರ ಬಳಸಿಕೊಳ್ಳಲಾಯಿತು. ಬಳಿಕ ಆಕೆಗೆ 3 ದಿನಗಳ ಕಾಲ ಇದೇ ಚಿಕಿತ್ಸೆ ಮುಂದುವರಿಸಿದ್ದು, ನಂತರ ಚೇತರಿಸಿಕೊಂಡು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾಳೆ ಎಂದು ವಿವರಿಸಿದರು.

ಇದುವರೆಗೂ ಎಕ್ಮೋ ಚಿಕಿತ್ಸೆಗಾಗಿ ರೋಗಿಗಳು ಬೇರೆ ನಗರಗಳಿಗೆ ಹೋಗ ಬೇಕಾಗಿತ್ತು. ಈಗ ತಮ್ಮ ಕೇಂದ್ರದಲ್ಲಿ ಈ ಯಂತ್ರ ಅಳವಡಿಸಲಾಗುತ್ತಿದೆ. ಜೊತೆಗೆ ಅಪ್ರಾಪ್ತರ ಚಿಕಿತ್ಸೆಗೆ ಬಳಸಿದುದು ನಗರದಲ್ಲಿ ಇದೇ ಪ್ರಥಮ ಬಾರಿಯಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಗುರುರಾಜ್, ಡಾ.ಶಶಿರೇಖಾ ಉಪಸ್ಥಿತರಿದ್ದರು.

ಅಶೋಕಪುರಂ ಡಾ.ಅಂಬೇಡ್ಕರ್ ಚಿಕ್ಕಗರಡಿಯಲ್ಲಿ ಅಂಬಾ ಪೂಜೆ



ಮೈಸೂರಿನ ಅಶೋಕಪುರಂ ಡಾ.ಬಿ.ಆರ್.ಅಂಬೇಡ್ಕರ್ ಚಿಕ್ಕ ಗರಡಿಯಲ್ಲಿ ಅಂಬಾ ಪೂಜೆ ನೆರವೇರಿತು. ಈ ವೇಳೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪರ ಅಭಿನಂದಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಆದಿ ಕರ್ನಾಟಕ ಮಹಾ ಸಂಸ್ಥೆಯ ಅಧ್ಯಕ್ಷ ಸುನೀಲ್, ದೊಡ್ಡ ಗರಡಿ ಅಧ್ಯಕ್ಷ ಜೋಗಿ ಮಹೇಶ್, ಪೈ.ಕೃಷ್ಣ, ಪೈ.ಮಯೂರ್, ಪೈ.ಆದರ್ಶ್ ಭೀಮ್, ಶಿವಸ್ವಾಮಿ ಉಪಸ್ಥಿತರಿದ್ದರು.

ಅ.3ರಿಂದ 11ರವರೆಗೆ ಶರನ್ನವರಾತ್ರಿ ಶತಚಂಡೀಕಾ ಹೋಮ

ಮೈಸೂರು, ಸೆ.28– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಶ್ರೀ ಬಾಲಾತ್ರಿಪುರಸುಂದರಿ ಮತ್ತು ಶ್ರೀ ಸಾಮ್ರಾಜ್ಯ ಲಕ್ಷ್ಮೀ ದಿವ್ಯ ಸಾನಿಧ್ಯದಲ್ಲಿ ಶರನ್ನವರಾತ್ರಿ ಪ್ರಯುಕ್ತ ಅ.3ರಂದು ಗುರುವಾರದಿಂದ ಅ.11ರವರೆಗೆ ಶುಕ್ರವಾರದ ವರೆವಿಗೆ ಪ್ರತಿ ನಿತ್ಯ ಶತಚಂಡೀಕಾಹೋಮ ಏರ್ಪಡಿಸಲಾಗಿದೆ. ಬೆಳಗ್ಗೆ 9 ಗಂಟೆಗೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ.

ಅಲ್ಲದೆ, ಅ.17ರಂದು ಗುರುವಾರ ಹುಣ್ಣಿಮೆ ದಿನ ಶತಚಂಡೀ ಮಹಾಯಾಗದ ಪೂರ್ಣಾಹುತಿ ಡಾ.ಭಾನುಪ್ರಕಾಶ್ ಶರ್ಮಾ ಅವರ ಮಾರ್ಗದರ್ಶನ ನೀಡುವರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರೂ ಆದಮೈಸೂರು ಜಿಲ್ಲಾ ಅಧ್ಯಕ್ಷ ಡಿ.ಟಿ.ಪ್ರಕಾಶ್ ಸಹಕಾರ ನೀಡುವರು. ವಿದ್ವಾನ್ ಯಜ್ಞೇಶ್ವರ ಐತಾಳ್ ಅವರ ಉಪಸ್ಥಿತಿಯಲ್ಲಿ ಜಾತಕ ವಿಮರ್ಶಕ ಮೈಕುಮಾರ್ ನೇತೃತ್ವದಲ್ಲಿ ಈ ಮಹಾಯಾಗ ಜರುಗಲಿದೆ. ಪ್ರತಿನಿತ್ಯ ಪ್ರತ್ಯೇಕ ಸಂಕಲ್ಪ ಮಾಡಿಸಲಾಗುವುದು.

ದೇಶ – ವಿದೇಶ

ಇಸ್ರೇಲ್ ದಾಳಿಯಲ್ಲಿ ಹಿಜ್ಬುಲ್ಲಾ ಮುಖ್ಯಸ್ಥ ಹಸನ್ ನಸ್ರಲ್ಲಾ ಬಲಿ



ಟೆಲ್ ಅವಿವ್: ಬೈರುತ್‌ನಲ್ಲಿ ನಿನ್ನೆ ನಡೆದ ದಾಳಿಯಲ್ಲಿ ಹಿಜ್ಬುಲ್ಲಾ ಉಗ್ರಗಾಮಿ ಸಂಘಟನೆಯ ನಾಯಕ ಹಸನ್ ನಸ್ರಲ್ಲಾನನ್ನು ಕೊಂದಿರುವುದಾಗಿ ಇಸ್ರೇಲಿ ಮಿಲಿಟರಿ ಘೋಷಿಸಿಕೊಂಡಿದೆ. ಇದಕ್ಕೆ ಹಿಜ್ಬುಲ್ಲಾ ಸಂಘಟನೆಯಿಂದ ಯಾವುದೇ ತಕ್ಷಣದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಮೂರು ದಶಕಗಳಿಗೂ ಹೆಚ್ಚು ಕಾಲ ಹಿಜ್ಬುಲ್ಲಾವನ್ನು ಮುನ್ನಡೆಸಿರುವ ನಸ್ರಲ್ಲಾ, ಬೈರುತ್‌ನ ದಕ್ಷಿಣದ ದಹೀಹ್‌ನಲ್ಲಿ ಆರು ವಸತಿ ಕಟ್ಟಡಗಳನ್ನು ನೆಲಸಮಗೊಳಿಸಿದ ಬೃಹತ್ ವೈಮಾನಿಕ ದಾಳಿಯಲ್ಲಿ ಕೊಲ್ಲಲ್ಪಟ್ಟಿದ್ದಾನೆ ಎಂದು ಹೇಳಲಾಗುತ್ತಿದೆ. ನಿನ್ನೆಯ ದಾಳಿಯಲ್ಲಿ ಮಕ್ಕಳು ಸೇರಿದಂತೆ ಕನಿಷ್ಠ ಆರು ಮಂದಿ ಮೃತಪಟ್ಟಿದ್ದರು. ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆಯಿದೆ. ಕಳೆದ ವರ್ಷದಲ್ಲಿ ಲೆಬನಾನಿನ ರಾಜಧಾನಿಯಲ್ಲಿ ಸಂಭವಿಸಿದ ಅತೀ ದೊಡ್ಡ ಸ್ಫೋಟ ಇದಾಗಿದೆ. ಇಸ್ರೇಲಿ ಸೇನೆಯು ಇದು ಹಿಜ್ಬುಲ್ಲಾ ಪ್ರಧಾನ ಕಚೇರಿ ಮೇಲೆ ನಿಖರವಾದ ವೈಮಾನಿಕ ದಾಳಿ ಎಂದು ಹೇಳಿಕೊಂಡಿದೆ. ಆರಂಭಿಕ ಸ್ಫೋಟದ ನಂತರ ಇಸ್ರೇಲ್ ದಕ್ಷಿಣದ ಉಪನಗರಗಳ ಇತರ ಪ್ರದೇಶಗಳ ಮೇಲೆ ಸರಣಿ ದಾಳಿಗಳನ್ನು ಪ್ರಾರಂಭಿಸಿತ್ತು.

ಟಾಟಾ ಕಂಪನಿಯಲ್ಲಿ ಅಗ್ನಿ ಅವಘಡ; ಬೆಲೆಬಾಳುವ ವಸ್ತುಗಳು ಬೆಂಕಿಗಾಹುತಿ



ಹೊಸೂರು (ತಮಿಳುನಾಡು): ಟಾಟಾ ಕಂಪನಿಯಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿರುವ ಘಟನೆ ತಮಿಳುನಾಡಿನ ಹೊಸೂರು ಸಮೀಪದ ಕೂತನಹಳ್ಳಿ ಗ್ರಾಮದಲ್ಲಿ ನಡೆದಿದೆ. ಟಾಟಾ ಕಂಪನಿಯ ಎಲೆಕ್ಟ್ರಾನಿಕ್ ವಸ್ತುಗಳು ತಯಾರಾಗುತ್ತಿದ್ದ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕ್ಷಣ ಮಾತ್ರದಲ್ಲಿ ಇಡೀ ಘಟಕಕ್ಕೆ ಆವರಿಸಿದೆ. ಕೂಡಲೇ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಹೊರ ಓಡಿ ಬಂದು ಜೀವ ಉಳಿಸಿಕೊಂಡಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

ಬೆಂಕಿಯ ಕೆನ್ನಾಲಿಗೆಗೆ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಆಹುತಿಯಾಗಿದ್ದು, ರಾಯಕೋಟೆ ಮತ್ತು ಡೆಂಕಣಿಕೋಟೆ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಿಯಂತ್ರಿಸುವ ಕಾರ್ಯ ಮಾಡಿದ್ದಾರೆ. ಕಾರು ಮತ್ತು ಫೋನ್‌ಗಳಿಗೆ ಸಂಬಂಧಿಸಿದ ಎಲೆಕ್ಟ್ರಾನಿಕ್ ವಸ್ತುಗಳ ಬಿಡಿಭಾಗಗಳ ತಯಾರಿಕಾ ಘಟಕ ಸಂಪೂರ್ಣ ಬೆಂಕಿಗೆ ಆಹುತಿಯಾಗಿದೆ. ಇಂದು ಬೆಳಗ್ಗೆ 5 ಗಂಟೆ ವೇಳೆಗೆ ಕೆಮಿಕಲ್ ಘಟಕದಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿ ಅವಘಡ ಸಂಭವಿಸಿದ ಕಾರ್ಖಾನೆಯಲ್ಲಿ ಸುಮಾರು 20 ಸಾವಿರ ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರಂತೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿ ಕಾಯಂ ಸದಸ್ಯತ್ವಕ್ಕೆ ಭಾರತದ ಬೆನ್ನಿಗೆ ನಿಂತ ಭೂತಾನ್



ನ್ಯೂಯಾರ್ಕ್: ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವಕ್ಕೆ ಪ್ರಯತ್ನಿಸುತ್ತಿರುವ ಭಾರತಕ್ಕೆ ಇದೀಗ ಭೂತಾನ್ ಕೂಡ ಬೆಂಬಲ ಘೋಷಣೆ ಮಾಡಿದೆ. ಆರ್ಥಿಕ ಪ್ರಗತಿಯಲ್ಲಿ ಗಮನಾರ್ಹ ಸಾಧನೆ ತೋರುತ್ತಿರುವ ಮತ್ತು ಜಾಗತಿಕ ನಾಯಕತ್ವ ವಹಿಸುತ್ತಿರುವ ಭಾರತವು ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ (ಯುಎನ್‌ಎಸ್‌ಸಿ) ಕಾಯಂ ಸದಸ್ಯತ್ವ ಪಡೆಯಲು ಅರ್ಹವಾಗಿದೆ ಎಂದು ಭೂತಾನ್ ಪ್ರಧಾನಿ ಶೆರಿಂಗ್ ಟೊಬಗೆ ಹೇಳಿದ್ದಾರೆ.

ವಿಶ್ವಸಂಸ್ಥೆಯ ಮಹಾ ಅಧಿವೇಶನದ 79ನೇ ಸಭೆಯಲ್ಲಿ ಮಾತನಾಡಿದ ಅವರು, ತೀರಾ ಹಿಂದುಳಿದ ದೇಶಗಳ (ಎಲ್‌ಡಿಸಿ) ಕೆಟಗರಿಯಿಂದ ಪ್ರಗತಿಯತ್ತ ಮುನ್ನಡೆಯಲು ಭೂತಾನ್‌ಗೆ ಭಾರತ ನೀಡಿದ ನೆರವು ಮತ್ತು ಸ್ನೇಹಕ್ಕಾಗಿ ಟೊಬಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ವಿಶ್ವಸಂಸ್ಥೆಯು ಪ್ರಸ್ತುತ ಜಗತ್ತಿನ ವಾಸ್ತವಿಕ ಅಂಶಗಳನ್ನು ಪೂರೈಸುವಂತಿರಬೇಕು. ಭದ್ರತಾ ಮಂಡಳಿಯು ಗತಕಾಲದ ಅವಶೇಷವಾಗಿ ಉಳಿದಿದೆ. ಸದ್ಯದ ಭೌಗೋಳಿಕ ರಾಜಕೀಯ, ಆರ್ಥಿಕ ಚಿತ್ರಣ ಮತ್ತು ಸಾಮಾಜಿಕ ವಾಸ್ತವಾಂಶಗಳನ್ನು ಪ್ರತಿನಿಧಿಸುವಂತಹ ಮಂಡಳಿಯ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

ಏರ್ ಇಂಡಿಯಾ ವಿಮಾನದಲ್ಲಿ ನೀಡಿದ ಆಮ್ಲೆಟ್‌ನಲ್ಲಿ ಜಿರಳೆ ಪತ್ತೆ



ನವದೆಹಲಿ: ದೆಹಲಿ– ನ್ಯೂಯಾರ್ಕ್ ನಡುವಿನ ಏರ್ ಇಂಡಿಯಾ ವಿಮಾನ ಪ್ರಯಾಣ ವೇಳೆ ನೀಡಲಾಗಿದ್ದ ಆಮ್ಲೆಟ್‌ನಲ್ಲಿ ಜಿರಳೆ ಪತ್ತೆಯಾಗಿದೆ ಎಂದು ಪ್ರಯಾಣಿಕರೊಬ್ಬರು ಆರೋಪಿಸಿದ್ದಾರೆ. ಹೆಚ್ಚಿನ ತನಿಖೆಗಾಗಿ ಆಹಾರ ಪೂರೈಕೆದಾರರೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ ಎಂದು ಏರ್ ಇಂಡಿಯಾ ಹೇಳಿದೆ. ಆಮ್ಲೆಟ್‌ನಲ್ಲಿ ಜಿರಳೆ ಪತ್ತೆಯಾಗಿರುವ ಬಗ್ಗೆ ಪ್ರಯಾಣಿಕ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

'ಆಮ್ಲೆಟ್‌ನಲ್ಲಿ ಜಿರಳೆ ಪತ್ತೆಯಾದಾಗ ನನ್ನ 2 ವರ್ಷದ ಮಗು ಅದನ್ನು ನನ್ನೊಂದಿಗೆ ಅರ್ಧಕ್ಕಿಂತ ಹೆಚ್ಚು ಭಾಗ ತಿಂದು ಮುಗಿಸಿತ್ತು. ಇದರಿಂದಾದ ವಿಷಾಹಾರ ಬಾಧೆಗೂ ಮಗು ಒಳಗಾಯಿತು' ಎಂದು ಬರೆದುಕೊಂಡಿದ್ದಾರೆ. ಜೊತೆಗೆ ಅದರ ವಿಡಿಯೊ ಹಾಗೂ ಚಿತ್ರಗಳನ್ನೂ ಹಾಕಿದ್ದು, ಏರ್ ಇಂಡಿಯಾ, ವಿಮಾನಯಾನ ನಿಯಂತ್ರಕ ಡಿ.ಜಿ.ಸಿ.ಎ. ಮತ್ತು ನಾಗರಿಕ ವಿಮಾನಯಾನ ಸಚಿವ ಕೆ.ರಾಮ ಮೋಹನ್ ನಾಯ್ದು ಅವರನ್ನು ಪೋಸ್ಟ್‌ನಲ್ಲಿ ಟ್ಯಾಗ್ ಮಾಡಿದ್ದಾರೆ. 'ಸೆಪ್ಟೆಂಬರ್ 17, 2024ರಂದು ದೆಹಲಿಯಿಂದ ನ್ಯೂಯಾರ್ಕ್‌ನ ಜಾನ್ ಎಫ್. ಕೆನಡಿ ವಿಮಾನ ನಿಲ್ದಾಣಕ್ಕೆ ಏರ್ ಇಂಡಿಯಾ 101 ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು.

ಚೀನಾದ ಹೊಸ ಅಣ್ವಸ್ತ್ರ ಸಬ್‌ಮರೀನ್ ಮುಳುಗಡೆ



ವಾಷಿಂಗ್ಟನ್: ಚೀನಾದ ಹೊಸ ಪರಮಾಣು ಚಾಲಿತ ಜಲಾಂತರ್ಗಾಮಿ ನೌಕೆ ಯೊಂದು ಮುಳುಗಡೆಯಾಗಿರುವ ಬಗ್ಗೆ ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದು ಚೀನಾಕ್ಕೆ ಹೊಸ ಮುಜುಗರ ತಂದೊಡ್ಡಿದೆ. ಮೇ ಅಥವಾ ಜೂನ್ ವೇಳೆಯಲ್ಲಿ ಚೀನಾದ ವುಹಾನ್‌ನಲ್ಲಿರುವ ವುಚಾಂಗ್ ಹಡಗು ಕಟ್ಟೆಯಲ್ಲಿ ಸಬ್‌ಮರಿನ್ ಮುಳುಗಡೆಯಾಗಿರುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಆದರೆ ವಾಷಿಂಗ್ಟನ್‌ನಲ್ಲಿರುವ ಚೀನಾ ರಾಯಭಾರ ಕಚೇರಿ ಈ ಬಗ್ಗೆ ಮಾಹಿತಿ ನೀಡಲು ನಿರಾಕರಿಸಿದೆ. 370ಕ್ಕೂ ಹೆಚ್ಚು ಹಡಗುಗಳನ್ನು ಹೊಂದುವ ಮೂಲಕ ಚೀನಾ ವಿಶ್ವದ ಅತೀದೊಡ್ಡ ನೌಕಾಪಡೆ ಹೊಂದಿದೆ. ಜತೆಗೆ ಹೊಸ ತಲೆಮಾರಿನ ಪರಮಾಣು ಸಶಸ್ತ್ರ ಜಲಾಂತರ್ಗಾಮಿ ನೌಕೆಗಳನ್ನೂ ನಿರ್ಮಿಸುತ್ತಿದೆ. ಈ ಹೊತ್ತಿನಲ್ಲಿ ಈ ಜಲಾಂತರ್ಗಾಮಿ ಮುಳುಗಡೆ ಚೀನಾಕ್ಕೆ ದೊಡ್ಡ ಪೆಟ್ಟಾಗಬಹುದು. ಈ ಪರಿಸ್ಥಿತಿಯ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ಹಾಗಾಗಿ ತಿಳಿಸಲು ಯಾವುದೇ ವಿಷಯವಿಲ್ಲ. ಮುಳುಗಡೆಗೆ ಕಾರಣ ತಿಳಿದಿಲ್ಲ. ಅಥವಾ ಆ ವೇಳೆ ಪರಮಾಣು ಇಂಧನ ಇದ್ದಿರುವ ಬಗ್ಗೆಯೂ ಮಾಹಿತಿ ಇಲ್ಲ ಎಂದು ಚೀನಾ ವಕ್ತಾರರು ಹೇಳಿದ್ದಾರೆ.

ಕಾಂಗತ ಮೂಡ್ ಕೊಡವ ಚಿತ್ರದ ಪ್ರೊಮೋ, ಪೋಸ್ಟರ್ ಬಿಡುಗಡೆ

ಸಮಾಜದ ಮತ್ತೊಂದು ಮುಖವನ್ನು ತೋರಿಸುವ ಪ್ರಯತ್ನ ಚಿತ್ರದಲ್ಲಿದೆ



ಮಡಿಕೇರಿಯಲ್ಲಿ ಕೊಡವ ಚಲನಚಿತ್ರ 'ಕಾಂಗತ ಮೂಡ್' ಚಿತ್ರದ ಪ್ರೊಮೋ, ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮಡಿಕೇರಿ,ಸೆ.28– ಕೂರ್ಗ್ ಕಾಫಿವುಡ್ ಮೂವೀಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ನಿರ್ಮಿಸಿ, ನಿರ್ದೇಶಿಸಿರುವ ಕೊಡವ ಚಲನಚಿತ್ರ 'ಕಾಂಗತ ಮೂಡ್' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಚಿತ್ರದ ಪ್ರೊಮೋ ಮತ್ತು ಪೋಸ್ಟರ್ ಅನ್ನು ಶನಿವಾರ ಬಿಡುಗಡೆ ಮಾಡಲಾಯಿತು.

ನಗರದ ಪತ್ರಿಕಾ ಭವನದಲ್ಲಿ ಪ್ರೊಮೋ ಮತ್ತು ಪೋಸ್ಟರ್ ಅನ್ನು ಬಿಡುಗಡೆ ಮಾಡಿ ಮಾತನಾಡಿದ ಶಕ್ತಿ ದಿನಪತ್ರಿಕೆಯ ಸಲಹಾ ಸಂಪಾದಕ ಬಿ.ಜಿ.ಅನಂತಶಯನ ಅವರು ಕೊಡವ ಸಿನಿಮಾಗಳಿಗೆ ಪ್ರೋತ್ಸಾಹದ ಅಗತ್ಯವಿದೆ ಎಂದರು.

ಕೊಡಗಿನಲ್ಲಿ ಹಿಂದೆ ಕೃಷಿ ಚಟುವಟಿಕೆ ಸುಭಿಕ್ಷವಾಗಿತ್ತು, ತೋಟದ ಮಾಲೀಕ ಬೆಂಗಳೂರು ಅಥವಾ ಬೇರೆಲ್ಲೋ ಇದ್ದುಕೊಂಡು ರೈಟರ್ ಮೂಲಕ ತೋಟವನ್ನು ನಿಭಾಯಿಸುವ ಪ್ರೀತಿ ಮತ್ತು ನಂಬಿಕೆಯ ವ್ಯವಹಾರವಿತ್ತು. ಆದರೆ ಇಂದು ಪರಿಸ್ಥಿತಿ ಸಂಪೂರ್ಣ ತದ್ವಿರುದ್ಧವಾಗಿದ್ದು, ಜೀವನ ಸಂಪೂರ್ಣ ಯಾಂತ್ರೀಕೃತವಾಗಿದೆ. ಪ್ರೀತಿ ಮತ್ತು ನಂಬಿಕೆ ಕಳೆದು ಹೋಗಿದೆ. ವ್ಯಕ್ತಿ ಹಾಗೂ ಸಮಾಜಕ್ಕೆ ಇರುವ ಮತ್ತೊಂದು ಮುಖವನ್ನು ತೋರಿಸುವ ಪ್ರಯತ್ನವನ್ನು 'ಕಾಂಗತ ಮೂಡ್' ಚಿತ್ರತಂಡ ಮಾಡಿದೆ.

ಮದ್ಯ ವ್ಯಸನ ಮತ್ತು ಮತಾಂತರದಂತಹ ಸಾಮಾಜಿಕ ಪಿಡುಗು ಇಡೀ ವ್ಯವಸ್ಥೆಯ ಮೇಲೆ ಹೇಗೆ ದುಷ್ಪರಿಣಾಮ ಬೀರುತ್ತದೆ ಎನ್ನುವುದನ್ನು ಚಿತ್ರದಲ್ಲಿ ಪ್ರತಿಬಿಂಬಿಸಲಾಗಿದೆ. ತುಮುಲ ಈ ಚಿತ್ರದಲ್ಲಿ ನಟಿಸಲು ಅವಕಾಶ ದೊರೆತಿದ್ದರಿಂದ ತುಂಬಾ ಸಂತೋಷ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹಿತ್ತ ಗಿಡ ಮದ್ದಲ್ಲ ಎನ್ನುವ ರೀತಿಯಲ್ಲಿ ಕೊಡಗಿನ ಈ ಪ್ರತಿಭೆಗಳು ಪ್ರೋತ್ಸಾಹದ ಕೊರತೆಯನ್ನು ಎದುರಿಸುತ್ತಿದ್ದಾರೆ. ಎಲ್ಲರೂ ಕೊಡವ ಸಿನಿಮಾ ನೋಡಿ ಬೆಂಬಲಿಸುವ ಮೂಲಕ ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಬೇಕೆಂದು ಬಿ.ಜಿ. ಅನಂತ ಶಯನ ಕರೆ ನೀಡಿದರು.

ಚಿತ್ರದ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರು ಮಾತನಾಡಿ, ನಮ್ಮ ಸಂಸ್ಥೆಯ ಮೂಲಕ ಇಲ್ಲಿಯವರೆಗೆ 6 ಕೊಡವ ಚಿತ್ರಗಳನ್ನು ನಿರ್ಮಿಸಿ ನಿರ್ದೇಶಿಸಲಾಗಿದೆ. ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ನಮ್ಮ ಚಿತ್ರಗಳು ಪ್ರಶಸ್ತಿಗಳನ್ನು ಗೆದ್ದಿವೆ. ಅತ್ಯಂತ ಕಡಿಮೆ ಜನ ಸಂಖ್ಯೆ ಹೊಂದಿರುವ ಸಣ್ಣ ಸಮುದಾಯದ ಕೊಡವ ಪ್ರತಿಭೆಗಳು ಕೂಡ ಸಿನಿಮಾ ರಂಗದಲ್ಲಿ ಗುರುತಿಸಿಕೊಂಡಿದ್ದಾರೆ ಎನ್ನುವುದನ್ನು ಸಾಕ್ಷೀಕರಿಸಲು ಪ್ರತಿ ವರ್ಷ ಒಂದು ಕೊಡವ ಚಿತ್ರವನ್ನು ನಿರ್ಮಿಸಲಾಗುತ್ತಿದೆ ಎಂದರು.

ಕೊಡವ ಚಿತ್ರಗಳ ಮೂಲಕ ಕೊಡವ ಭಾಷೆ, ಸಂಸ್ಕೃತಿ, ಆಚಾರ, ವಿಚಾರ, ಪರಂಪರೆಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಮಾಡಲಾಗುತ್ತಿದೆ. ಆದರೆ ಕೊಡವ ಚಿತ್ರಗಳಿಗೆ ಪ್ರೇಕ್ಷಕರ ಕೊರತೆ ಎದುರಾಗುತ್ತಿರುವುದು ಅತ್ಯಂತ ಬೇಸರದ ವಿಚಾರ ಎಂದು ತಿಳಿಸಿದ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ, ಚಿತ್ರವನ್ನು ನೋಡಿ ಪ್ರೋತ್ಸಾಹಿಸುವಂತೆ ಮನವಿ ಮಾಡಿದರು. ಕಲಾತ್ಮಕ ಚಿತ್ರಗಳ ಮೂಲಕವೇ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಕಾಂಗತ ಮೂಡ್ ಚಿತ್ರದಲ್ಲಿ ಮದ್ಯ ವ್ಯಸನ ಮತ್ತು ಮತಾಂತರದ ಪಿಡುಗಿನಲ್ಲಿ ಸಿಲುಕಿ ದುರಂತ ಅಂತ್ಯ ಕಾಣುವ ವ್ಯಕ್ತಿಯ ಚಿತ್ರಣವನ್ನು ತೋರಿಸಲಾಗಿದೆ. ತೋಟದ ಮಾಲೀಕ ಆತ್ಮಾವಲೋಕನ ಮಾಡಿಕೊಳ್ಳುವ ಅಂಶವೂ ಇದೆ ಎಂದು ವಿವರಿಸಿದರು.

ಚಿತ್ರದ ಸಹ ನಿರ್ಮಾಪಕಿ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ಮಾತನಾಡಿ, ಕೊಡಗಿನಲ್ಲಿ ಸಿನಿಮಾಸಕ್ತಿ ಕಡಿಮೆ ಇದೆ. ಕೊಡವ ಚಿತ್ರಗಳಿಗೆ ನಿರೀಕ್ಷಿತ ಬೆಂಬಲ ದೊರೆಯುತ್ತಿಲ್ಲ. ಹಾಕಿದ ಹಣ ಮರಳಿ ಬರುವುದೇ ಕಷ್ಟವಾಗಿದೆ. ಆದರೂ ಕೊಡವ ಭಾಷೆಯ ಮೇಲಿನ ಅಭಿಮಾನದಿಂದ ವರ್ಷಕ್ಕೆ ಒಂದು ಸಿನಿಮಾವನ್ನು ನಿರ್ಮಿಸುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಚಿತ್ರದ ಸಹ ನಿರ್ದೇಶಕಿ ಈರಮಂಡ ಹರಿಣಿ ವಿಜಯ್ ಮಾತನಾಡಿ ಕೊಡಗಿನ ಜನ ಬೇರೆ ಸಿನಿಮಾಗಳನ್ನು ನೋಡುತ್ತಾರೆ. ಆದರೆ ಕೊಡವ ಚಿತ್ರಗಳನ್ನು ನೋಡುವವರ ಸಂಖ್ಯೆ ಕಡಿಮೆ ಇದೆ. ಪ್ರೋತ್ಸಾಹದ ಕೊರತೆಯಿಂದ ಚಿತ್ರ ನಿರ್ಮಾಣ ಭಯ ಮತ್ತು ಬೇಸರವನ್ನು ಮೂಡಿಸುತ್ತದೆ ಎಂದರು.

ಚಿತ್ರದ ನಾಯಕ ನಟ ಚಿಡಿಯಂಡ ಸಂತೋಷ್ ಮೇದಪ್ಪ ಮಾತನಾಡಿ, ಇದು ನಾನು ನಟಿಸಿದ 4ನೇ ಚಿತ್ರವಾಗಿದ್ದು, ಉತ್ತಮ ರೀತಿಯಲ್ಲಿ ಮೂಡಿ ಬಂದಿದೆ. ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರೊಂದಿಗೆ ಕೆಲಸ ಮಾಡಲು ಖುಷಿಯಾಗಿದೆ ಎಂದು ಹೇಳಿದರು.

ಚಿತ್ರದ ನಿರ್ಮಾಣ ನಿರ್ವಹಣೆ ಮಾಡಿರುವ ನಟ ಬೊಳ್ಳಜಿರ ಬಿ.ಅಯ್ಯಪ್ಪ ಅವರು ಕಾಂಗತ ಮೂಡ್ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು.

ಅತಿಥಿ ಶಿಕ್ಷಕಿ, ಅಡುಗೆ ಸಹಾಯಕಿ ನೇಮಕಾತಿಗೆ ಲಂಚ ಸ್ವೀಕಾರ

ಆಶ್ರಮ ಶಾಲಾ ಮುಖ್ಯ ಶಿಕ್ಷಕ ಲೋಕಾಯುಕ್ತ ಬಲೆಗೆ

ಸಿದ್ದಾಪುರ, ಸೆ.28– ಆಶ್ರಮ ಶಾಲೆಗೆ ಅತಿಥಿ ಶಿಕ್ಷಕಿ ಹಾಗೂ ಅಡುಗೆ ಸಹಾಯಕಿ ನೇಮಕಾತಿ ಸಂಬಂಧ 30,000 ಲಂಚಕ್ಕೆ ಬೇಡಿಕೆ ಇಟ್ಟು 20,000 ಲಂಚ ಸ್ವೀಕರಿಸಲು ಮುಂದಾಗಿದ್ದ ಚೆನ್ನಂಗಿ ಬಸವನಹಳ್ಳಿ ಹಾಡಿಯ ಆಶ್ರಮ ಶಾಲೆಯ ಮುಖ್ಯ ಶಿಕ್ಷಕ ಸಿದ್ದಲಿಂಗ ಶೆಟ್ಟಿ ಅವರನ್ನು ಲೋಕಾಯುಕ್ತ ಪೊಲೀಸರು ದಾಳಿ ಮಾಡಿ ವಶಕ್ಕೆ ಪಡೆದಿದ್ದಾರೆ.

ಆಶ್ರಮ ಶಾಲೆಗೆ ಅತಿಥಿ ಶಿಕ್ಷಕಿ ಹಾಗೂ ಅಡುಗೆ ಸಹಾಯಕಿ ಹುದ್ದೆಗೆ ನೇಮಕ ಮಾಡಿಕೊಳ್ಳಲು ತಾಲೂಕು ಸಮಾಜ ಕಲ್ಯಾಣ ಇಲಾಖೆ ಅರ್ಜಿ ಆಹ್ವಾನಿಸಿತ್ತು. ಈ ನೇಮಕಾತಿಗೆ ಇಲಾಖೆಯ ಅಧಿಕಾರಿ ನವೀನ್ ಕುಮಾರ್ ಅವರಿಗೆ ಲಂಚ ನೀಡಬೇಕಾಗಿದ್ದು ಅತಿಥಿ ಶಿಕ್ಷಕಿ ಹುದ್ದೆಗೆ ಮೀನಾಕ್ಷಿ ಅವರಿಂದ 20,000, ಅಡುಗೆ ಸಹಾಯಕಿ ಮೋನಿಕಾ ಅವರಿಂದ 10,000 ರೂ ಸೇರಿ, ಒಟ್ಟು 30,000 ರೂ. ಕೊಡುವಂತೆ ಆಶ್ರಮ ಶಾಲೆಯ ಮುಖ್ಯ ಶಿಕ್ಷಕ ಸಿದ್ದಲಿಂಗ ಶೆಟ್ಟಿ ಒತ್ತಾಯಿಸಿದ್ದರು ಎನ್ನಲಾಗಿದೆ.

ಲಂಚದ ಹಣ ನೀಡಿ ಕೆಲಸ ಮಾಡಲು ಇಷ್ಟವಿಲ್ಲದ ಕಾರಣ ಹಾಡಿಯ ಮುಖಂಡ ಜೆ.ಕೆ.ಮುತ್ತಮ್ಮ ಅವರ ನೇತೃತ್ವದಲ್ಲಿ ಹುದ್ದೆಯ ಆಕಾಂಕ್ಷಿಗಳಾದ ಮೀನಾಕ್ಷಿ, ಮೋನಿಕಾ ಲೋಕಾಯುಕ್ತಕ್ಕೆ ದೂರು ನೀಡಿದರು. ದೂರು ಸ್ವೀಕರಿಸಿದ ಮಡಿಕೇರಿ ಲೋಕಾಯುಕ್ತ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿ ಆಶ್ರಮ ಶಾಲೆಯಲ್ಲಿ ಆರೋಪಿತರ ಸೂಚನೆಯ ಮೇರೆಗೆ 20,000 ಲಂಚದ ಹಣವನ್ನು ಶಾಲಾ ಶಿಕ್ಷಕಿ ಸಿಂಧು ಮೂಲಕ ನೀಡುವ ಸಂದರ್ಭದಲ್ಲಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ದಾಳಿ ಮಾಡಿ ಹಣದೊಂದಿಗೆ ಶಿಕ್ಷಕಿ ಸಿಂಧು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಅವರ ಮಾಹಿತಿ ಮೇರೆಗೆ ಆಶ್ರಮ ಶಾಲೆಯ ಮುಖ್ಯ ಶಿಕ್ಷಕ ಸಿದ್ದಲಿಂಗ ಶೆಟ್ಟಿ ಅವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಲಾಯಿತು.

ಅಪರ ಪೊಲೀಸ್ ಮಹಾನಿರ್ದೇಶಕ, ಮನೀಷ್ ಕರ್ಬಿಕರ್ ಪೊಲೀಸ್ ಮಹಾನಿರೀಕ್ಷಕರಾದ ಸುಬ್ರಮಣ್ಯೇಶ್ವರ ರಾವ್ ಮತ್ತು ಮೈಸೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಟಿ.ಜೆ.ಉದೇಶ್ ಅವರ ಮಾರ್ಗದರ್ಶನದಲ್ಲಿ ಮಡಿಕೇರಿ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಾಶ್.ಕೆ.ಸಿ ಮತ್ತು ಪೊಲೀಸ್ ನಿರೀಕ್ಷಕರಾದ ಲೋಕೇಶ್ ಹಾಗೂ ಸಿಬ್ಬಂದಿ ತಂಡ ಈ ದಾಳಿ ನಡೆಸಿತ್ತು.

ದಸರಾ ದಶ ಮಂಟಪಗಳ ಶೋಭಾಯಾತ್ರೆಯಲ್ಲಿ ಅಬ್ಬರದ ಧ್ವನಿ ವರ್ಧಕಗಳಿಗೆ ನಿಯಂತ್ರಣ

ದಶ ಮಂಟಪ ಸಮಿತಿ ಸಭೆಯಲ್ಲಿ ಒಮ್ಮತದ ತೀರ್ಮಾನ



ಶ್ರೀ ಕೋಟೆ ಮಾರಿಯಮ್ಮ ದೇವಾಲಯದ ಸಭಾಂಗಣದಲ್ಲಿ ದಶ ಮಂಟಪ ಸಮಿತಿ ಅಧ್ಯಕ್ಷ ಜಿ.ಕೆ.ಜಗದೀಶ್ ಮಾತನಾಡಿದರು.

ಮಡಿಕೇರಿ,ಸೆ.28– ಐತಿಹಾಸಿಕ ಮಡಿಕೇರಿ ದಸರಾ ಜನೋತ್ಸವದ ದಶ ಮಂಟಪಗಳ ಶೋಭಾಯಾತ್ರೆಯಲ್ಲಿ ಅಬ್ಬರದ ಧ್ವನಿ ವರ್ಧಕಗಳ ಬಳಕೆಗೆ ಸ್ವಯಂ ನಿಯಂತ್ರಣ ಹೇರಿಕೊಳ್ಳಲು ದಶ ಮಂಟಪ ಸಮಿತಿ ಸಭೆಯಲ್ಲಿ ಒಮ್ಮತದ ತೀರ್ಮಾನ ಕೈಗೊಳ್ಳಲಾಯಿತು.

ನಗರದ ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀ ಕೋಟೆ ಮಾರಿಯಮ್ಮ ದೇವಾಲಯದ ಸಭಾಂಗಣದಲ್ಲಿ ದಶ ಮಂಟಪ ಸಮಿತಿ ಅಧ್ಯಕ್ಷ ಜಿ.ಕೆ. ಜಗದೀಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎಲ್ಲ 10 ಮಂಟಪ ಸಮಿತಿಗಳ ಅಧ್ಯಕ್ಷರು ಮತ್ತು ಸಮಿತಿ ಪದಾಧಿಕಾರಿಗಳು ಪಾಲ್ಗೊಂಡು ಈ ನಿರ್ಧಾರ ಕೈಗೊಂಡರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ದಶ ಮಂಟಪ ಸಮಿತಿ ಅಧ್ಯಕ್ಷ ಜಿ.ಕೆ.ಜಗದೀಶ್, ಕಳೆದ ಬಾರಿ ದಸರಾ ಉತ್ಸವದ ವೇಳೆ ಡಿ.ಜೆ. ಧ್ವನಿವರ್ಧಕ ಬಳಸಿದ ಪರಿಣಾಮ ದಶ ಮಂಟಪ ಸಮಿತಿಗಳು ಕಾನೂನು ಕ್ರಮ ಎದುರಿಸುವಂತಾಯಿತು. ಈ ಬಾರಿ ಇಂತಹ ಕ್ರಮಗಳಿಗೆ ಅವಕಾಶ ನೀಡದ ರೀತಿಯಲ್ಲಿ ಕೇವಲ 12 ಬಾಕ್ಸ್ ಧ್ವನಿವರ್ಧಕಗಳನ್ನು ಎಲ್ಲಾ ಮಂಟಪಗಳು ಅಳವಡಿಕೊಳ್ಳಬೇಕು. ಮಂಟಪಗಳಲ್ಲಿ ಲೇಸರ್ ಲೈಟ್, ಸಿಡಿಮದ್ದು ಪ್ರದರ್ಶನ ನಿಷೇಧಿಸಿದ್ದು ಇದಕ್ಕೆ ದಶ ಮಂಟಪಗಳು ಬದ್ಧರಾಗಬೇಕು. ಈ ಕುರಿತು ದಶ ಮಂಟಪಗಳು ನಿರ್ಣಯ ಕೈಗೊಳ್ಳಬೇಕು ಎಂದು ಹೇಳಿದರು.

ಇದಕ್ಕೆ ಎಲ್ಲಾ ಮಂಟಪ ಸಮಿತಿಗಳು ಸಮ್ಮತಿ ವ್ಯಕ್ತಪಡಿಸಿದವು. ದಸರಾ ಉತ್ಸವದಲ್ಲಿ ಪುರಾತನ ಕಾಲದ ಸಂಪ್ರದಾಯಗಳು ಮುಂದುವರೆಯಬೇಕು. ದಸರಾ ಸಂಪ್ರದಾಯಗಳಿಗೆ ಯಾವುದೇ ರೀತಿಯ ಕಪ್ಪು ಚುಕ್ಕೆ ಬಾರದ ರೀತಿಯಲ್ಲಿ ದಶ ಮಂಟಪಗಳ ಶೋಭಾಯಾತ್ರೆ ನಡೆಸಬೇಕು ಎಂದು ಜಗದೀಶ್ ಹೇಳಿದರು.

ಅನುದಾನ ಆತಂಕ ಬೇಡ: ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ ಮಾತನಾಡಿ, ಈ ಬಾರಿಯೂ ರಾಜ್ಯ ಸರಕಾರದಿಂದ ಮಡಿಕೇರಿ ದಸರಾಕ್ಕೆ ಅನುದಾನ ಲಭ್ಯವಾಗಲಿದೆ. ಸೋಮವಾರ ಅಧಿಕೃತ ಅನುದಾನದ ಮಾಹಿತಿ ದೊರೆಯಲಿದೆ. ಈ ಅನುದಾನದಲ್ಲಿ 4 ಶಕ್ತಿ ದೇವತೆಗಳ ಕರಗಗಳು, ಹಾಗೂ ದಶ ಮಂಟಪಗಳಿಗೂ ಅನುದಾನ ಸಿಗಲಿದೆ. ಈ ಕುರಿತು ದಶ ಮಂಟಪಗಳು ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದರು.

ರಸ್ತೆ ದುರಸ್ತಿಯಾಗಲಿ: ದಶ ಮಂಟಪಗಳು ಶೋಭಾಯಾತ್ರೆ ನಡೆಸುವ ರಸ್ತೆಗಳು ಗುಂಡಿ ಬಿದ್ದಿವೆ. ಕೆಲವು ಕಡೆ ಮಂಟಪಗಳು ಸಾಗದ ರೀತಿಯಲ್ಲಿ ರಸ್ತೆಗಳು ಹಾಳಾಗಿವೆ. ಈ ಹಿನ್ನೆಲೆಯಲ್ಲಿ ನಗರಸಭೆ ಮೂಲಕ ಶೀಘ್ರವೇ ರಸ್ತೆಗಳ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ವಿವಿಧ ಮಂಟಪ ಸಮಿತಿಗಳು ಒತ್ತಾಯಿಸಿದವು. ಈಗಾಗಲೇ ನಗರ ಸಭೆಯಿಂದ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ದಸರಾ ಉತ್ಸವಕ್ಕೂ ಮುನ್ನವೇ ರಸ್ತೆಗಳ ರಿಪೇರಿ ಮಾಡಲಾಗುತ್ತದೆ ಎಂದು ದಶ ಮಂಟಪ ಸಮಿತಿ ಪದಾಧಿಕಾರಿಗಳು ಸಭೆಗೆ ವಿವರಿಸಿದರು.

ಮಂಟಪಗಳು ಹೊರಡುವ ಸಮಯ, ಪ್ರದರ್ಶನ ನೀಡುವ ಸ್ಥಳ, ಶೋಭಾಯಾತ್ರೆ ತೆರಳುವ ಮಾರ್ಗ, ಮಂಟಪಗಳಲ್ಲಿ ಟ್ರ್ಯಾಕ್ಟರ್‌ಗಳ ಬಳಕೆ ಮತ್ತಿತ್ತರ ವಿಚಾರಗಳ ಕುರಿತು ಚರ್ಚೆ ನಡೆಸಲಾಯಿತು.

ವೇದಿಕೆಯಲ್ಲಿ ದಶ ಮಂಟಪ ಸಮಿತಿ ಪ್ರಮುಖರಾದ ಯೋಗೇಶ್, ಬಿ.ಪಿ. ಡಿಶು, ಸದಾ ಮುದ್ದಪ್ಪ, ಬಿ.ಕೆ ಜಗದೀಶ್, ಮಂಜುನಾಥ್, ರಾಜೇಶ್, ರಂಜಿತ್, ಪ್ರಭು ರೈ, ಸೋಮಯ್ಯ ಇತರರು ಉಪಸ್ಥಿತರಿದ್ದರು.

ವಿರಾಜಪೇಟೆಯ ಕೆಲವೆಡೆ ಸ್ವಚ್ಛತಾ ಕಾರ್ಯಕ್ರಮ



ವಿರಾಜಪೇಟೆ, ಸೆ.28– ಓಡಿಪಿ ಸಂಸ್ಥೆಯು ಸದಸ್ಯರಿಂದ ತಾಲೂಕಿನ ಗ್ರಾಮೀಣ ಭಾಗದ ನಿರ್ವಾಲಗಿರಿ, ಕಲ್ಲುಬಾಣೆ, ಪೆರುಂಬಾಡಿ ಹಾಗೂ ಪಟ್ಟಣದ ನೆಹರು ನಗರ ಇತರೆಡೆಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಸಲಾಯಿತು.

ಸ್ವಚ್ಚತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಆರ್ಜಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಫಾತಿಮ ಅವರು ಮಾತನಾಡಿ ಡೆಂಗ್ಯೂ ಜ್ವರ ಹರಡದಂತೆ ಪ್ರತಿಯೊಬ್ಬರು ಸ್ವಚ್ಚತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸ್ವಚ್ಚತೆ ಬಗ್ಗೆ ಹೆಚ್ಚು ಆದ್ಯತೆ ನೀಡಲು ಜನರಿಗೆ ಅರಿವು ಮೂಡಿಸುವಂತಾಗಬೇಕು ಎಂದರು.

ಓಡಿಪಿ ಸಂಸ್ಥೆ ಕಾರ್ಯಕರ್ತೆ ರೀಟಾ ಜೋಸೆಫ್ ಮಾತನಾಡಿ, ಕಳೆದ 40 ವರ್ಷಗಳಿಂದ ಓಡಿಪಿ ಸಂಸ್ಥೆ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಬಡ ಕುಟುಂಬದ ಮಹಿಳೆಯರ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದೆ. ಇತ್ತೀಚೆಗೆ ಡೆಂಗ್ಯೂ ಜ್ವರ ಹರಡದಂತೆ ಎಚ್ಚರ ವಹಿಸುವ ನಿಟ್ಟಿನಲ್ಲಿ ಓಡಿಪಿ ಸಂಸ್ಥೆ ಸದಸ್ಯರು ಸ್ವಚ್ಚತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸ್ವಚ್ಚತಾ ಕಾರ್ಯಕ್ರಮದಲ್ಲಿ ಆರ್ಜಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಪ್ರಮೋದ್, ಕಾರ್ಯದರ್ಶಿ ರಾಜನ್, ಓಡಿಪಿ ಕಾರ್ಯಕರ್ತರಾದ ಅನೀಲ್ ಕುಮಾರ್, ಆಶಾ ಕಾರ್ಯಕರ್ತರಾದ ಗಾಯತ್ರಿ, ಶಶಿಕಲಾ, ಉಷ, ಮಹಿಳೋದಯ ಒಕ್ಕೂಟದ ಪ್ರಮುಖರು ಸದಸ್ಯರು ಭಾಗವಹಿಸಿದ್ದರು.

ಬಿಆರ್ ಹಿಲ್ಸ್ ದೇವಸ್ಥಾನಕ್ಕೆ ಮೆಟ್ಟಿಲುಗಳ ನಿರ್ಮಾಣ ಕಾರ್ಯ

ಭಕ್ತರಿಗೆ ಪರ್ಯಾಯ ಮಾರ್ಗವಿಲ್ಲದೆ ದೇವಸ್ಥಾನಕ್ಕೆ ಬರಲು ತೊಂದರೆ



ರಾಜಗೋಪುರಕ್ಕೆ ಇರುವ ಹಳೆಯ ಮೆಟ್ಟಿಲುಗಳನ್ನು ಕಿತ್ತು ಹಾಕಿ ಹೊಸ ಮೆಟ್ಟಿಲುಗಳ ನಿರ್ಮಾಣ ಕಾಮಗಾರಿ ಆರಂಭಿಸಿರುವುದು.

ಯಳಂದೂರು, ಸೆ.28– ತಾಲೂಕಿನ ಬಿಳಿಗಿರಿರಂಗನಬೆಟ್ಟದ ಬಿಳಿಗಿರಿರಂಗನಾಥ ಸ್ವಾಮಿ ದೇವಸ್ಥಾನಕ್ಕೆ ಮೆಟ್ಟಿಲುಗಳ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದ್ದು ಭಕ್ತರಿಗೆ ಪರ್ಯಾಯ ಮಾರ್ಗವಿಲ್ಲದೇ ನಿರ್ಮಾಣ ಹಂತದಲ್ಲಿರುವ ಮೆಟ್ಟಿಲು ಮತ್ತು ಮಣ್ಣಿನ ರಾಶಿಯ ಮೇಲೆ ತೆರಳಲು ತೊಂದರೆಯಾಗುತ್ತಿದೆ. ಬಿಳಿಗಿರಿರಂಗನಬೆಟ್ಟಕ್ಕೆ ದಿನನಿತ್ಯ ಭಕ್ತರು ಹಾಗೂ ಪ್ರವಾಸಿಗರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಈಗಾಗಲೇ ದೇವಸ್ಥಾನದ ಜೀರ್ಣೋದ್ಧಾರ, ರಾಜಗೋಪುರ ನಿರ್ಮಾಣ ಮಾಡಲಾಗಿದೆ. ಉಳಿದಂತೆ ದೇವಸ್ಥಾನಕ್ಕೆ ಇರುವ ಹಳೆಯ ಮೆಟ್ಟಿಲುಗಳನ್ನು ಕಿತ್ತು ಹಾಕಿ ಹೊಸ ಮೆಟ್ಟಿಲುಗಳು ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ. ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ ಬಸ್, ಕಾರುಗಳ ಮೂಲಕ ಆಗಮಿಸುವ ಭಕ್ತರು ಹಾಗೂ ಪ್ರವಾಸಿಗರು ಬೆಟ್ಟದ ರಥದ ಬೀದಿಯಲ್ಲಿ ಇಳಿದು ಮೆಟ್ಟಿಲುಗಳ ಮೂಲಕ ದೇವಸ್ಥಾನಕ್ಕೆ ತೆರಳುವುದು ರೂಢಿ. ಆದರೆ, ಹೊಸ ಮೆಟ್ಟಿಲುಗಳ ನಿರ್ಮಾಣಕ್ಕೆ ಕಾಮಗಾರಿ ಆರಂಭಿಸಿರುವುದರಿಂದ ದೇವಸ್ಥಾನಕ್ಕೆ ತೆರಳಲು ಮೆಟ್ಟಿಲುಗಳಿಲ್ಲ. ಇದರಿಂದ ರಥದ ಬೀದಿಯಿಂದ ರಾಮ ಮಂದಿರದ ತನಕ ಮೆಟ್ಟಿಲು ಹತ್ತುವ ಭಕ್ತರು ಅಲ್ಲಿಂದ ಮೇಲಕ್ಕೆ ತೆರಳಲು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಇದರಿಂದ ರಾಮಮಂದಿರದ ಬಳಿಯಿಂದ ಅಕ್ಕಪಕ್ಕದ ಮನೆಯ ಕಿರಿದಾದ ಜಾಗಗಳಲ್ಲಿ ತೆರಳುತ್ತಾರೆ. ಇನ್ನೂ ಕೆಲವರಿಗೆ ಯಾವ ಕಡೆ ಹೋಗಬೇಕು ಎಂದು ಗೊತ್ತಾಗದೇ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಈ ಸಂಬಂಧ ದೇವಸ್ಥಾನದ ಆಡಳಿತ ಮಂಡಳಿ ಭಕ್ತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪರ್ಯಾಯ ಮಾರ್ಗಗಳ ವ್ಯವಸ್ಥೆ ಕೂಡ ಮಾಡಿಲ್ಲ. ಅಲ್ಲದೇ ಬೆಟ್ಟದಲ್ಲಿರುವ ಬಸ್ ನಿಲ್ದಾಣದ ಬಳಿಯಿಂದ ರಸ್ತೆ ಮೂಲಕ ದೇವಸ್ಥಾನಕ್ಕೆ ತೆರಳಲು ಅವಕಾಶವಿದೆ.

ಅಲ್ಲಿಯೂ ಕೂಡ ಯಾವುದೇ ನಾಮಫಲಕ ಅಳವಡಿಸದ ಕಾರಣ ರಸ್ತೆ ಮೂಲಕ ತೆರಳದೇ ಮೆಟ್ಟಿಲುಗಳ ಬಳಿ ಬರುವ ಭಕ್ತರು ದೇವಸ್ಥಾನಕ್ಕೆ ದಾರಿ ಇಲ್ಲದೇ ಪರದಾಡುತ್ತಿದ್ದಾರೆ. ಇನ್ನಾದರೂ ಸಂಬಂಧಪಟ್ಟವರು ಇತ್ತ ಗಮನಹರಿಸಿ ಮೆಟ್ಟಿಲುಗಳ ಮೂಲಕ ಹತ್ತುವ ಭಕ್ತರಿಗೆ ರಾಮಮಂದಿರದಿಂದ ಮೇಲಕ್ಕೆ ತೆರಳಲು ಪರ್ಯಾಯ ಮಾರ್ಗ ಕಲ್ಪಿಸಬೇಕು. ಇಲ್ಲದಿದ್ದರೆ ಬಸ್ ನಿಲ್ದಾಣದ ಬಳಿಯೇ ನಾಮಫಲಕ ಅಳವಡಿಸಿ ರಸ್ತೆ ಮೂಲಕ ತೆರಳಲು ಅನುಕೂಲ ಕಲ್ಪಿಸಿಕೊಡಬೇಕೆಂದು ಭಕ್ತಾದಿಗಳು ಒತ್ತಾಯಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಚಾಮರಾಜನಗರ ತಾಲೂಕಿನ ಹರವೆ ಶ್ರೀ ಚನ್ನಬಸವೇಶ್ವರ ವಿದ್ಯಾ ಸಂಸ್ಥೆ ಅವರಣದಲ್ಲಿ ಮೈಸೂರಿನ ಜೆಎಸ್‌ಎಸ್ ಅಸ್ಪತ್ರೆ, ಹರವೆ ಶ್ರೀ ಚನ್ನಬಸವೇಶ್ವರ ಪ್ರತಿಷ್ಠಾನ, ಮೈಸೂರಿನ ಶ್ರೀ ಚಾಮರಾಜೇಶ್ವರಿ ಅಕ್ಕನ ಬಳಗ, ಐಎಲ್‌ವೈಎಫ್ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಸಹಯೋಗದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಶಾಸಕ ಎಚ್.ಎಂ. ಗಣೇಶ್‌ಪ್ರಸಾದ್ ಚಾಲನೆ ನೀಡಿದರು.

'ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ಲಭ್ಯ'



ಚಾಮರಾಜನಗರದ ಬಾಲಕರ ಸರ್ಕಾರಿಪದವಿ ಪೂರ್ವಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಹಾಗೂ ಕ್ರೀಡಾಕೂಟ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಸೆ.28– ರಾಜ್ಯ ಸರ್ಕಾರ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದು, ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆದು ಸಮಾಜದ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದು ಎಂಎಸ್ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ 2023–24ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾಕೂಟ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು. ರಾಜ್ಯ ಸರ್ಕಾರ ಸರ್ಕಾರಿ ಶಾಲಾ ಕಾಲೇಜುಗಳ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡುವ ಮೂಲಕ ಪ್ರತಿಯೊಬ್ಬರಿಗೂ ಗುಣಮಟ್ಟದ ಶಿಕ್ಷಣ ನೀಡಲು ಮುಂದಾಗಿದೆ. ಈ ನಿಟ್ಟಿನಲ್ಲಿ ಸಿಆರ್‌ಎಫ್ ಅನುದಾನದಲ್ಲಿ ಚಂದಕವಾಡಿ ಶಾಲೆ, ಬಾಲಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ತಲಾ 10ಲಕ್ಷ ರೂ.ಗಳಂತೆ ಒಟ್ಟು 40 ಲಕ್ಷ ರೂ.ಗಳನ್ನು ಶೌಚಾಲಯ, ಶುದ್ಧ ಕುಡಿಯುವ ಘಟಕ ನಿರ್ಮಿಸಲು ಬಿಡುಗಡೆ ಮಾಡಲಾಗಿದೆ ಎಂದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ್ ಪ್ರಸನ್ನ ಮಾತನಾಡಿ, ಇಂದು ಖಾಸಗಿ ಶಿಕ್ಷಣಸಂಸ್ಥೆಗಳಿಗೆ ಹೋಲಿಸಿದರೆ ಸರ್ಕಾರಿ ಶಾಲಾ ಕಾಲೇಜಿನಲ್ಲೂ ಉತ್ತಮ ತರಬೇತಿ ಪಡೆದ ನುರಿತ ಉಪನ್ಯಾಸಕರು, ಶಿಕ್ಷಕರ ಸಮೂಹವೇ ಇದೆ. ಇದೇ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಮೂವರು ವಿದ್ಯಾರ್ಥಿಗಳು ಪ್ರಥಮ ಬಾರಿಗೆ ವೈದ್ಯಕೀಯ ಶಿಕ್ಷಣಕ್ಕೆ ಸೀಟು ಪಡೆದಿರುವುದು ಶ್ಲಾಘನೀಯ ಎಂದರು.

ಪ್ರಾಂಶುಪಾಲ ಸೋಮಣ್ಣ ಮಾತನಾಡಿ, ಬಾಲಕರ ಪದವಿಪೂರ್ವ ಕಾಲೇಜು ಆರಂಭವಾದ ಅಂದಿನಿಂದಲೂ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಜತೆಗೆ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಸನ್ಮಾನಿಸಲಾಗುತ್ತಿದೆ. ವಿದ್ಯಾರ್ಥಿಗಳು ಸಮಯ ಪ್ರಜ್ಞೆ ರೂಡಿಸಿಕೊಳ್ಳಬೇಕು, ಗುರುಹಿರಿಯರನ್ನು ಗೌರವದಿಂದ ಕಾಣಬೇಕು, ವಿದ್ಯೆಕಲಿಯುವುದರ ಜತೆಗೆ ವಿನಯ ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಪಡೆದ 9 ಮಂದಿ ವಿದ್ಯಾರ್ಥಿಗಳು, ಇತಿಹಾಸ, ಕನ್ನಡ, ಭೂಗೋಳಶಾಸ್ತ್ರದಲ್ಲಿ 100ಕ್ಕೆ 100 ಅಂಕಪಡೆದ ಮೂವರು ವಿದ್ಯಾರ್ಥಿಗಳು, ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ವಿಜೇತರಾಗಿ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಖಲೀಂ ಉಲ್ಲಾಖಾನ್, ಉಪನ್ಯಾಸಕರಾದ ಟಿ.ಮಧು, ರಂಗಸ್ವಾಮಿ, ಎಂ.ಮಹೇಂದ್ರ, ಶೀಲಾ, ಸವಿತಾ, ಕಾಲೇಜಿನ ಸಿಬ್ಬಂದಿ ಹಾಗೂ ಅತಿಥಿ ಉಪನ್ಯಾಸಕರು ವಿದ್ಯಾರ್ಥಿಗಳು ಹಾಜರಿದ್ದರು.


ನಗರಸಭೆಯಿಂದ ಪರಿಶಿಷ್ಟ ಜಾತಿ, ವರ್ಗಗಳ ಸಮುದಾಯಕ್ಕೆ ಅಡುಗೆ ಸಾಮಗ್ರಿಗಳ ವಿತರಣೆ

ಚಾಮರಾಜನಗರ, ಸೆ.28– ನಗರದ ನಗರಸಭೆ ವ್ಯಾಪ್ತಿಯಲ್ಲಿರುವ ವಿವಿಧ ಸಮುದಾಯ ಭವನಗಳಿಗೆ ನಗರಸಭೆಯ ಶೇ. 24.10ರ ಅನುದಾನದಡಿಯಲ್ಲಿ ಅಡುಗೆ ಪರಿಕರಗಳು, ಊಟದ ಟೇಬಲ್, ಚೇರ್‌ಗಳನ್ನು ಕೊಡುಗೆಯಾಗಿ ನೀಡಲಾಯಿತು.

ನಗರಸಭೆ ಅಧ್ಯಕ್ಷ ಸುರೇಶ್ ನಾಯಕ್, ಉಪಾಧ್ಯಕ್ಷೆ ಮಮತಾ ಬಾಲಸುಬ್ರಮಣ್ಯ ಅವರು ನಗರದ ಸೋಮವಾರಪೇಟೆಯ ಅಂಬೇಡ್ಕರ್ ಭವನ, ರಾಮಸಮುದ್ರ ತಿಬ್ಬಳ್ಳಿ ಮಾರಮ್ಮನ ದೇವಸ್ಥಾನದ, ಗಾಳಿಪುರ ಬಡಾವಣೆಯ ಅಂಬೇಡ್ಕರ್ ಭವನ, ರಾಮಸಮುದ್ರ ನಾಯಕ ಸಮುದಾಯದ ಶ್ರೀ ರಾಮಮಂದಿರಗಳಿಗೆ ಅಗತ್ಯವಿರುವ ಪಾತ್ರೆ ಪರಿಕರಗಳನ್ನು ಸಮುದಾಯ ಮುಖಂಡರ ಸಮ್ಮುಖದಲ್ಲಿ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಗರಸಭೆ ಅಧ್ಯಕ್ಷ ಸುರೇಶ್ ನಾಯಕ, ಪರಿಶಿಷ್ಟ ಜಾತಿ ಹಾಗೂ ಪಂಗಡದವರು ವಾಸಿಸುವ ವಿವಿಧ ವಾರ್ಡುಗಳಿಗೆ ಸೇರಿರುವ ಹತ್ತು ಭವನಗಳಿಗೆ ತಲಾ 2.78 ಲಕ್ಷ ರೂ. ವೆಚ್ಚದಲ್ಲಿ ಪಾತ್ರೆ ಪರಿಕರ, ಊಟದ ಟೇಬಲ್, ಚೇರ್‌ಗಳನ್ನು ನೀಡಿದ್ದೇವೆ. ನಗರಸಭೆ ಅಧ್ಯಕ್ಷನಾದ ಪ್ರಥಮ ಅವಧಿಯಲ್ಲಿಯೇ ನಮ್ಮ ಸಮುದಾಯದ ಬಂಧುಗಳಿಗೆ ಸಲವತ್ತು ವಿತರಣೆ ಮಾಡುವ ಭಾಗ್ಯ ನಮ್ಮದಾಗಿದೆ. ಸಮುದಾಯದ ಬಂಧುಗಳು ಶುಭ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳುವ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಹೊಂದಬೇಕು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷ ಮಮತಾ ಬಾಲಸುಬ್ರಮಣ್ಯ, ಸದಸ್ಯರಾದ ಮಹೇಶ್, ನೀಲಮ್ಮ, ಸುಧಾ, ನಗರಸಭೆ ಸಂಯೋಜನಾಧಿಕಾರಿ ವೆಂಕಟನಾಯಕ, ಮುಖಂಡರಾದ ರಾಮಸಮುದ್ರ ಮಹದೇವಯ್ಯ, ಡಾ. ಬಿ.ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಮಹದೇವಯ್ಯ, ಮಹದೇವಸ್ವಾಮಿ, ಮಹದೇವು ಮೊದಲಾದವರು ಇದ್ದರು.



ಅಡುಗೆ ಪರಿಕರಗಳು, ಊಟದ ಟೇಬಲ್, ಚೇರ್‌ಗಳನ್ನು ನಗರಸಭೆ ಅಧ್ಯಕ್ಷ ಸುರೇಶ್ ನಾಯಕ, ಉಪಾಧ್ಯಕ್ಷೆ ಮಮತಾ ಬಾಲಸುಬ್ರಮಣ್ಯ ನೀಡಿದರು.

ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾಸ್ಫೂರ್ತಿ ಮೆರೆಯಿರಿ



ಚಾಮರಾಜನಗರ, ಸೆ.28– ಕ್ರೀಡಾಪಟುಗಳು ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ, ಸೋಲು ಮುಂದಿನ ಗೆಲುವಿನ ಮೆಟ್ಟಿಲೆಂದು ಅರಿತು ಕ್ರೀಡಾಸ್ಫೂರ್ತಿ ಮೆರೆಯುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಸಲಹೆ ನೀಡಿದ್ದಾರೆ.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮೈಸೂರು ವಿಭಾಗಮಟ್ಟದ ದಸರಾ ಕ್ರೀಡಾಕೂಟದ ಅಂಗವಾಗಿ 8 ಜಿಲ್ಲೆಗಳ ಕ್ರೀಡಾಪಟುಗಳು ಪಾಲ್ಗೊಂಡಿದ್ದ ಫುಟ್‌ಬಾಲ್ ಮತ್ತು ಹ್ಯಾಂಡ್‌ಬಾಲ್ ಸ್ಪರ್ಧೆಗಳನ್ನು ಉದ್ಘಾಟಿಸಿ, ಕ್ರೀಡಾಕೂಟದ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೇಹ ಸದೃಢಗೊಳ್ಳಲಿದೆ ಇದರಿಂದ ದೈಹಿಕ, ಮಾನಸಿಕ ಸ್ವಾಸ್ಥ್ಯ, ಸ್ಥಿರತೆ ಉಂಟಾಗಲಿದ್ದು, ಪ್ರತಿಯೊಬ್ಬರು ಕ್ರೀಡೆಗೆ ಆದ್ಯತೆ ನೀಡಬೇಕು. ಕ್ರೀಡೆಯಿಂದ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗಲಿದೆ. ಕ್ರೀಡಾಪಟುಗಳು ತಮ್ಮಲ್ಲಿರುವ ನಕಾರಾತ್ಮಕ ಅಂಶಗಳನ್ನು ಸರಿಪಡಿಸಿಕೊಳ್ಳಲು ಉತ್ತಮ ವೇದಿಕೆಯಾಗಿದೆ. ತೀರ್ಪುಗಾರರು ನಿಷ್ಪಕ್ಷವಾಗಿ ತೀರ್ಪು ನೀಡಬೇಕು ಎಂದರು.

ನಮ್ಮದು ಚೆಲುವ ಚಾಮರಾಜನಗರ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ ಶೇ.52ರಷ್ಟು ಸಮೃದ್ಧ ಅರಣ್ಯ ಪ್ರದೇಶವಿದೆ. ಅಭಯಾರಣ್ಯಗಳು, ದೈವಿಕತೆಗೆ ಹೆಸರುವಾಸಿಯಾದ ಧಾರ್ಮಿಕ ಸ್ಥಳಗಳು, ಕೈಬೀಸಿ ಕರೆಯುವ ಪ್ರವಾಸಿ ತಾಣಗಳಿವೆ ದಸರಾ ಕ್ರೀಡಾಕೂಟದ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ನಗರಕ್ಕೆ ಆಗಮಿಸಿರುವ ಕ್ರೀಡಾಪಟುಗಳು ಇಲ್ಲಿನ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಿ ಜಿಲ್ಲೆಯ ವಿಶೇಷತೆಯನ್ನು ಅರಿಯಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ತಿಳಿಸಿದರು.

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ ಅವರು ಮಾತನಾಡಿದರು.

ಜಿಲ್ಲಾ ನೆಟ್‌ಬಾಲ್ ಅಸೋಶಿಯೇಷನ್ ಅಧ್ಯಕ್ಷರಾದ ನರ್ಗಿಸ್ ಬಾನು, ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷರಾದ ಎಚ್.ವಿ. ಚಂದ್ರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಶಿವಸ್ವಾಮಿ, ಜಿಲ್ಲಾ ಕ್ರೀಡಾಂಗಣ ಸಮಿತಿ ಸದಸ್ಯರಾದ ಶ್ರೀನಿವಾಸಪ್ರಸಾದ್, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ (ಗ್ರೇಡ್–2) ಚಿಕ್ಕಬಸವಯ್ಯ, ಫುಟ್‌ಬಾಲ್ ತರಬೇತುದಾರರಾದ ಗಣೇಶ್ ಕಾರ್ಯಕ್ರಮದಲ್ಲಿ ಇತರರು ಇದ್ದರು.

■ ಡಾ.ಅವರೇಕಾಡು ವಿಜಯಕುಮಾರ್
ಮೊ: 9845363573





ಮೈಸೂರು ತಾಯಿ ಮನೆ...

-ಪ್ರೊ.ಹಂಪ ನಾಗರಾಜಯ್ಯ

ಈ ವರ್ಷದ ನಾಡಹಬ್ಬ ಮೈಸೂರು ದಸರಾ ಉದ್ಘಾಟನೆ ಮಾಡಲಿರುವ ನಾಡಿನ ಹಿರಿಯ ವಿದ್ವಾಂಸ, ಶ್ರೀಯುತ ಪ್ರೊ. ಹಂಪ. ನಾಗರಾಜಯ್ಯ ಅವರೊಂದಿಗೆ 'ಮೈಸೂರು ಮಿತ್ರ'ನ ಪರವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾ ನಿಲಯದ ಭಾಷಾಂತರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿ ಡಾ.ಅವರೇಕಾಡು ವಿಜಯ ಕುಮಾರ್ ನಡೆಸಿದ ಸಂವಹನದ ಪ್ರಮುಖ ಅಂಶಗಳನ್ನು ನಮ್ಮ ಓದುಗರಿಗೆ ನೀಡುತ್ತಿದ್ದೇವೆ. ಒಂದರ್ಥದಲ್ಲಿ ಕನ್ನಡ ನಾಡು, ನುಡಿ, ನೆಲ, ಜಲ, ಸಂಸ್ಕೃತಿ ಬಗೆಗೆ ಪ್ರಸ್ತುತದಲ್ಲಿ ಈ ಹಿರಿಯರ ಮನದಾಳದ ಮಾತುಗಳು ಅತ್ಯಂತ ಔಚಿತ್ಯಪೂರ್ಣ. ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ನಿರಂತರ ವಾಗಿ ಕೃಷಿ ಮಾಡುತ್ತಾ ಬಂದಿರುವ ಅಗ್ರಗಣ್ಯ ವಿದ್ವಾಂಸರಲ್ಲಿ ಡಾ. ಹಂಪ ನಾಗರಾಜಯ್ಯನವರು ಒಬ್ಬರು. ಸೃಜನಶೀಲ ಸಂಶೋಧನೆ, ಭಾಷಾವಿಜ್ಞಾನ, ಜೀವನ ಚರಿತ್ರೆ, ಅನುವಾದ, ಜಾನಪದ... ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮ ಜ್ಞಾನಸಂಪತ್ತನ್ನು ನೀಡಿರುವ ಡಾ. ಹಂಪನಾ ಅವರು, ಕನ್ನಡದಲ್ಲಿ ಈಗಾಗಲೇ 60ಕ್ಕೂ ಹೆಚ್ಚು, ಆಂಗ್ಲಭಾಷೆಯಲ್ಲಿ 10 ಕೃತಿಗಳನ್ನು ರಚಿಸಿ ಸಾಹಿತ್ಯ ಲೋಕದಲ್ಲಿ ವಿಶೇಷ ಸ್ಥಾನ ಹೊಂದಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ವಿದ್ವತ್ತನ್ನು ಪ್ರಚುರಪಡಿಸಿರುವ ಡಾ. ಹಂಪನಾ, ಈಗಲೂ ತುಂಬ ಲವಲವಿಕೆಯಿಂದ ಸಾಹಿತ್ಯ ಕೃಷಿ ಮಾಡುತ್ತಿದ್ದಾರೆ.

ಡಾ. ಅವರೇಕಾಡು ವಿಜಯಕುಮಾರ್: *ಈ ಬಾರಿಯ ದಸರಾ ಉದ್ಘಾಟನೆಗೆ ಆಯ್ಕೆಯಾಗಿ ದ್ದೀರಾ. ನಿಮ್ಮ ಪ್ರತಿಕ್ರಿಯೆ?*

ಪ್ರೊ.ಹಂಪ ನಾಗರಾಜಯ್ಯ: ನಾಡಿನ ಜನರ ವಾತ್ಸಲ್ಯ, ಹಾರೈಕೆ, ಘನಸರ್ಕಾರದ ಆಶೋತ್ತರಗಳ ಫಲ. ನಾಡಿನ ಇಂತಹ ಧಾರ್ಮಿಕ ಉತ್ಸವಗಳ ಯಶಸ್ಸಿಗಿಂತ ಬೇರೇನು ಬೇಕು. ಅತೀವ ಸಂತಸ ತಂದಿದೆ. ನನ್ನ ಪಾಲಿಗೆ ಇದೊಂದು ಅವಿಸ್ಮರಣೀಯ ಸಂದರ್ಭ. ಕೇವಲ ನಾನೊಬ್ಬನೇ ದಸರಾ ಉದ್ಘಾಟಿಸುತ್ತಿಲ್ಲ. ಸಮಸ್ತ ಕನ್ನಡಿಗರು ನನ್ನೊಂದಿಗಿದ್ದಾರೆ. ಸಂತೋಷದಿಂದ ನಾಡಹಬ್ಬಕ್ಕೆ ಚಾಲನೆ ನೀಡುತ್ತೇನೆ.

ಡಾ.ವಿಜಯಕುಮಾರ್: *ನಿಮ್ಮ ಬದುಕಿನ ಪುಟದಲ್ಲಿ ಮೈಸೂರಿಗೆ ಯಾವ ಸ್ಥಾನವಿದೆ?*

ಪ್ರೊ.ಹಂಪನಾ: ಮೈಸೂರು ನನ್ನ ವ್ಯಾಸಂಗಕ್ಕೆ ನೀರುಣಿಸಿದ ತಾಯಿ ಮನೆ. ಮಹಾರಾಜ ಕಾಲೇಜು, ಗ್ರಂಥಾಲಯ ಗುರುಮನೆ, ಕುವೆಂಪು, ತೀನಂಶ್ರೀ, ಡಿ.ಎಲ್.ಎನ್, ದೇಜಗೌ, ಪರಮೇಶ್ವರ ಭಟ್ಟ, ಕೆ. ವೆಂಕಟ ರಾಮಪ್ಪ, ಎಲ್.ಬಸವರಾಜು, ಪ್ರಭುಶಂಕರ, ಸುಜನಾ-ಇಂಥ ಗುರುವೃಂದ. ಮಹಾರಾಜಾ ಕಾಲೇಜು ಹಾಸ್ಟೆಲಿನ ಮಿತ್ರವೃಂದ- ಈ ಬಗೆಯ ನೆನಪಿನ ದೋಣಿಯಲ್ಲಿ ಕುಳಿತು ಮಾಡಿದ ತಾರಣ್ಯದ ಪ್ರಯಾಣದ ಮಧುರಸ್ಮೃತಿ ಅವಿಸ್ಮರಣೀಯ.

ಡಾ.ವಿಜಯಕುಮಾರ್: *ತಮ್ಮ ಬಾಲ್ಯ ಜೀವನ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳುವಿರಾ?*

ಪ್ರೊ.ಹಂಪನಾ: ಬಾಲ್ಯದಲ್ಲಿ ಎತ್ತಿನಗಾಡಿಗಳಲ್ಲಿ ಹಳ್ಳಿಯಿಂದ ನಗರಗಳಿಗೆ ನಿಧಾನವಾಗಿ ಹೊಲ ಗದ್ದೆಗಳ ನಡುವಣ ಕಿರುದಾರಿಗಳಲ್ಲಿ ಪ್ರಯಾಣ ಮಾಡುತ್ತಿದ್ದ ಆ ಮೋದ ಮರೆಯಲಾರೆ. ಹಳ್ಳಿಯ ಜಾತ್ರೆ, ತೇರು ಉತ್ಸವ, ಸಂತೆ, ಕಲ್ಯಾಣಸೇವೆ, ಬತ್ತಾಸು- ನೆನಪಾಗುತ್ತದೆ. ಮರಕೋತಿ, ಬುಗುರಿ, ಗೋಲಿ, ಚಿನ್ನಿದಾಂಡು ಆಟ ಈಗಲೂ ಕಣ್ಣಿಗೆ ಕಟ್ಟಿದಂತಿದೆ ಅನಂತರ ಮಂಡ್ಯದಲ್ಲಿ. ಚಿಕ್ಕಪ್ಪ, ಚಿಕ್ಕಮ್ಮ ಮಗನಂತೆ ಸಾಕಿ ಓದಿಸಿದರು.

ಡಾ.ವಿಜಯಕುಮಾರ್: *ತಮ್ಮ ಅಪೂರ್ವ ಕುಟುಂಬ ಜೀವನ ಹೇಗಿತ್ತು?*

ಪ್ರೊ.ಹಂಪನಾ: ಕುಟುಂಬ ಜೀವನದ ನೆಮ್ಮದಿಯನ್ನು ಈಗ ಮೂವರು ಮೊಮ್ಮಕ್ಕಳು ಹೆಚ್ಚಿಸಿದ್ದಾರೆ. ನಾನು ಏಳು ತಿಂಗಳಿಗೇ ಹುಟ್ಟಿದವನು. ಹಾಗಾಗಿ ಆತುರ ಹೆಚ್ಚು! ಚಡಪಡಿಸುತ್ತ ನಾಡಿನ ಉದ್ದ ಅಗಲಗಳಲ್ಲಿ ಮತ್ತೆ ಮತ್ತೆ ಅಡ್ಡಾಡಿದ್ದೇನೆ. ಎಷ್ಟು ಓಡಾಡಿದರೂ ಇನ್ನೂ ನೋಡುವುದು, ತಿಳಿಯುವುದು ಇದ್ದೇ ಇದೆ. ಕನ್ನಡಿಗರೊಂದಿಗೆ ಕಲೆಯುತ್ತ, ಜನರಿಂದ ಕಲಿಯುತ್ತ, ಜನರೊಡನೆ ನಲಿಯುತ್ತಾ ಕಾಲಕಳೆದದ್ದು ಈಗ ಆರೋಗ್ಯವಾಗಿರಲು ಸಾಧ್ಯವಾಗಿದೆ.

ಡಾ.ವಿಜಯಕುಮಾರ್: *ನಾಡೋಜ ಕಮಲ ಹಂಪನಾ ಅವರ ವಿಚಾರದಲ್ಲಿ ನಿಮ್ಮ ಮನದಿಂಗಿತವೇನು?*

ಪ್ರೊ.ಹಂಪನಾ: ನಿಮ್ಮೆಲ್ಲರ ಪ್ರೀತಿಯಿಂದ ತುಂಬಿದ ಒಡಲು, ಅದೇ ಕಮಲ ಮಡಿಲು.

ಡಾ.ವಿಜಯಕುಮಾರ್: *ಐತಿಹಾಸಿಕ ವಿಶ್ವ ಕನ್ನಡ ಸಮ್ಮೇಳನ ಹೇಗಿತ್ತು?*

ಪ್ರೊ. ಹಂಪನಾ: ಕರ್ನಾಟಕದ ನೆರೆಹೊರೆಯಲ್ಲಿ ವಿಶ್ವಮಟ್ಟದ ಸಮ್ಮೇಳನಗಳು ನಡೆದು ಹೊಸ ಉತ್ಸಾಹ ಮೂಡಿತ್ತು. ವಿಶ್ವ ತಮಿಳು ಸಮ್ಮೇಳನ ಅದ್ಧೂರಿಯಿಂದ ನಡೆದಿತ್ತು. ವಿಶ್ವ ತೆಲುಗು ಸಮ್ಮೇಳನವೂ ವಿಜೃಂಭಿಸಿತ್ತು. ಕನ್ನಡದ ವೈಭವ ಬಿಂಬಿಸುವ ವಿಶ್ವವೇದಿಕೆ ಸಿದ್ಧಪಡಿಸಲು 1978ರಲ್ಲಿ ಆಗಿನ ಮುಖ್ಯಮಂತ್ರಿ ದೇವರಾಜು ಅರಸುಗೆ ಮನವರಿಕೆ ಮಾಡಿದ್ದೆವು. ಆದರೆ ಅವರ ಸರ್ಕಾರ ದಿಢೀರನೆ ಪತನವಾಯಿತು. ಗುಂಡೂರಾವ್ ಮುಖ್ಯಮಂತ್ರಿ ಆದ ಮೇಲೆ ಅವರಿಗೆ ಇದರ ವ್ಯಾಪ್ತಿಯನ್ನು ಮನಸ್ಸಿಗೆ ಮುಟ್ಟುವಂತೆ ವಿವರಿಸಿದಾಗ ಅವರು ಒಪ್ಪಿದರು. ತಿಪಟೂರಿನಲ್ಲಿ ನಡೆದ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಘೋಷಿಸಿದರು. ಅದರಂತೆ ಎಲ್ಲ ಪೂರ್ವಭಾವಿ ಸಿದ್ಧತೆಗಳು ನಡೆದವು. ಮೈಸೂರಿನಲ್ಲಿ ಕಲಾಮಂದಿರ ನಿರ್ಮಾಣಕ್ಕೆ ಬುನಾದಿಯೂ ಆಯಿತು. ಅರಮನೆಯ ಆವರಣದಲ್ಲಿಯೇ ಪ್ರಥಮ ವಿಶ್ವಕನ್ನಡ ಸಮ್ಮೇಳನಕ್ಕೆ ಏರ್ಪಾಟು ನಡೆದವು. ಆದರೆ ಕೆಲವೇ ತಿಂಗಳು ಉಳಿದಿರುವಾಗ ಅವರ ಸರ್ಕಾರ ಕುಸಿಯಿತು. ಹೆಗ್ಗಡೆ ಮುಖ್ಯಮಂತ್ರಿ ಆದರು. ಅವರು ಅದನ್ನು ಕೈಬಿಡದೆ ಮುಂದುವರೆಸಿ 1985ರ ಡಿಸೆಂಬರ್‌ನಲ್ಲಿ ಯಶಸ್ವಿಯಾಗಿ ನಡೆಸಿದರು. ಪ್ರಧಾನಿ ರಾಜೀವಗಾಂಧಿ ಮತ್ತು ರಾಷ್ಟ್ರಕವಿ ಕುವೆಂಪು ಮಾಡಿದ ಭಾಷಣಗಳು ಭಾರತದ ಎಲ್ಲಾ ಪತ್ರಿಕೆಗಳಲ್ಲಿ ಮುಖಪುಟದ ಪ್ರಾಮುಖ್ಯ ಪಡೆದು ಕನ್ನಡ ಡಿಂಡಿಮ ವಿಜೃಂಭಿಸಿತು.

ಡಾ.ವಿಜಯಕುಮಾರ್: *ಕನ್ನಡ ಸಂಶೋಧನೆ ಸ್ಥಗಿತಗೊಂಡಿದೆ ಎಂಬ ದೂರಿದೆಯಲ್ಲ?*

ಪ್ರೊ. ಹಂಪನಾ: ಸಂಶೋಧನೆ ಶ್ರಮ ಬಯಸುತ್ತದೆ. ಸಾಹಿತಿಗಳಲ್ಲಿ, ಯುವಕರಲ್ಲಿ ಕಡಿಮೆ ಜನ ಈ ಕಡೆಗೆ ಒಲವು ತೋರುತ್ತಾರೆ. ಸಂಖ್ಯೆಯ ವಿಚಾರ ಅಪ್ರಸ್ತುತ, ಸತ್ವಕ್ಕೆ ಪ್ರಾಧಾನ್ಯ. ಗಟ್ಟಿಕಾಳುಗಳು ಈಗಲೂ ಇವೆ. ಸಂಶೋಧನೆ ಸ್ಥಗಿತಗೊಂಡಿಲ್ಲ. ಸಂಶೋಧನೆ ಎಂದಾಗ ಕೇವಲ ಸಾಹಿತ್ಯ ಸಂಶೋಧನೆಯನ್ನು ಗಮನಿಸುವಂತಿಲ್ಲ. ಜ್ಞಾನ-ವಿಜ್ಞಾನಗಳ ಎಲ್ಲ ಕ್ಷೇತ್ರದಲ್ಲೂ ದೊಡ್ಡ ಸಂಶೋಧನೆ ನಡೆದಿರುವುದನ್ನು ಗಮನಿಸಬೇಕು. ವಿಜ್ಞಾನಿಗಳು ಮಾಡಿರುವ ಇತ್ತೀಚಿನ ಶೋಧಗಳು 'ಅದ್ಭುತ' ಸಂಶೋಧನೆ ಸ್ಥಗಿತಗೊಂಡಿಲ್ಲ, ಚಲನಶೀಲವಾಗಿದೆ.

ಡಾ.ವಿಜಯಕುಮಾರ್: *ಪುಸ್ತಕ ಸಂಸ್ಕೃತಿಯನ್ನು ಕುರಿತಂತೆ ನಿಮ್ಮ ಅಭಿಪ್ರಾಯ?*

ಪ್ರೊ. ಹಂಪನಾ: ಪುಸ್ತಕ ಸಂಸ್ಕೃತಿ ಜೀವಂತವಾಗಿರುವುದಷ್ಟೇ ಅಲ್ಲದೆ ಸಂಪದ್ಭರಿತವಾಗಿದೆ. ಮುದ್ರಣ ವಿನ್ಯಾಸ, ವಸ್ತು ವೈವಿಧ್ಯ, ವಿಷಯ ಪ್ರತಿಪಾದನೆ ಎಲ್ಲದರಲ್ಲೂ ಮಹತ್ತರ ಬದಲಾವಣೆಯಿದೆ. ಡಿ.ಟಿ.ಪಿ. ಬಂದ ಮೇಲೆ ಪುಸ್ತಕೋದ್ಯಮದ ಸ್ವರೂಪವೇ ಕಳೆಯೇರಿದೆ. ಪುಸ್ತಕ ಓದುವವರ ಸಂಖ್ಯೆಯೂ ಇಳಿಮುಖವಾಗಿಲ್ಲ.

ಡಾ.ವಿಜಯಕುಮಾರ್: *ಮಾಧ್ಯಮಗಳಿಂದಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ತೊಂದರೆ ಆಗಿದೆ ಅನ್ನಿಸುತ್ತದೆಯೇ?*

ಪ್ರೊ. ಹಂಪನಾ: ಇಲ್ಲ. ಮಾಧ್ಯಮಗಳು ಕನ್ನಡ ಭಾಷಾ ಸಾಹಿತ್ಯಕ್ಕೆ ಪೋಷಕವಾಗಿ ಇವೆಯೇ ಹೊರತು ಪ್ರತಿಕೂಲವಾಗಿಲ್ಲ. ಕನ್ನಡ ಸಾಹಿತ್ಯ ಹೊಸ ಬದಲಾವಣೆಗಳಿಗೆ ಎಲ್ಲ ಪತ್ರಿಕೆಗಳೂ ಕನ್ನಡದ ಮುಖವಾಣಿಯಾಗಿವೆ.

ಡಾ.ವಿಜಯಕುಮಾರ್: *ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಾಗಬೇಕಾದ ಮಾರ್ಗ ಯಾವುದು?*

ಪ್ರೊ. ಹಂಪನಾ: ಜಾಗತೀಕರಣ ಭೂಗೋಳದ ಉದ್ದಗಲಗಳನ್ನು ತಬ್ಬಿಕೊಂಡು ಮಹತ್ತರ ಬದಲಾವಣೆಗೆ ಕಾರಣವಾಗಿದೆ. ಮುಖ್ಯವಾಗಿ ಇದು ಪ್ರಾದೇಶಿಕ ಭಾಷಾಸಾಹಿತ್ಯದ ಸಂವರ್ಧನೆಗೆ ದೊಡ್ಡ ಸವಾಲಾಗಿದೆ. ಜನಭಾಷೆಗಳನ್ನು ಆಪೋಷನ ತೆಗೆದುಕೊಳ್ಳಲು ಬಿಡದೆ ಜಾಗತೀಕರಣವನ್ನು ಜೀರ್ಣಿಸಿಕೊಂಡು ಕನ್ನಡ ಮೃತ್ಯುಂಜಯವಾಗುತ್ತದೆ. ಕನ್ನಡಕ್ಕಿರುವ ಅಭಿಜಾತತೆ ಮತ್ತು ಅಸ್ಮಿತೆ ಅಸಾಮಾನ್ಯವಾದುದು.

ಡಾ.ವಿಜಯಕುಮಾರ್: *ಶಾಸ್ತ್ರೀಯ ಭಾಷೆಯಾಗಿ ಕನ್ನಡಕ್ಕೆ ಇನ್ನು ಸರಿಯಾದ ಮಾನ್ಯತೆ ಸಿಗದಿರುವುದಕ್ಕೆ ಕಾರಣವೇನಿರಬಹುದು?*

ಪ್ರೊ. ಹಂಪನಾ: 'ಶಾಸ್ತ್ರೀಯ ಭಾಷೆ' ಯೆಂಬ ಪರಿಕಲ್ಪನೆಯ ನಿರ್ವಚನ ಗೊಂದಲಮಯವಾಗಿದೆ. ಇದು ತಮಿಳು ರಾಜಕಾರಣದ ಬಳುವಳಿ. ಓಟಿನ ರಾಜಕಾರಣದಲ್ಲಿ ಉಂಡವನು ಜಾಣ ಎಂಬಂತೆ ಆಗಿದೆ. ತಮಿಳಿಗಿರುವ ಎಲ್ಲ ಅರ್ಹತೆಗಳು ಕನ್ನಡಕ್ಕಿವೆ. ಸಮಾನ ಮನ್ನಣೆ ತಪ್ಪಿರುವುದಕ್ಕೆ ಮುಖ್ಯ ಕಾರಣ ಪ್ರಬಲ ರಾಜಕೀಯ ಶಕ್ತಿಯ ಕೊರತೆ. ತುಂಬ ತಮಾಷೆಯೆಂದರೆ ಕೇಂದ್ರ ಸರ್ಕಾರದ ಸಚಿವರೊಬ್ಬರು ಕಳೆದ ಒಂದು ವರ್ಷದಿಂದ 'ಕನ್ನಡ ಭಾಷೆ ಶಾಸ್ತ್ರೀಯ ಭಾಷೆ ಆಗಬೇಕು' ಎಂದು ಭಾಷಣ ಮಾಡುತ್ತಾ ಕರ್ನಾಟಕದಲ್ಲಿಯೇ ಸುತ್ತುತ್ತಿದ್ದಾರೆ! ಇಂಥ ನಾಮಕಾವಸ್ಥೆ ಸಚಿವರಿಂದ ಕನ್ನಡ ಕೇಂದ್ರದಲ್ಲಿ ವಿಜೃಂಭಿಸುವುದಾದರೂ ಹೇಗೆ.

ಡಾ.ವಿಜಯಕುಮಾರ್: *ಇತ್ತೀಚೆಗೆ ಆಂಗ್ಲ ಭಾಷೆಯಲ್ಲೂ ತಮ್ಮ ಬರಹಗಳೂ ಹೆಚ್ಚು ಹೆಚ್ಚು ಹೊರಬರುತ್ತಿವೆ?*

ಪ್ರೊ.ಹಂಪನಾ: ಕನ್ನಡ ಸಾಹಿತ್ಯದ, ಕರ್ನಾಟಕದ ವಾಸ್ತು-ಶಿಲ್ಪ-ಪ್ರಕೃತಿ ಸಂಪತ್ತಿನ ಶೃಂಗದರ್ಶನ ಕನ್ನಡೇತರ ಲೋಕಕ್ಕೆ ಪರಿಚಯಿಸುವ ಕೆಲಸ ಇನ್ನೂ ವ್ಯಾಪಕವಾಗಿ ನಡೆಯಬೇಕಾಗಿದೆ. ಬೇರೆ ಭಾಷೆಗಳಿಂದ ಕನ್ನಡಕ್ಕೆ ವಿಪುಲವಾಗಿ ಬಂದಿದೆ. ಆದರೆ ಕನ್ನಡದಿಂದ ಅನ್ಯಭಾಷೆಗಳಿಗೆ ಹೋಗಿರುವುದು ಕಡಿಮೆ. ಈ ಕೊರತೆ ತಪ್ಪಬೇಕು. ಕನ್ನಡಕ್ಕೆ ಸಿಗಬೇಕಾದ ಮನ್ನಣೆ ದಕ್ಕದಿರಲು ನಮ್ಮ ಪರಂಪರೆಯ ಸತ್ವವನ್ನು ಕನ್ನಡೇತರ ಜಗತ್ತಿಗೆ ಪರಿಚಯಿಸದಿರುವುದೂ ಒಂದು ಕಾರಣ.

ಡಾ.ವಿಜಯಕುಮಾರ್: *ಸಾಹಿತಿಗೂ, ಸಮಾಜಕ್ಕೂ ಇರುವ ಬಾಂಧವ್ಯದ ಬಗೆಗೆ ಹೇಳುವಿರಾ?*

ಪ್ರೊ. ಹಂಪನಾ: ಸಾಹಿತಿ ಸಮಾಜದ ಘಟಕ. ಸಮಾಜ-ಸಾಹಿತಿ ಅವಿಭಾಜ್ಯ ಅಂಗಗಳು. ಸಾಹಿತಿಗೆ ತನ್ನ ಸಮಾಜದ ಅರಿವು ಮತ್ತು ಕಾಳಜಿ ಇರಬೇಕು. ಸಾಮಾಜಿಕ ಬದ್ಧತೆಯಿಂದ ಸಾಹಿತ್ಯ ಸಮಾಜಮುಖಿಯಾಗಿರುತ್ತದೆ. ಜನಪರವಾದ ಧೋರಣೆ ರೂಪಗೊಳ್ಳುತ್ತದೆ. ಕೇವಲ ಮುಗಿಲ ಮಲ್ಲಿಗೆ ಸಾಹಿತ್ಯ ನೆಲದ ಸೊಗಡನ್ನು ಮೂಡಿಸಲಾರದು. ಸಾಹಿತ್ಯ ಜನಜೀವನದ ಸಮಾಜದ ಪ್ರತಿಬಿಂಬವಾಗಿರುವಂತೆ ಗತಿಬಿಂಬವೂ ಆಗಿರಬೇಕು.


ಮಕ್ಕಳ ಚಿತ್ರಕಥೆ

'ತಾನಾಗಿಯೇ ಚಲಿಸುತ್ತಿದ್ದ ದೋಣಿ'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಬ್ಬ ಮನುಷ್ಯ ದೋಣಿಯಲ್ಲಿ ಹೋಗುತ್ತಿದ್ದ. ತಣ್ಣನೆಯ ನೀರು, ದಡದ ಎಲ್ಲೆಲ್ಲೂ ದಟ್ಟವಾದ ಮರ ಗಿಡಗಳು. ಪಕ್ಷಿಗಳ ಕಲರವ. ತಂಗಾಳಿ. ತನ್ನನ್ನೇ ಮರೆತು ಕರಗಿ ಕುಳಿತಿದ್ದ. ಅವನು ನೀರು ಹರಿಯುತ್ತಿದ್ದ ದಿಕ್ಕಿಗೇ ದೋಣಿ ಚಲಾಯಿಸುತ್ತಿದ್ದ.



ಆತ ದೋಣಿ ಹೋಗುತ್ತಿದ್ದ ದಾರಿಯನ್ನು ಸರಿಯಾಗಿ ಗಮನಿಸಲಿಲ್ಲ. ಎದುರು ಬರುತ್ತಿರುವುದನ್ನೂ ಸರಿಯಾಗಿ ಆಗ ನೋಡಲಿಲ್ಲ ದೋಣಿ ತನಗೆ ಅನುಕೂಲವಾಗುವಂತೆ ಹೋಗುವುದು ಅವನಿಗೆ ಇಷ್ಟವಾಗಿತ್ತು.



ಆತನಿಗೆ ಚಿಂತೆಗೆ ಅವಕಾಶವೇ ಇಲ್ಲ. ಅಂದರೆ, ತನ್ನ ಯಾವ ಶ್ರಮವೂ ಇಲ್ಲದೆ ತಾನಾಗಿಯೇ ಹೋಗುವ ದೋಣಿಯಲ್ಲಿ ಪ್ರಯಾಣ ಮಾಡುವುದು ಅವನಿಗೆ ಸಂತೋಷವೆನಿಸಿತ್ತು.



ಸ್ವಲ್ಪ ಹೊತ್ತು ಕಳೆಯಿತು. ಗಾಳಿ ಸ್ವಲ್ಪ ಜೋರಾಗಿ ಬೀಸಲು, ದೋಣಿಯೂ ವೇಗವಾಗಿ ಹೋಗಲಾರಂಭಿಸಿತ್ತು. ಈ ಸೋಮಾರಿಗೆ ಹಾಯಾದ ಸಂತೋಷದ ನಡುವೆ ಇದಾವುದೂ ಗೊತ್ತಾಗಲಿಲ್ಲ. "ಭಲೇ..ಭಲೇ...ನನ್ನ ಪ್ರಯಾಣ ಇನ್ನೂ ವೇಗ ಪಡೆದುಕೊಂಡಿತು" ಎಂದು ಖುಷಿಪಟ್ಟ.




ಇನ್ನೂ ಸ್ವಲ್ಪ ಹೊತ್ತಾದ ಮೇಲೆ ದೂರದಲ್ಲಿ ಭರ್ರನೆ ಸುತ್ತುವ ಸಹಜ ಶಬ್ದ ಕೇಳಿಸಲಾರಂಭಿಸಿತು. ಆದರೆ ಆತ ತನ್ನ ಪ್ರಯಾಣದ ಜೊತೆಗೆ ಸಂಗೀತ ಬೇರೆ ಪ್ರಾರಂಭವಾಯಿತು ಎಂದು ಸಂತೋಷಗೊಂಡ.



ದೋಣಿ ಅಲುಗಾಡುತ್ತಾ ಅಕ್ಕಪಕ್ಕ ಉರುಳುವಂತೆ ಆಗತೊಡಗಿದಾಗ, ಮುಂದೆ ಜಾರಿ ಅಲ್ಲೇ ಇದ್ದ ಜಲಪಾತದಲ್ಲಿ ಸಿಕ್ಕಿಬಿದ್ದ. ಈ ಪರಮ ಸುಖಿಯನ್ನು ವಿಮಾನ ವೇಗದಲ್ಲಿ ಪಾತಾಳಕ್ಕೆ ಎಳೆದುಕೊಂಡು ಹೋದಾಗ ಅವನ ಕಥೆ ಮುಗಿದೋಯ್ತು.

ನೀತಿ :- ಎಲ್ಲಾ ಸಮಯವೂ ನಮಗೆ ಹಿತಕರವಾಗಿರುತ್ತದೆ ಎಂದು ಭಾವಿಸುವುದು ತಪ್ಪು. ಸುರಕ್ಷಿತವೆಂದು ಮೈಮರೆಯಬಾರದು. ಯಾವ ಸಮಯದಲ್ಲೂ ಪರಿಸ್ಥಿತಿ ಬದಲಾಗಬಹುದು. ಅದಕ್ಕೆ ಸದಾ ಎಚ್ಚರಿಕೆಯಿಂದ ಇದ್ದರೆ ಅಪಾಯದಿಂದ ಪಾರಾಗಬಹುದು.



ವಾರಭವಿಷ್ಯ

29.9.2024 ರಿಂದ 5.10.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕನ್ಯಾ, ಚಂದ್ರ-ಸಿಂಹ, ಕನ್ಯಾ ತುಲಾ, ಕುಜ-ಮಿಥುನ, ಬುಧ-ಕನ್ಯಾ, ಗುರು-ವೃಷಭ, ಶುಕ್ರ-ತುಲಾ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನಿಮ್ಮ ಕುಟುಂಬದ ಸದಸ್ಯರ ಬಗ್ಗೆ ಕಾಳಜಿ ವಹಿಸುವಿರಿ. ನೂತನ ವಸ್ತ್ರಾಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ ಗುರುಜನರ ಭೇಟಿಯಿಂದ ನಿಮ್ಮ ವ್ಯಕ್ತಿತ್ವ ವಿಕಸನಗೊಳ್ಳುವುದು. ವಿವಾಹ ಸಂಬಂಧ ಮಾತುಕತೆಗಳು ಫಲಪ್ರದವಾಗುವ ಸಂಭವ. ಹೊಸ ವ್ಯಾಪಾರ ಆರಂಭಕ್ಕೆ ಬ್ಯಾಂಕ್ ಸಹಾಯ ದೊರಕುವುದು. ದುಷ್ಟಜನರ ಸಂಪರ್ಕದಿಂದ ನಿಮ್ಮ ಗೌರವಕ್ಕೆ ಧಕ್ಕೆ.

ಶ್ರೀ ವಿನಾಯಕ ಸೇವೆ. ಶುಭ ಸಂಖ್ಯೆ-5



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದ ಆರಂಭಕ್ಕೆ ಬಾಳ ಸಂಗಾತಿಯೊಂದಿಗೆ ಸಣ್ಣಪುಟ್ಟ ವಿವಾದಗಳು ಉಂಟಾಗುತ್ತವೆ. ಮಕ್ಕಳ ಶಿಕ್ಷಣ ವಿಷಯಗಳಲ್ಲಿ ಪ್ರಗತಿ ಕಂಡು ಬರುತ್ತದೆ. ಮಹಿಳೆಯರಿಗೆ ಸಂಬಂಧಿಸಿದ ವಿವಾದಗಳಿಂದ ದೂರವಿರುವುದು ಉತ್ತಮ. ಕೋಪವನ್ನು ತ್ಯಜಿಸಿದರೆ ಮನಃಶಾಂತಿಗೆ ಭಂಗವಾಗದು. ನಿರುದ್ಯೋಗಿಗಳು ಸ್ವಲ್ಪ ಕಷ್ಟದಿಂದ ಹೊಸ ಅವಕಾಶಗಳನ್ನು ಪಡೆದುಕೊಳ್ಳುತ್ತಾರೆ. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗಾವಣೆ.

ಶ್ರೀದೇವಿ ಖಡ್ಗಮಾಲಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸ್ಥಿರಾಸ್ತಿಗೆ ಸಂಬಂಧಿಸಿದ ಒಪ್ಪಂದಗಳು ಧನಾತ್ಮಕವಾಗಿರುತ್ತದೆ. ಚಂದ್ರ ಬಲದ ಪರಿಣಾಮ ಕೈಗೆತ್ತಿಕೊಂಡ ಕೆಲಸಗಳು ಪೂರ್ಣಗೊಳ್ಳುತ್ತವೆ. ಬಂಧು ವರ್ಗದವರಿಂದ ಶುಭ ಕಾರ್ಯಕ್ಕೆ ಆಹ್ವಾನಗಳು ಬರುತ್ತವೆ. ಆದಾಯಗಳು ಹೆಚ್ಚಾದಂತೆ ಖರ್ಚು-ವೆಚ್ಚಗಳು ಮಿತಿ ಮೀರುವುದು. ಕುಟುಂಬ ಸದಸ್ಯರೊಂದಿಗೆ ಸೈರಣೆಯಿಂದ ವರ್ತಿಸಿ. ಸರ್ಕಾರಿ ಅಧಿಕಾರಿಗಳೊಂದಿಗೆ ಘರ್ಷಣೆ ಉಂಟಾಗುವುದು.

ಶ್ರೀ ವಿಷ್ಣು ಅರ್ಚನೆ. ಶುಭ ಸಂಖ್ಯೆ-2



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದೂ ಹಾಲು ಅನ್ನ ಎಂಬಂತೆ ಎಲ್ಲವೂ ಸಾಗಿದೆ. ಬುದ್ಧಿವಂತಿಕೆಯಿಂದ ಕೌಟುಂಬಿಕ ಹಾಗೂ ಸಾಮಾಜಿಕ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳಿ. ಐಹಿಕ ಸುಖಭೋಗಗಳು ನಿಮ್ಮನ್ನು ಅರಸಿ ಬರುವುದು. ಕೊಟ್ಟ ಮಾತಿನಂತೆ ನಡೆದು ಮೆಚ್ಚುಗೆಗೆ ಪಾತ್ರರಾಗುವಿರಿ. ವಾರಾಂತ್ಯಕ್ಕೆ ಲಘು ಟ್ರಿಪ್‌ಗಳು ಉಂಟಾಗುವುದು.

ಶ್ರೀ ಚಾಮುಂಡೇಶ್ವರಿ ಉಪಾಸನೆ. ಶುಭ ಸಂಖ್ಯೆ-8



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ ಬಿಡು ಎಂಬ ದಾಸವಾಣಿಯಂತೆ ಮುಂದೆ ಸಾಗಿರಿ. ಬಯಸಿದ್ದೆಲ್ಲಾ ದೊರೆಯುತ್ತಲಿದೆ. ಇದು ಚಂದ್ರ ಸಂಚಾರದ ಶುಭ ಪರಿಣಾಮ. ರಾಹು-ಕೇತುಗಳ ಅವಕೃಪೆಯೂ ಇದೆ. ನಂಬಲರ್ಹರಲ್ಲದವರೊಡನೆ ಹಣಕಾಸಿನ ವ್ಯವಹಾರ ಮಾಡಬೇಡಿ. ಅಷ್ಟಮ ರಾಹುವಿನ ಕಾರಣ ದುರ್ಘಟನೆ ವೇಳೆ, ಸ್ಥಳ ಹೇಳದೆ ಘಟಿಸಿಬಿಡುತ್ತದೆ.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ-9



ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ಅಧಿಕಾರ ವರ್ಗದವರು ಮುಂಬಡ್ತಿಯ ನಿರೀಕ್ಷೆಯಲ್ಲಿದ್ದರೆ ನಿರಾಶೆ ಆಗುವುದು. ಅವಿವಾಹಿತರ ಕಂಕಣ ಬಲಕ್ಕಾಗಿ ತೀವ್ರ ರೀತಿಯಲ್ಲಿ ಪ್ರಯತ್ನಿಸುವರು. ಗುಪ್ತ ವ್ಯವಹಾರ ಹಾಗೂ ಗುಪ್ತ ವಿದ್ಯೆಯಿಂದ ಲಾಭ ಗಳಿಸುವ ಸಾಧ್ಯತೆ ಇದೆ. ಧರ್ಮ ಕಾರ್ಯಗಳಿಗೆ ಸಹಾಯ ಮಾಡುವುದರಿಂದ ಜನಾನುರಾಗಕ್ಕೆ ಭಾಜನರಾಗುತ್ತೀರ. ದೂರ ಪ್ರಯಾಣ ಸಮಯದಲ್ಲಿ ಕಳ್ಳಕಾಕರಿಂದ ಎಚ್ಚರವಿರಬೇಕು.

ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ-3



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ಚಂದ್ರಗ್ರಹದ ನಡೆ ಶುಭವಿದೆ. ಹಣ ಸಂಪಾದನೆ ನಿರೀಕ್ಷೆಯಂತೆ ಆಗುವುದು. ಪ್ರೀತಿ-ಪ್ರಣಯ ವಿಷಯಗಳು ನಿಮ್ಮ ಆಶಯದಂತೆ ಫಲ ನೀಡಲು ನಿಮ್ಮ ರಾಶ್ಯಾಧಿಪತಿ ಶುಕ್ರ ಪೂರಕ ವರದಾನವನ್ನು ಮಾಡುತ್ತಲಿರುವರು. ಪಂಚಮ ಶನಿಕಾರಣ ಸ್ವಜನರಲ್ಲಿ ವೈಮನಸ್ಸ, ಪಾಲುದಾರಿಕೆ ವ್ಯವಹಾರದಲ್ಲಿ ಭಿನ್ನಾಭಿಪ್ರಾಯ ಕಾರಣ ನಷ್ಟ, ನ್ಯಾಯಾಲಯ ವಿಚಾರಗಳು ಮಂದಗತಿ.


ಶ್ರೀ ಶಕ್ತಿದೇವತೆ ಆರಾಧನೆ. ಶುಭ ಸಂಖ್ಯೆ-7



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದಾರಂಭಕ್ಕೆ ಯಶೋವೃದ್ಧಿ, ಧನ-ಧಾನ್ಯ ಲಾಭ, ಸ್ತ್ರೀಯರು ನಿಮ್ಮ ಸಹಾಯಕ್ಕೆ ಒದಗುವುದರೊಂದಿಗೆ ಹರ್ಷಚಿತ್ತರಾಗಿರುವಿರಿ. ಖರ್ಚುಗಳು ಕೈ ಮೀರಿದರೂ ಹಣದ ಕೊರತೆ ಆಗದು. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಬಾಳ ಸಂಗಾತಿ ದೊರೆಯುವ ಸಾಧ್ಯತೆ. ಹಣಕಾಸು ಸಂಸ್ಥೆ ಅಥವಾ ಬ್ಯಾಂಕ್ ಸಾಲಕ್ಕೆ ಪ್ರಯತ್ನಪಟ್ಟರೆ ಯಶಸ್ಸಿದೆ. ಪಿತ್ತ ಜನಿತ ಕಾಯಿಲೆಗೆ ಗುರಿಯಾಗುವಿರಿ.

ಶ್ರೀ ನೃಸಿಂಹ ದರ್ಶನ. ಶುಭ ಸಂಖ್ಯೆ-1



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಹೆಚ್ಚಿನ ಗ್ರಹಗಳು ನಿಮ್ಮ ಅನುಕೂಲಕ್ಕಿಲ್ಲ. ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರದೆ, ಮುಂದಾಗಬೇಕಾದ ಸಾಧನೆಯತ್ತ ನೋಡಿ ಧೈರ್ಯವಂತರಿಗೆ ದೈವ ಸಹಾಯವೂ ದೊರೆಯುತ್ತದೆ. ಶತ್ರುಗಳ ಚಕ್ರವ್ಯೂಹವನ್ನು ಭೇದಿಸಲು ಚಕ್ರಧರನನ್ನು ಆಶ್ರಯಿಸಿ ಗೃಹ ಕಲಹಗಳನ್ನು ಮನೆಯಲ್ಲೇ ಶಮನ ಮಾಡಿಕೊಳ್ಳಿ. ಶತ್ರುಗಳ ಪ್ರಬಲರೆನಿಸುವರು. ಅನಾರೋಗ ಕಾಡುವುದು.

ಶ್ರೀ ಮೃತ್ಯುಂಜಯ ಮಂತ್ರ ಜಪ. ಶುಭ ಸಂಖ್ಯೆ-4



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಗೆ ಕೆಲವು ಅಸೂಯಾಪರರು ನಿಮ್ಮ ಮಹತ್ವದ ಕೆಲಸವನ್ನು ಕೆಡಿಸುವರು. ಗುರುಬಲವು ಇರುವ ಕಾರಣ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸುಸಂದರ್ಭಗಳು ಕೂಡಿ ಬರಲಿದೆ. ವಾರ ಮಧ್ಯೆ ಶುಭ ಸಮಾಚಾರ ಬಂದು ಹಣ ಸಂಪಾದನೆಯೂ ಆಗುವುದು. ಮನೆಯಲ್ಲಿ ಹಬ್ಬದ ಪೂರ್ವಭಾವಿ ಸಿದ್ಧತೆಗಳು ನಡೆಯಲಿದೆ. ಸರ್ಕಾರಿ ನೌಕರರು ದುರಾಶೆಯ ದಾಸರಾಗಿ ತೊಂದರೆಗೆ ಒಳಗಾಗುವರು.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಜನ್ಮರಾಶಿ ಇರುವ ಪ್ರಯುಕ್ತ ಅನಿಷ್ಟಕ್ಕೆಲ್ಲ ಶನೇಶ್ವರನೇ ಕಾರಣ ಎಂದು ದೂರುತ್ತಾ ಕೂರಬೇಡಿ. ಸ್ವಜನ ವಿರಹದಿಂದ ಮನಸ್ಸಿಗೆ ಬೇಸರ ಉಂಟಾಗಲಿದೆ. ಕೃಷಿ ಸಲಕರಣೆ, ಟ್ರ್ಯಾಕ್ಟರ್ ಏಜೆನ್ಸಿಯವರಿಗೆ ಉತ್ತಮ ವ್ಯಾಪಾರ ಹಾಗೂ ಲಾಭವೂ ದೊರೆಯುವುದು. ಮನೆ ಕೆಲಸದವರ ಬಗ್ಗೆ ಜಾಗೃತರಾಗಿರಿ. ಕದ್ದ ಮಾಲು ವಾಪಸ್ಸು ಬರುವುದು ಕಷ್ಟ, ತಾಳ್ಮೆಯಿಂದ ಡ್ರೈವಿಂಗ್ ಮಾಡಿ. ನೀವೂ, ಮನೆಯವರೂ ಕ್ಷೇಮವಾಗಿರಲಿ.

ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-6



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಮಾತು ಕೆಡುವುದರಿಂದ ಕಾಯ ಕೆಡುವುದು. ಹೇರಳ ಧನಲಾಭವಾದರೂ ನಿಮ್ಮ ರಾಶಿಯಲ್ಲೇ ಸ್ಥಿತನಿರುವ ರಾಹುವಿನಿಂದ ಸದ್ವಿನಿಯೋಗವಾಗದು. ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ. ಸಹೋದರ-ಸಹೋದರಿಯರು ನಿಮ್ಮ ಹಾದಿಗೆ ಅಡ್ಡ ಬರುವರು. ವಾರ ಮಧ್ಯಾನಂತರ ಆರ್ಥಿಕ ಬಿಕ್ಕಟ್ಟುಗಳಿಂದ ಕೊಂಚ ಮಟ್ಟಿನ ಬಿಡುಗಡೆ ದೊರೆಯುವುದು. ವಾರದ ಕಡೆಗೆ ಪುಣ್ಯ ಕ್ಷೇತ್ರಕ್ಕೆ ಭೇಟಿ.

ಶ್ರೀ ಶಿರಡಿ ಸಾಯಿ ಉಪಾಸನೆ. ಶುಭ ಸಂಖ್ಯೆ-7

ಮಾನವೀಯತೆಯ ಪ್ರತೀಕ ದಿ.ಕೆ.ಆರ್.ಲಕ್ಕೇಗೌಡರು

ಸಂಸದ ಡಾ.ಸಿ.ಎನ್.ಮಂಜುನಾಥ್ ಬಣ್ಣನೆ



ಕಾರ್ಯಕ್ರಮವನ್ನು ಸಂಸದ ಡಾ.ಸಿ.ಎನ್.ಮಂಜುನಾಥ್ ಉದ್ಘಾಟಿಸಿದರು. ಎಂಎಲ್‌ಸಿ ವಿಶ್ವನಾಥ್, ಮಾಜಿ ಸಚಿವ ಸಾ.ರಾ.ಮಹೇಶ್ ಇನ್ನಿತರರಿದ್ದರು.

ಕೆ.ಆರ್.ನಗರ, ಸೆ.28– ನಾನು ರಾಜಕಾರಣಕ್ಕೆ ಬಂದಿರುವುದು ರಾಜಕೀಯ ಮಾಡುವುದಕ್ಕಲ್ಲ. ಬದಲಿಗೆ ಜನಸೇವೆ ಹಾಗೂ ಸಮಾಜಸೇವೆ ಮಾಡಬೇಕೆಂಬ ಉದ್ದೇಶದಿಂದ ಬಂದಿದ್ದೇನೆ ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಸಮುದಾಯ ಭವನದಲ್ಲಿ ನಿವೃತ್ತ ಉಪನ್ಯಾಸಕ ದಿ.ಕೆ.ಆರ್.ಲಕ್ಕೇಗೌಡರ ಮೊದಲ ವರ್ಷದ ಪುಣ್ಯಸ್ಮರಣೆ ಅಂಗವಾಗಿ ನಡೆದ ಅವರ ಜೀವನ ಚರಿತ್ರೆ(ಆತ್ಮಕಥೆ) ವನಸುಮ 2ನೇ ಆವೃತ್ತಿ ಬಿಡುಗಡೆ ಮತ್ತು ತಮಗೆ ಆಯೋಜಿಸಿದ್ದ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಸದನಾಗಿದ್ದರೂ ನನ್ನ ಮೊದಲ ಆದ್ಯತೆ ವೈದ್ಯ ವೃತ್ತಿಗೆ ನೀಡಲಿದ್ದು, ವಾರದಲ್ಲಿ ಎರಡು ದಿನ ಉಚಿತ ಸೇವೆ ಮಾಡುವ ಮೂಲಕ ದೇಶ ಮತ್ತು ಸಮಾಜದಲ್ಲಿ ಬದಲಾವಣೆ ತರಲು ಕೆಲಸ ಮಾಡಲು ನಾನು ಬದ್ಧನಾಗಿದ್ದು, ಅದು ಅಸಾಧ್ಯ ಎನಿಸಿದರೂ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ದೇಶದಲ್ಲಿ ಜನಸಂಖ್ಯೆ ಹೆಚ್ಚಾಗುವುದು ಪ್ರಮುಖವಲ್ಲ. ಅದರೊಂದಿಗೆ ಮನುಷ್ಯತ್ವ ಇರುವವರು ಹೆಚ್ಚಿಗೆ ಇರಬೇಕಿದ್ದು, ಕೆಲವರು ಜೀವಂತವಾಗಿದ್ದರೂ ಸತ್ತಂತೆ ಇರುತ್ತಾರೆ. ಆದರೆ ಕೆ.ಆರ್.ಲಕ್ಕೇಗೌಡರು ಸಾವನ್ನಪ್ಪಿದರೂ ನಮ್ಮ ನಡುವೆ ಜೀವಂತವಾಗಿದ್ದಾರೆ ಎಂದರು.

ಆದರ್ಶ ಶಿಕ್ಷಕರಾಗಿ, ಪುರಸಭೆಯ ಸದಸ್ಯರಾಗಿ, ಸಮಾಜಮುಖಿಯಾಗಿದ್ದ ಲಕ್ಕೇಗೌಡರು ಎಲ್ಲಾ ಕ್ಷೇತ್ರಗಳಲ್ಲಿಯೂ ಯಶಸ್ವಿಯಾಗಿದ್ದು ಇಂತಹವರು ಸಾಧಕರು ಮತ್ತು ಸಮಾಜ ಸೇವಕರಿಗೆ ಮಾದರಿ ಎಂದರು.

ಬೇರೆಯವರಿಗೆ ಸಹಾಯ ಮಾಡಿ ಸಂಕಷ್ಟದಲ್ಲಿರುವವರಿಗೆ ಹೆಗಲು ಕೊಡುವುದು ನಿಜವಾದ ಮನುಷ್ಯತ್ವ, ಅಂತಹ ಮಾನವೀಯತೆ ಬೆಳೆಸಿಕೊಂಡಿದ್ದ ಕೆ.ಆರ್.ಲಕ್ಕೇಗೌಡರು ನಮ್ಮ ನಡುವೆ ಇದ್ದ ಆದರ್ಶ ಪುರುಷ ಎಂದು ಪ್ರಶಂಸಿದರು.

ಕೆ.ಆರ್.ಲಕ್ಕೇಗೌಡರ ಸಂಸ್ಕಾರ ಅವರ ಕುಟುಂಬದವರಿಗೂ ಬಂದಿದ್ದು, ಇದು ಅನುಕರಣೀಯವಾಗಿದ್ದು ಅವರು ಸಮಾಜದ ವೈದ್ಯರಾಗಿದ್ದರಲ್ಲದೆ ನೊಂದವರ ದನಿಯಾಗಿ ಬದುಕಿಗೆ ಆಸರೆಯಾಗಿದ್ದರೆಂದು ಬಣ್ಣಿಸಿದರು.

ಸಮಾಜಮುಖಿ ಚಿಂತನೆ ಮತ್ತು ಪರೋಪಕಾರಿ ವ್ಯಕ್ತಿತ್ವ ಬೆಳೆಸಿಕೊಂಡವರು ಶಾಶ್ವತವಾಗಿ ಜೀವಿಸಲಿದ್ದು, ಅಂತಹವರ ಸಾಲಿಗೆ ಸೇರಿರುವ ಕೆ.ಆರ್.ಲಕ್ಕೇಗೌಡರು ಮಾನವೀಯತೆಯ ಪ್ರತೀಕ ಎಂದು ಪ್ರಶಂಸಿಸಿದರು.

ಈ ವೇಳೆ ಕೆ.ಆರ್.ಲಕ್ಕೇಗೌಡರ ಯಶೋಗಾಥೆಯ ವನಸುಮ ಪುಸ್ತಕದ ಸಂಚಿಕೆ ಬಿಡುಗಡೆ ಮಾಡಿದ ಸಂಸದ ಡಾ.ಸಿ.ಎನ್.ಮಂಜುನಾಥ್ ಅವರಿಗೆ ನಾಗರಿಕ ಸನ್ಮಾನ ಮಾಡಲಾಯಿತು.

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ತಮ್ಮ ಸೇವಾವಧಿಯಲ್ಲಿ ವಿದ್ಯಾರ್ಥಿಗಳಿಗೆ ಅಕ್ಷರ ಕಲಿಸಿ ಸಾವಿರಾರು ಮಂದಿ ಬದುಕು ಬದಲಿಸಿದ ನಿವೃತ್ತ ಉಪನ್ಯಾಸಕ ದಿ.ಕೆ.ಆರ್.ಲಕ್ಕೇಗೌಡರು ನಮ್ಮೂರಿನ ಹೆಮ್ಮೆಯ ಪುತ್ರ ಹೇಳಿದರು.

ಇಂತಹ ಸಮಾಜಮುಖಿ ವ್ಯಕ್ತಿಯ ಕುಂಟುಬದ ಹಿಂದೆ ನಿಲ್ಲಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದ್ದು ತಮ್ಮ ಕುಟುಂಬವನ್ನೇ ಜನ ಸೇವೆಗೆ ಅರ್ಪಿಸಿದ ಅವರು ಅಜರಾಮರ ಎಂದರು.

ಸ್ವಂತ ಮತ್ತು ಸ್ವಾರ್ಥಕ್ಕೆ ಬದುಕಿ ಸಮಾಜದ ಬಗ್ಗೆ ಚಿಂತಿಸದ ಜನರಿರುವ ಇಂದಿನ ದಿನಗಳಲ್ಲಿ ಕುಟುಂಬವನ್ನೇ ಜನಸೇವೆಗೆ ಮುಡುಪಿಟ್ಟಿರುವುದು ಸಾಧನೆಯೆ ಸರಿ ಎಂದು ಕೊಂಡಾಡಿದರು.

ಸಂಸದರಾಗಿರುವ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ವೈದ್ಯ ವೃತ್ತಿಯ ಘನತೆ ಎತ್ತಿಹಿಡಿದ ಮಹಾಪುರುಷನಾಗಿದ್ದು ಅವರ ನಡೆ ಮತ್ತು ನುಡಿ ಹಾಗೂ ಮಾನವೀಯತೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಎಂಎಲ್‌ಸಿ ವಿವೇಕಾನಂದ, ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ, ನವನಗರ ಅರ್ಬನ್ ಅಧ್ಯಕ್ಷ ಕೆ.ಎನ್.ಬಸಂತ್, ಮುಡಾ ಮಾಜಿ ಅಧ್ಯಕ್ಷ ವಿಜಯ್, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ಜಿಪಂ ಮಾಜಿ ಸದಸ್ಯರಾದ ಅಮಿತ್ ವಿ.ದೇವರಹಟ್ಟಿ, ಸಾ.ರಾ.ನಂದೀಶ್, ಎಂ.ಟಿ.ಕುಮಾರ್, ಪುರಸಭೆ ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಉಮೇಶ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ಜಿಲ್ಲಾ ಗ್ರಾಮಾಂತರ ಬಿಜೆಪಿ ಮಾಜಿ ಉಪಾಧ್ಯಕ್ಷ ವೆಂಕಟೇಶ್, ಸಾಲಿಗ್ರಾಮ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಹುಣಸೂರು ಜೆಡಿಎಸ್ ಅಧ್ಯಕ್ಷ ದೇವರಾಜ ಒಡೆಯರ್, ಶ್ರೀರಂಗಪಟ್ಟಣ ತಾಲೂಕು ಜೆಡಿಎಸ್ ಅಧ್ಯಕ್ಷ ಸಂಜಯ್, ಎಪಿಎಂಸಿ ಮಾಜಿ ನಿರ್ದೇಶಕ ಕುಚೇಲ, ದಲಿತ ಮುಖಂಡ ನಾಗರಾಜ್, ಸೂರಿ, ಶಿಕ್ಷಕರ ಸಂಘದ ಅಧ್ಯಕ್ಷ ರಾಜಶೇಖರ, ಸಾಮರಸ್ಯ ಶಿಕ್ಷಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ.ಪುರುಷೋತ್ತಮ್, ಕೆ.ಆರ್.ಲಕ್ಕೇಗೌಡರ ಪತ್ನಿ ಜಯಲಕ್ಷ್ಮಮ್ಮ, ಪುತ್ರರಾದ ಕೆ.ಎಲ್.ರಮೇಶ್, ಕೆ.ಎಲ್.ಜಗದೀಶ್, ಕೆ.ಎಲ್.ಹೇಮಂತ್, ಲೇಖಕ ದೀಪು, ರಾಜ್ಯ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಕಾರ್ಯದರ್ಶಿ ಹೆಚ್.ಡಿ.ಪ್ರಭಾಕರ ಜೈನ್, ಮುಖಂಡರಾದ ಪುಟ್ಟರಾಜು, ಎಸ್.ಪಿ.ತಮ್ಮಯ್ಯ ಮತ್ತಿತರರಿದ್ದರು.

ಉಚಿತ ಆರೋಗ್ಯ, ಕಡ್ಡಾಯ ಶಿಕ್ಷಣ ನೀಡುವಂತೆ ಆಗ್ರಹ



ಕಾರ್ಯಕ್ರಮದಲ್ಲಿ ಸಂಸದ ಸಿ.ಎನ್.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು

ಕೆ.ಆರ್.ನಗರ: ಚುನಾಯಿತ ಜನ ಪ್ರತಿನಿಧಿಗಳು ತಮ್ಮನ್ನು ತಾವು ರಕ್ಷಿಸಿಕೊಂಡು ನಾನು ಮಾಡಿದ್ದೆಲ್ಲಾ ಸರಿ ಎಂಬ ಸ್ಥಿತಿಗೆ ತಲುಪಿರುವುದು ಅತ್ಯಂತ ವಿಷಾದನೀಯ ಎಂದು ಎಂಎಲ್‌ಸಿ ಹೆಚ್.ವಿಶ್ವನಾಥ್ ಆರೋಪಿಸಿದರು.

ಇಂದಿನ ರಾಜಕೀಯ ನಾಯಕರು ಸಂದಿಗ್ದ ಸ್ಥಿತಿಯಲ್ಲಿದ್ದು, ಜನರು ಸಹ ಪರಿಸ್ಥಿತಿಯ ಚಕ್ರವ್ಯೂಹದಲ್ಲಿ ಸಿಲುಕಿದ್ದು ಭವಿಷ್ಯದಲ್ಲಿ ಪ್ರಶ್ನೆ ಮಾಡದಿದ್ದರೆ ಗಂಡಾಂತರ ಕಾದಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಆಳುವ ಸರ್ಕಾರಗಳು ಪ್ರತಿಯೊಂದನ್ನು ರಾಜಕೀಯ ದೃಷ್ಟಿಯಿಂದ ನೋಡುತ್ತಿದ್ದು, ಅನುಪಯುಕ್ತ ಯೋಜನೆಗಳನ್ನು ಜಾರಿಗೆ ತರುತ್ತಿದ್ದು ಅವುಗಳಿಂದ ಯಾವುದೇ ಪ್ರಯೋಜನವಿಲ್ಲ. ಅದಕ್ಕಿಂತ ಪ್ರತಿ ಪ್ರಜೆಗೂ ಉಚಿತ ಆರೋಗ್ಯ ಮತ್ತು ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡಬೇಕೆಂದು ಮುಖ್ಯಮಂತ್ರಿಗಳನ್ನು ಆಗ್ರಹಿಸಿದರು.

ದಯವೇ ಧರ್ಮದ ಮೂಲವಯ್ಯ ಎಂಬ ವಚನದ ಸಾರದಂತೆ ಬದುಕಿ ಬಾಳಿದ ಕೆ.ಆರ್.ಲಕ್ಕೇಗೌಡರು ಮಾನವ ಕುಲಕ್ಕೆ ಮಾದರಿಯಾಗಿದ್ದು ತಮ್ಮಂತೆ ಮಕ್ಕಳಿಗೂ ಸಮಾಜಮುಖಿ ಚಿಂತನೆ ಮತ್ತು ಸೇವಾ ಮನೋಭಾವನೆ ಕಲಿಸಿ ನಾಡಿನ ಆಸ್ತಿಯನ್ನಾಗಿ ಮಾಡಿದ್ದು ಇದು ಎಲ್ಲರೂ ಹೆಮ್ಮೆಪಡುವ ವಿಚಾರ ಎಂದರು.

ನಿವೃತ್ತಿ ಸೌಲಭ್ಯಕ್ಕೆ ಆಗ್ರಹಿಸಿ ಅ.1ರಂದು ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ಹೆಚ್.ಡಿ.ಮಾದಪ್ಪ ಮಾತನಾಡಿದರು.

ತಿ.ನರಸೀಪುರ, ಸೆ.28– ನಿವೃತ್ತ ನೌಕರರಿಗೆ 7ನೇ ವೇತನ ಆಯೋಗದ ಲೆಕ್ಕಾಚಾರದ ಅನುಸಾರ ನಿವೃತ್ತಿ ಆರ್ಥಿಕ ಸೌಲಭ್ಯ ನೀಡಬೇಕೆಂದು ಆಗ್ರಹಿಸಿ ಅ.1ರ ವಿಶ್ವ ನಾಗರಿಕರ ದಿನಾಚರಣೆಯಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ನಿವೃತ್ತ ನೌಕರರ ವೇದಿಕೆ ರಾಜ್ಯ ಸಂಚಾಲಕ ಹೆಚ್.ಡಿ.ಮಾದಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಆ.24 ರಂದು 7ನೇ ವೇತನ ಆಯೋಗ ಜಾರಿಗೆ ತಂದಿದೆ. ಇದಕ್ಕಾಗಿ ನಾವು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇವೆ. ಆದರೆ ಸರ್ಕಾರದ ಆದೇಶ 1–07–2022 ರಿಂದ 31–07–2024 ರ ನಡುವೆ ನಿವೃತ್ತರಾದ ಎಲ್ಲ ಇಲಾಖೆಯ ನೌಕರರು, ಅಧಿಕಾರಿಗಳಿಗೆ ಅನ್ವಯವಾಗಿಲ್ಲ. ಈ ಅವಧಿಯಲ್ಲಿ 17,623 ಮಂದಿ ನಿವೃತ್ತರಾಗಿದ್ದು ಅವರಿಗೆ 7ನೇ ವೇತನ ಬಿಡುಗಡೆಯಾಗಿಲ್ಲ. ನಮಗೆ 6ನೇ ವೇತನಕ್ಕೆ ಸಂಬಂಧಿಸಿದಂತೆ ಮಾತ್ರವೇ ಬರಬಹುದಾದ ಸೌಲಭ್ಯ ಕೊಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಸಂಚಾಲಕ ಮರಿಸ್ವಾಮಿ, ಜಿಲ್ಲಾ ಸಂಚಾಲಕ ರಾಸಯ್ಯ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕರಾದ ಎಸ್.ಸಿ.ರಾಜೇಂದ್ರಪ್ಪ, ಎಸ್.ವಿ.ಕುಂಬಾರ್, ನಾಗಯ್ಯ, ಮಂಜುನಾಥ್ ಶ್ರೀಕಂಠಮೂರ್ತಿ, ರಾಜಮ್ಮ, ಸಣ್ಣಮಾದಪ್ಪ ಹಾಜರಿದ್ದರು.

ಸಿಎಂ ರಾಜೀನಾಮೆ ನೀಡದಿದ್ದರೇ ನಾವು ಬಿಡುವುದಿಲ್ಲ

ಕೇಂದ್ರ ಮಾಜಿ ಸಚಿವ ಭಗವಂತ ಖೂಬಾ



ಹುಣಸೂರಿನಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಹುಣಸೂರು, ಸೆ.28– ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡದಿದ್ದರೇ ನಾವು ಬಿಡುವುದಿಲ್ಲ ಎಂದು ಕೇಂದ್ರ ಮಾಜಿ ಸಚಿವ ಭಗವಂತ ಖೂಬಾ ತಿಳಿಸಿದರು.

ನಗರದ ಕಲ್ಪತರು ವೃತ್ತದಲ್ಲಿ ಬಿಜೆಪಿ ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಕರ್ನಾಟಕದವರೇ ಆಗಿದ್ದು, ಅವರೂ ಭ್ರಷ್ಟಾಚಾರದಲ್ಲಿ ಸಿಲುಕಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮುಡಾ ಹಗರಣದಲ್ಲಿ ಸಿಲುಕಿದ್ದು, ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಭಾರೀ ಭ್ರಷ್ಟಾಚಾರ ನಡೆಯುತ್ತಿದೆ. ಹೀಗಾಗಿ ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಸಿಎಂ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಇದೀಗ ಮೈಸೂರಿನ ಲೋಕಾಯುಕ್ತ ಕಚೇರಿಯಲ್ಲಿ ಎಫ್‌ಐಆರ್ ದಾಖಲಾಗಿದೆ ಹೀಗಾಗಿ ಅವರು ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ನಿಸ್ಪಕ್ಷಪಾತ ತನಿಖೆಗೆ ಒಳಪಡಬೇಕು ಎಂದು ಒತ್ತಾಯಿಸಿದರು.

2013ರಲ್ಲಿ ಸಿದ್ದರಾಮಯ್ಯ ವಿಪಕ್ಷ ನಾಯಕರಾಗಿದ್ದ ವೇಳೆ ರಾಜ್ಯದ ಸಂಪತ್ತು ಲೂಟಿ ಮಾಡಿದವರು ಅಧಿಕಾರದಲ್ಲಿ ಇರಬಾರದು. ಭಷ್ಟಾಚಾರ ಮಾಡಿದವರು ಜೈಲಿಗೆ ಹೋಗಬೇಕು ಎಂದು ಬೆಂಗಳೂರಿನಿಂದ ಬಳ್ಳಾರಿವರೆಗೆ ಪಾದಯಾತ್ರೆ ಮಾಡಿದರು. ಇದೀಗ ತಾವೇ ಭ್ರಷ್ಟಾಚಾರದಲ್ಲಿ ಸಿಲುಕಿದ್ದು, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ನಾಗರಾಜ್ ಮಲ್ಲಾಡಿ, ನಗರಸಭೆ ಸದಸ್ಯರಾದ ಗಣೇಶ್ ಕುಮಾರಸ್ವಾಮಿ, ಮುಖಂಡರಾದ ವಾಸುರಾಜ್, ಮಂಗಳಾ, ನಾರಾಯಣ್, ಸುಜಿತ್, ರಮೇಶ್ ಹಾಜರಿದ್ದರು.


ಸಂಘದ ಬೆಳವಣಿಗೆಗೆ ಷೇರುದಾರರು ಶ್ರಮಿಸಿ

ಸರಗೂರು, ಸೆ.28– ಸಹಕಾರ ಸಂಘದ ಬೆಳವಣಿಗೆಗೆ ಷೇರುದಾರರು ಶ್ರಮಿಸಬೇಕು ಎಂದು ಬಿ.ಮಟಕೆರೆ ವಿವಿಧೋದ್ದೇಶ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಎನ್.ಅಣ್ಣಯ್ಯಸ್ವಾಮಿ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸಾಲ ಪಡೆದವರು ಸಕಾಲಕ್ಕೆ ಮರು ಪಾವತಿಸಬೇಕು. ಇದರಿಂದ ಸಹಕಾರ ಸಂಘದ ಅಭಿವೃದ್ಧಿಗೆ ಸಹಾಯಕವಾಗಲಿದೆ. ಅಲ್ಲದೇ ಹೊಸ ಷೇರುದಾರರಿಗೆ ಸಾಲ ನೀಡಲು ಅನುಕೂಲವಾಗಲಿದೆ ಎಂದರು.

ಸಿಇಓ ಪಿ.ಜಯಕುಮಾರ್ 2023–24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರದ ವರದಿ ಮಂಡಿಸಿ ಮಾತನಾಡಿ ಸಹಕಾರ ಸಂಘದಲ್ಲಿ 733 ಸದಸ್ಯರಿದ್ದು, ರೈತರಿಗೆ ಸಂಘದಿಂದ 8.82 ಕೋಟಿ ಸಾಲ ವಿತರಿಸಲಾಗಿದೆ. ಸಂಘವು ಪ್ರಸಕ್ತ ಸಾಲಿನಲ್ಲಿ 11.15 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಸಂಘವು ಮುಂದಿನ ಸಾಲಿನಲ್ಲಿ ಮತ್ತಷ್ಟು ಲಾಭ ಗಳಿಸಲು ಪ್ರಯತ್ನಿಸಲಾಗುವುದು ಎಂದರು.

ಸರಗೂರು ತಾಲೂಕು ರೈತ ಉತ್ಪಾದಕರ ಸಂಸ್ಥೆ ಅಧ್ಯಕ್ಷ ಎಂ.ಕೆ.ಹರಿದಾಸ್ ಮಾತನಾಡಿದರು. ಸಂಘದ ಉಪಾಧ್ಯಕ್ಷ ಎಂ.ಸಿ.ಬೀರೇಗೌಡ, ನಿರ್ದೇಶಕರಾದ ಕೆ.ಎ.ರಾಜಪ್ಪ ಗುಣಪಾಲ್, ಎಂ.ಬಿ.ಅನುದ, ಅಜಿತ್ ಕುಮಾರ್, ಎಂ.ಎಸ್.ಮಲ್ಲಿಕಾರ್ಜುನ, ಹೆಚ್.ಡಿ. ಸ್ವಾಮಿ, ಕೃಷ್ಣನಾಯಕ, ಕೀರಮಾರ, ಶಾರದಮ್ಮ, ಬಿ.ಎಂ.ಚೆನ್ನಪ್ಪ ಎಂ.ಎಸ್. ದೇವರಾಜು, ಎಂ.ಕೆ ಹರಿದಾಸ್, ಹೊಸ ಕೋಟೆ ಚೆನ್ನಪ್ಪ, ಗುರುಸ್ವಾಮಿ, ಕಾಡ ಬೇಗೂರು ದಾಸಪ್ಪ ಕೆ.ಎಸ್. ವೀರಭದ್ರಪ್ಪ ಕೆಎಂ.ಬಸಪ್ಪ ಎಚ್.ಪಿ.ನಾಗೇಂದ್ರ ಸಂಘದ ಸದಸ್ಯರು ಹಾಜರಿದ್ದರು.



ಸಭೆಯನ್ನು ಅಧ್ಯಕ್ಷ ಅಣ್ಣಯ್ಯಸ್ವಾಮಿ ಉದ್ಘಾಟಿಸಿದರು.

ಹಿರೇಹಳ್ಳಿಯಲ್ಲಿ ಸೃಜನಶೀಲ ಕಾರ್ಯಕ್ರಮ



ಹೆಚ್.ಡಿ.ಕೋಟೆ, ಸೆ.28– ತಾಲೂಕಿನ ಹಿರೇಹಳ್ಳಿಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಸೃಜನಶೀಲ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆ ಜಿಲ್ಲಾ ಹಿರಿಯ ನಿರ್ದೇಶಕ ವಿಜಯ್ ಕುಮಾರ್ ನಾಗನಾಳ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ 80 ಮಂದಿ ಪೈಕಿ 38 ಮಹಿಳೆಯರಲ್ಲಿ ಪೌಷ್ಟಿಕತೆ ಕೊರತೆ ಕಂಡು ಬಂದ ಹಿನ್ನೆಲೆಯಲ್ಲಿ ಅವರಿಗೆ ಪೌಷ್ಟಿಕ ಆಹಾರದ ಬಗ್ಗೆ ಮಾಹಿತಿ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ಆರೋಗ್ಯಾಧಿಕಾರಿ ನಾಗೇಂದ್ರ ಅವರು ಪೌಷ್ಟಿಕ ಆಹಾರದ ಕುರಿತು ಮಾಹಿತಿ ನೀಡಿದರು. ಈ ವೇಳೆ ತಾಲೂಕು ಕ್ಷೇತ್ರ ಯೋಜನಾಧಿಕಾರಿ ವಿ.ಭಾಸ್ಕರ್, ಮುಖಂಡ ಗಂಗಾಧರ್, ಅಂಬೇಡ್ಕರ್ ಸಂಘದ ಅಧ್ಯಕ್ಷ ನಂಜುಂಡರಾಜ್, ಗ್ರಾಪಂ ಸದಸ್ಯ ನೇತ್ರಾವತಿ, ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ರಾಮು, ಲೋಲಾಕ್ಷಿ, ಸುಷ್ಮಾ, ನಾಗಮ್ಮ, ಯೋಜನೆ ಜ್ಞಾನವಿಕಾಸ ಸಮನ್ವಯಾಧಿಕಾರಿ ಮಲ್ಲಮ್ಮ, ಮೇಲ್ವಿಚಾರಕಿ ಶಾಂತ, ಸೇವಾ ಪ್ರತಿನಿಧಿ ಗೋಪಿಕಾ, ಸಿಬ್ಬಂದಿ ಕೆಂಡಗಣ್ಣ ಇನ್ನಿತರರಿದ್ದರು.

ಪಡಿತರ ವಿತರಣಾ ಉಪಕೇಂದ್ರ ಉದ್ಘಾಟನೆ



ಪಡಿತರ ಉಪಕೇಂದ್ರವನ್ನು ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ಉದ್ಘಾಟಿಸಿದರು.

ಬೆಟ್ಟದಪುರ, ಸೆ.28– ಇಲ್ಲಿಗೆ ಸಮೀಪದ ಚನ್ನಕೇಶವಪುರ ಗ್ರಾಮದಲ್ಲಿ ಪಡಿತರ ವಿತರಣೆ ಉಪಕೇಂದ್ರವನ್ನು ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ತಾಲೂಕಿನಲ್ಲಿ ಕಳೆದ ಒಂದು ವರ್ಷದಿಂದ ನಾಲ್ಕೈದು ಪಡಿತರ ವಿತರಣೆ ಉಪಕೇಂದ್ರಗಳನ್ನು ತೆರೆಯಲಾಗಿದ್ದು ಇದರಿಂದ ಸಾರ್ವಜನಿಕರಿಗೆ ಸಾಕಷ್ಟು ಅನುಕೂಲವಾಗಲಿದೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಪಡಿತರ ಕೇಂದ್ರಗಳನ್ನು ತೆರೆಯಬೇಕು ಎಂಬ ಹಲವು ಬೇಡಿಕೆಗಳು ಬಂದಿದ್ದು, ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುವುದು. ಸರ್ಕಾರ ದಿಂದ ಸಿಗುವ ಸವಲತ್ತುಗಳನ್ನು ಪ್ರತಿಯೊಬ್ಬರೂ ಸದುಪಯೋಗ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ದೊಡ್ಡಕಮರಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಪ್ಪ, ಉಪಾಧ್ಯಕ್ಷೆ ತಾರಾ, ಆಹಾರ ಇಲಾಖೆ ಶಿರಾಸ್ತೇದಾರ್ ಸಣ್ಣಸ್ವಾಮಿ, ನಿರೀಕ್ಷಕ ಎಂ.ಆರ್.ಮಂಜುನಾಥ್, ನಿರ್ದೇಶಕರಾದ ಕಲ್ಯಾಣಪ್ಪ, ಎಸ್.ರಾಮೇಗೌಡ, ಎಸ್.ಎಸ್ ಶಂಕರಪ್ಪ, ಎಸ್.ಎಸ್. ದೇವೇಂದ್ರ, ಸ್ವಾಮಿ, ಪರಮಶಿವಮೂರ್ತಿ, ಅಲ್ಲಾವುದ್ದೀನ್, ಸುಬ್ರಮಣಿಶೆಟ್ಟಿ, ಸಿಇಓ ಲೀಲಾವತಿ, ರೈತ ಸಂಘದ ಅಧ್ಯಕ್ಷ ಸುಂದ್ರೇಗೌಡ, ಮುಖಂಡರಾದ ಕೃಷ್ಣೇಗೌಡ, ತಮ್ಮೇಗೌಡ, ರಾಮೇಗೌಡ ಸೇರಿದಂತೆ ಸಿಬ್ಬಂದಿ ಇದ್ದರು.

ಕಳ್ಳಿಕೊಪ್ಪಲು ಅಂಗನವಾಡಿಯಲ್ಲಿ ಪೋಷಣ್ ಅಭಿಯಾನ

ಹಿರೀಕ್ಯಾತನಹಳ್ಳಿ, ಸೆ.28– ಹುಣಸೂರು ತಾಲೂಕಿನ ಗಾವಡಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಕಳ್ಳಿಕೊಪ್ಪಲು ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಪೋಷಣ್ ಅಭಿಯಾನ ನಡೆಯಿತು.

ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹನುಮಂತು ಮಾತನಾಡಿ, ಪೋಷಣ್ ಅಭಿಯಾನವು ಸರ್ಕಾರದ ಮುಖ್ಯ ಕಾರ್ಯಕ್ರಮವಾಗಿದ್ದು, ಗರ್ಭಿಣಿಯರು, ಬಾಣಂತಿಯರು, ಕಿಶೋರಿಯರು ಪೌಷ್ಟಿಕಾಂಶವುಳ್ಳ ಆಹಾರ ಸೇವನೆ ಮಾಡಬೇಕು. ಇವರು ಮುಖ್ಯವಾಗಿ ಹಸಿರು ತರಕಾರಿ, ಸೊಪ್ಪು, ಮೊಳಕೆ ಕಾಳುಗಳು, ಹಣ್ಣು, ಹಾಲು, ಮೊಟ್ಟೆ ಸೇವನೆ ಮಾಡುವುದರಿಂದ ರಕ್ತಹೀನತೆ ತಡೆಯಬಹುದು. ಅಲ್ಲದೇ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಹುಟ್ಟುವ ಮಗು ಆರೋಗ್ಯವಾಗಿ ಜನಿಸುತ್ತದೆ ಎಂದರು.



ಕಳ್ಳಿಕೊಪ್ಪಲು ಗ್ರಾಮದಲ್ಲಿ ಪೋಷಣ್ ಅಭಿಯಾನದ ಬಗ್ಗೆ ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಸಮುದಾಯ ಆರೋಗ್ಯಾಧಿಕಾರಿ ಜಯಲಕ್ಷ್ಮಿ, ಆರೋಗ್ಯ ಸುರಕ್ಷಾಧಿಕಾರಿಗಳಾದ ಇಂದಿರಾ, ಶಾಂತಮ್ಮ ಮಹಾದೇವಿ, ಶ್ರೀನಿವಾಸ್ ಹಾಗೂ ಅಂಗನವಾಡಿ, ಆಶಾ ಕಾರ್ಯಕರ್ತರು, ಬಾಣಂತಿಯರು, ಕಿಶೋರಿಯರು ಭಾಗವಹಿಸಿದ್ದರು.

ರಾಜ್ಯಪಾಲರ ಮೂಲಕ ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ

ಕೇಂದ್ರ ಸರ್ಕಾರದ ನಡೆ ಖಂಡಿಸಿ ಮೌನ ಪ್ರತಿಭಟನೆ

ತಿ.ನರಸೀಪುರ, ಸೆ.28– ರಾಜ್ಯಪಾಲರ ಮೂಲಕ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿಸಿ, ಹಿಂದುಳಿದ ಹಾಗೂ ಶೋಷಿತ ಸಮುದಾಯಗಳ ನಾಯಕತ್ವ ದಮನ ಮಾಡಲು ಕೇಂದ್ರ ಸರ್ಕಾರ ಷಡ್ಯಂತ್ರ ರೂಪಿಸಿದೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು, ಸಿದ್ದರಾಮಯ್ಯ ಅಭಿಮಾನಿಗಳು ಹಾಗೂ ಬೆಂಬಲಿಗರು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಶನಿವಾರ ಕಪ್ಪುಪಟ್ಟಿ ಧರಿಸಿ ಮೌನ ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಎದುರಿನ ಉದ್ಯಾನವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಧಿಕಾರ ದುರ್ಬಳಕೆ ಮಾಡಿಕೊಂಡು ನ್ಯಾಯಾಂಗ, ಕಾರ್ಯಾಂಗವನ್ನು ಕೈಗೊಂಬೆಯಂತೆ ಆಡಿಸುತ್ತಾ ಯಾವುದೇ ಭ್ರಷ್ಟಚಾರ ಮಾಡದ ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆಗೆ ಆದೇಶಿಸಿ, ಎಫ್‌ಐಆರ್ ದಾಖಲಿಸಿರುವ ಕ್ರಮಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಮೋದಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಸ್ವಾಯತ್ತ ಸಂಸ್ಥೆಗಳು ರಾಜಕೀಯ ದುರುದ್ದೇಶಗಳಿಗೆ ಬಳಕೆಯಾಗುತ್ತಿವೆ. ಬಿಜೆಪಿಯೇತರ ಸರ್ಕಾರವಿರುವ ರಾಜ್ಯಗಳಲ್ಲಿ ಆಡಳಿತವನ್ನು ಅಸ್ಥಿರಗೊಳಿಸಬೇಕು. ಬಿಜೆಪಿ ವಿರುದ್ಧ ಪ್ರಬಲವಾಗಿ ಬೆಳೆಯುವ ನಾಯಕರನ್ನು ಅಧಿಕಾರದಿಂದ ಪದಚ್ಯುತಿಗೊಳಿಸಬೇಕು ಎಂಬುದು ಬಿಜೆಪಿ ಅಜೆಂಡವಾಗಿದೆ. ಅದಕ್ಕಾಗಿ ಸಿಎಂ ಸಿದ್ದರಾಮಯ್ಯ ಅವರನ್ನು ಬಲಿಪಶು ಮಾಡುವ ದೊಡ್ಡ ಷಡ್ಯಂತ್ರ ವ್ಯವಸ್ಥಿತವಾಗಿ ನಡೆಯುತ್ತಿದೆ. ಬಿಜೆಪಿಗೆ ಸ್ಪಷ್ಟ ಜನಾದೇಶ ಸಿಗದ ಹಲವು ರಾಜ್ಯಗಳಲ್ಲಿ ಆಪರೇಷನ್ ಕಮಲದ ಮೂಲಕ ಸಾವಿರಾರು ಕೋಟಿ ಭ್ರಷ್ಟಾಚಾರದ ಹಣದ ಮೂಲಕ ಅಧಿಕಾರಕ್ಕೆ ಬಂದು, ಶೇ.40 ರಷ್ಟು ಕಮಿಷನ್ ದಂಧೆ ನಡೆಸಿದರೂ ಯಾವುದೇ ತನಿಖೆ ನಡೆಯಲಿಲ್ಲ. ಬಿಜೆಪಿಯಲ್ಲಿರುವ ಹಲವು ನಾಯಕರು ಭ್ರಷ್ಟಾಚಾರಿಗಳಾಗಿದ್ದರೂ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಪ್ರಯತ್ನವನ್ನೇ ಮಾಡಿಲ್ಲವೆಂದು ಆರೋಪಿಸಿದರು.



ಕೇಂದ್ರ ಸರ್ಕಾರದ ನಡೆ ಖಂಡಿಸಿ ದಸಂಸ ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿದರು.

ಜಿಪಂ ಮಾಜಿ ಸದಸ್ಯ ಕೆ.ಮಹದೇವ ಮಾತನಾಡಿ, ಅಸಮಾನತೆ ಮತ್ತು ಅಸ್ಥಿರತೆಯನ್ನೇ ರಾಜಕಾರಣ ಮಾಡಿಕೊಂಡಿರುವ ಬಿಜೆಪಿಗೆ ಸಾಮಾಜಿಕ ಸಮಾನತೆ ಮತ್ತು ಪ್ರಬುದ್ಧ ಭಾರತದ ಭ್ರಾತೃತ್ವವಾಗಲಿ ಬೇಕಿಲ್ಲ. ಹಾಗಾಗಿ ಸಂವಿಧಾನಕ್ಕೆ ವಿಧೇಯರಾಗಿ, ಸಮಾನತೆಯ ಸಮಾಜ ನಿರ್ಮಾಣ ಮಾಡಬೇಕು. ಅಧಿಕಾರ ಮತ್ತು ಸಂಪತ್ತು ಹಂಚಿಕೆಯಲ್ಲಿ ಎಲ್ಲಾ ವರ್ಗದ ಜನರಿಗೂ ಸಮಾನ ಹಕ್ಕನ್ನು ನೀಡಬೇಕೆಂಬ ಸಿಎಂ ಸಿದ್ದರಾಮಯ್ಯ ಅವರು ಬಿಜೆಪಿ ನಿಯಂತ್ರಿಸುವ ಮನುವಾದಿಗಳಿಗೆ ಸಮಸ್ಯೆಯಾಗಿರುವುದರಿಂದ ಮುಡಾ ನಿವೇಶನ ಹಂಚಿಕೆಯಲ್ಲಿ ಅಧಿಕಾರವನ್ನೇ ಬಳಸದಿರುವ ಮುಖ್ಯಮಂತ್ರಿಗಳನ್ನು ಆರೋಪಿಯನ್ನಾಗಿಸುವ ಕುತಂತ್ರ ಮಾಡಿದ್ದಾರೆ. ಇಂತಹ ವಾಮಮಾರ್ಗದ ರಾಜಕಾರಣ ಬಿಜೆಪಿ ನಾಯಕರಿಗೆ ಶೋಭೆ ತರುವುದಿಲ್ಲವೆಂದು ಕಿಡಿಕಾರಿದರು.

ದಸಂಸ ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್ ಸೇರಿದಂತೆ ತಾ.ಪಂ ಮಾಜಿ ಸದಸ್ಯ ಎಂ.ರಮೇಶ್, ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಹಾಗೂ ಮುಸ್ಲಿಂ ಮುಖಂಡ ಮಸ್ರೂರ್ ಅಹಮ್ಮದ್ ಮಾತನಾಡಿ ಕೇಂದ್ರ ಬಿಜೆಪಿ ಸರ್ಕಾರ ಹಾಗೂ ಜೆಡಿಎಸ್ ನಾಯಕರ ವಿರುದ್ಧ ಹರಿಹಾಯ್ದರು.

ಪ್ರತಿಭಟನೆಯಲ್ಲಿ ಪುರಸಭಾ ಮಾಜಿ ಅಧ್ಯಕ್ಷ ಎನ್.ಸೋಮಣ್ಣ, ಸದಸ್ಯ ತುಂಬಲ ಸಿ.ಪ್ರಕಾಶ್, ಮಾಜಿ ಸದಸ್ಯ ರಾಘವೇಂದ್ರ, ಗ್ರಾಪಂ ಅಧ್ಯಕ್ಷ ರಾಮನಂಜಯ್ಯ, ಸದಸ್ಯ ನಾಗರಾಜು, ಮಾಜಿ ಉಪ ಪ್ರಧಾನ ಡಿ.ಆರ್.ಮೂರ್ತಿ, ದಸಂಸ ಸಂಘಟನಾ ಸಂಚಾಲಕರಾದ ಕಿರಗಸೂರು ರಜನಿ, ಹಿರಿಯೂರು ಸೋಮಣ್ಣ, ಸಚಿವರ ಆಪ್ತ ಸಹಾಯಕ ಬಸವರಾಜು, ಮುಖಂಡರಾದ ಏಳುಮಲೈ ಮಂಜು, ಉಕ್ಕಲಗೆರೆ ರಾಜು, ಇಂಡವಾಳು ಹೊನ್ನಯ್ಯ, ಕೃಷ್ಣ, ಮಾವಿನಹಳ್ಳಿ ಲಿಂಗರಾಜು, ಯಡದೊರೆ ನಾರಾಯಣ್, ರಂಗಸಮುದ್ರ ನಂಜುಂಡ, ಹುನಗನಹಳ್ಳಿ ಮಹದೇವ್, ಬಿಲಿಗೆರೆಹುಂಡಿ ಸಿದ್ದರಾಜು, ಬಿ.ಎಂ.ಶಿವಕುಮಾರ್, ಮಹೇಶ, ಆಲಗೂಡು ನಾಗರಾಜ್ ಮೂರ್ತಿ, ತಲಕಾಡು ಆನಂದ್, ಯಡದೊರೆ ನಾರಾಯಣ್, ಮುತ್ತತ್ತಿ ನಾಗರಾಜ್, ಯಾಚೇನಹಳ್ಳಿ ಶಿವರಾಂ, ಉಮೇಶ್, ಮಾದಿಗಳ್ಳಿ ರಾಮು, ಬನ್ನಹಳ್ಳಿ ರಾಜೇಂದ್ರ ಹಾಗೂ ಇನ್ನಿತರರಿದ್ದರು.

ರೈಲಿಗೆ ಸಿಲುಕಿ ಅಪರಿಚಿತ ವ್ಯಕ್ತಿ ಸಾವು

ನಂಜನಗೂಡು, ಸೆ.28– ರೈಲಿಗೆ ಸಿಲುಕಿ ಅಪರಿಚಿತ ವ್ಯಕ್ತಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಕವಲಂದೆ ಗ್ರಾಮದ ಬಳಿ ಶನಿವಾರ ಬೆಳಗ್ಗೆ ನಡೆದಿದೆ.

ಶನಿವಾರ ಬೆಳಗ್ಗೆ ನಂಜನಗೂಡು ಕಡೆಯಿಂದ ಚಾಮರಾಜನಗರ ಕಡೆಗೆ ಚಲಿಸುತ್ತಿದ್ದ ರೈಲಿಗೆ ಸಿಲುಕಿ ಮೃತಪಟ್ಟಿರುವ ಈತ ಸುಮಾರು 55 ವರ್ಷ ವಯಸ್ಸಿನವನಾಗಿದ್ದು, 5.6 ಎತ್ತರ, ಕಪ್ಪು ಬಣ್ಣದ ಪ್ಯಾಂಟ್ ಹಾಗೂ ಆಕಾಶ ನೀಲಿ ಬಣ್ಣದ ಶರ್ಟ್ ಧರಿಸಿದ್ದಾರೆ. ವಾರಸುದಾರರಿದ್ದಲ್ಲಿ ನಂಜನಗೂಡು ರೈಲ್ವೆ ಪೊಲೀಸ್ ಠಾಣೆ ದೂ: 0821–2516579 ಸಂಪರ್ಕಿಸಬಹುದಾಗಿದೆ. ಈ ಸಂಬಂಧ ನಂಜನಗೂಡು ರೈಲ್ವೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ: ಸವಾರ ಸಾವು



ನಂಜನಗೂಡು, ಸೆ.28– ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಚಾಮರಾಜನಗರ ಬೈಪಾಸ್ ರಸ್ತೆಯ ಚಾಮುಂಡೇಶ್ವರಿ ದೇವಾಲಯದ ಬಳಿ ಜರುಗಿದೆ.

ತಾಲೂಕಿನ ಗೋಳೂರು ಗ್ರಾಮದ ನಿವಾಸಿ ನಂದೀಶ್ (24) ಸಾವನ್ನಪ್ಪಿದವರು. ನೆಸ್ಲೆ ಕಾರ್ಖಾನೆ ಉದ್ಯೋಗಿಯಾಗಿದ್ದ ಈತ ಶುಕ್ರವಾರ ರಾತ್ರಿ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ವೇಳೆ ನಗರದ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿದೆ. ಪರಿಣಾಮ ತೀವ್ರ ಗಾಯಗೊಂಡ ನಂದೀಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಸಂಚಾರಿ ಠಾಣೆ ಎಸ್‌ಐ ಸಿದ್ದರಾಜು ಪರಿಶೀಲನೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ನಂಜನಗೂಡು ಸಂಚಾರಿ ಠಾಣೆಯಲ್ಲಿ ದೂರು ದಾಖಲಾಗಿದೆ.

ಟಿ.ಸುರೇಶ್ ನಿಧನ



ಹುಣಸೂರು, ಸೆ.28– ತಾಲೂಕಿನ ದಾಸನಪುರ ನಿವಾಸಿ, ಜೆಡಿಎಸ್ ಮುಖಂಡ ಟಿ.ಸುರೇಶ್(57) ಶನಿವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರಿ ಆಸ್ಪತ್ರೆಗಳಲ್ಲೇ ಅತ್ಯಂತ ಅನುಭವಿ, ಜ್ಞಾನವಂತ ವೈದ್ಯರಿದ್ದಾರೆ!

●ಮುಖ್ಯಮಂತ್ರಿ ಸಿದ್ದರಾಮಯ್ಯರ ವಿಶ್ವಾಸಾರ್ಹ ನುಡಿ ●ಮೈಸೂರು ಮೆಡಿಕಲ್ ಕಾಲೇಜು ಶತಮಾನೋತ್ಸವ ಸಮಾರೋಪ ಸಮಾರಂಭ ಉದ್ಘಾಟನೆ ●ಇದುವರೆಗೆ ಮೈಸೂರು ಮೆಡಿಕಲ್ ಕಾಲೇಜು 9 ಸಾವಿರ ವೈದ್ಯರ ಕೊಡುಗೆ ನೀಡಿದೆ ●ಬಡವರಿಗೆ ಸರ್ಕಾರಿ ಆಸ್ಪತ್ರೆಗಳೇ ಅನಿವಾರ್ಯ; ಅವರಿಗೆ ಉತ್ತಮ ಚಿಕಿತ್ಸೆ ಸಿಗಬೇಕು



ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ವೈದ್ಯಕೀಯ ಕ್ಷೇತ್ರದ ಸಾಧಕರಾದ ಸಂಸ್ಥೆಯ ಹಳೇ ವಿದ್ಯಾರ್ಥಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಭಿನಂದಿಸಿದರು. ಸಚಿವರಾದ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಡಾ.ಡಿ.ತಿಮ್ಮಯ್ಯ, ಕೆ.ಹರೀಶ್‌ಗೌಡ, ಡಾ.ಶ್ರೀನಿವಾಸ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಸಂಸ್ಥೆಯ ಡೀನ್ ಡಾ.ಕೆ.ಆರ್.ದಾಕ್ಷಾಯಣಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಸೆ.28(ಎಸ್‌ಬಿಡಿ)– ಶತಮಾನ ಪೂರೈಸಿದ ಮೈಸೂರು ವೈದ್ಯಕೀಯ ಕಾಲೇಜು ಈವರೆಗೆ 9 ಸಾವಿರ ವೈದ್ಯರನ್ನು ಸೃಜಿಸಿದ ಹೆಗ್ಗಳಿಕೆ ಹೊಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಗ್ರಂಥಾಲಯ ಕಟ್ಟಡದಲ್ಲಿ ಶನಿವಾರ ನಡೆದ ಮೈಸೂರು ವೈದ್ಯಕೀಯ ಕಾಲೇಜಿನ ಶತಮಾನೋತ್ಸವ ಸಮಾರಂಭದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ, ಸಂಸ್ಥೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1924ರಲ್ಲಿ ಆರಂಭಿಸಿದ ಮೈಸೂರು ವೈದ್ಯಕೀಯ ಕಾಲೇಜು, 1930ರಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಸ್ಥಳಾಂತರವಾಯಿತು. ಇದು ದೇಶದ ಏಳನೆಯ ಹಾಗೂ ರಾಜ್ಯದ ಮೊದಲ ವೈದ್ಯಕೀಯ ಕಾಲೇಜು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಮಹತ್ವ ನೀಡಿದ್ದರು. ಮೈಸೂರು ರಾಜ್ಯದ ಅಭಿವೃದ್ಧಿಗೆ ಅವರು ನೀಡಿದ ಮಹತ್ವದ ಕೊಡುಗೆಗಳಲ್ಲಿ ವೈದ್ಯಕೀಯ ಕಾಲೇಜು ಕೂಡ ಒಂದಾಗಿದೆ. ಈ ಕಾಲೇಜು 9 ಸಾವಿರ ವೈದ್ಯ ಸಂಪತ್ತನ್ನು ಜಗತ್ತಿಗೆ ನೀಡಿದೆ. ಇಲ್ಲಿ ವೈದ್ಯಕೀಯ ಪದವಿ ಪೂರೈಸಿದವರು ದೇಶ–ವಿದೇಶಗಳಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ. ಇನ್ನೂ ಹೆಚ್ಚಿನ ಸಂಖ್ಯೆಯ ವೈದ್ಯರನ್ನು ಕೊಡುಗೆಯಾಗಿ ನೀಡಲಿ ಎಂದು ಆಶಿಸಿದರು.

ವೈದ್ಯರು ಸಮಾಜದ ಆಸ್ತಿ: ವೈದ್ಯರು ಸಮಾಜಕ್ಕೆ ಆಸ್ತಿ. ವೈದ್ಯರು ಹಾಗೂ ಆಸ್ಪತ್ರೆ ಹೆಚ್ಚಾದಂತೆ ಮನುಷ್ಯರ ಆಯಸ್ಸು ಕೂಡ ಹೆಚ್ಚಾಗಿದೆ. ವೈದ್ಯಕೀಯ ಕ್ಷೇತ್ರ ಮನುಕುಲದ ಆಯಸ್ಸು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ. ದೇಶದ ಜನಸಂಖ್ಯೆಯೂ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಸಂಖ್ಯೆಯ ವೈದ್ಯರು ಹಾಗೂ ಆಸ್ಪತ್ರೆಗಳು ಅವಶ್ಯವಾಗಿ ಬೇಕಿವೆ. ವೈದ್ಯರಿಗೆ ಸಮಾಜದಲ್ಲಿ ವಿಶಿಷ್ಟ ಗೌರವವಿದೆ. ವೈದ್ಯೋ ನಾರಾಯಣ ಹರಿ ಎಂದು ನಿಮ್ಮನ್ನು ದೇವರ ಸ್ಥಾನದಲ್ಲಿ ನೋಡುತ್ತಾರೆ. ಆ ಭಾವನೆಗೆ ಕಡಿಮೆಯಾಗದಂತೆ, ವೈದ್ಯ ವೃತ್ತಿಯ ಅರ್ಥ ಮತ್ತು ಮಹತ್ವ ಕಡಿಮೆಯಾಗದಂತೆ ಕಾಪಾಡಿಕೊಳ್ಳುವ ಜವಾಬ್ದಾರಿ ಎಲ್ಲಾ ವೈದ್ಯರ ಮೇಲಿದೆ ಎಂದು ಹೇಳಿದರು.

ಸರ್ಕಾರಿ ವೈದ್ಯರೇ ಹೆಚ್ಚು ಜ್ಞಾನಿಗಳು: ಪ್ರಸ್ತುತ ಖಾಸಗಿ ಆಸ್ಪತ್ರೆಗಳು ಹೆಚ್ಚಾಗಿವೆ. ಕೆಲ ಕಾರಣಗಳಿಂದ ಹೆಚ್ಚು ರೋಗಿಗಳು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ಆದರೆ ಬಡ ಹಾಗೂ ಮಧ್ಯಮ ವರ್ಗದ ಜನ ಈಗಲೂ ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸಿದ್ದಾರೆ. ಆದರೆ ಖಾಸಗಿ ಆಸ್ಪತ್ರೆಗಳ ವೈದ್ಯರಿಗಿಂತ ಸರ್ಕಾರಿ ಆಸ್ಪತ್ರೆ ವೈದ್ಯರು ಹೆಚ್ಚು ಅನುಭವಿಗಳು ಹಾಗೂ ಜ್ಞಾನವಂತರಾಗಿರುತ್ತಾರೆ ಎಂಬುದು ನನ್ನ ಭಾವನೆ. ಸರ್ಕಾರಿ ಆಸ್ಪತ್ರೆಗಳನ್ನೂ ಖಾಸಗಿ ಆಸ್ಪತ್ರೆಗಳಂತೆ ನಿರ್ವಹಣೆ ಮಾಡಿದಾಗ ಮಾತ್ರ ಬಡವರಿಗೂ ಉತ್ತಮ ಗುಣ ಮಟ್ಟದ ಚಿಕಿತ್ಸೆ ಕಲ್ಪಿಸಬಹುದು. ಈ ನಿಟ್ಟಿನಲ್ಲಿ ಸರ್ಕಾರ ಹಲವು ಕಾರ್ಯಕ್ರಮಗಳನ್ನು ನೀಡುತ್ತಿದೆ. ವೈದ್ಯರು ರೋಗಿಗಳನ್ನು ಪ್ರೀತಿ–ವಾತ್ಸಲ್ಯದಿಂದ ಕಂಡರೆ ಅದಕ್ಕಿಂತ ದೊಡ್ಡ ಉಪಚಾರ ಮತ್ತೊಂದಿಲ್ಲ. ವೈದ್ಯರನ್ನು ಮಾತನಾಡಿಸುವುದೇ ಕಷ್ಟ ಎನ್ನುವಂತಾಗಬಾರದು. ಸಾರ್ವಜನಿಕರನ್ನು ಅನ್ಯೂನ್ಯತೆಯಿಂದ ಪ್ರೀತಿಯಿಂದ ಮಾತನಾಡಿಸಬೇಕು ಎಂದು ಕಿವಿಮಾತು ಹೇಳಿದರು.

ನೆರವು ನೀಡಲು ಸಿದ್ಧ: ನಾನು ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಸಾಕಷ್ಟು ವೈದ್ಯಕೀಯ ಸೌಲಭ್ಯ ನೀಡಿದ್ದೇನೆ. ಬಡವರಿಗೆ ನೆರವಾಗಬೇಕು ಹಾಗೂ ರೋಗ ಬಂದ ಮೇಲೆ ನಿಯಂತ್ರಣ ಮಾಡುವುದಕ್ಕಿಂತ ರೋಗ ಬಾರದಂತೆ ಮುಂಜಾಗ್ರತಾ ಕ್ರಮ ವಹಿಸಬೇಕು ಎಂಬುದು ನಮ್ಮ ಉದ್ದೇಶ. ಆರೋಗ್ಯವಂತರಾಗಿದ್ದರೆ ಮಾತ್ರ ಸಮಾಜದ ಆಸ್ತಿ ಆಗಲು ಸಾಧ್ಯ. ಈ ನಿಟ್ಟಿನಲ್ಲಿ ದೊಡ್ಡಾಸ್ಪತ್ರೆ ಎಂದೇ ಪ್ರಸಿದ್ಧಿಯಾಗಿರುವ ಕೆ.ಆರ್.ಆಸ್ಪತ್ರೆಯನ್ನೂ ಖಾಸಗಿ ಆಸ್ಪತ್ರೆ ಮಾದರಿಯಲ್ಲಿ ನಿರ್ವಹಣೆ ಮಾಡಬೇಕು. ಇದಕ್ಕೆ ಅಗತ್ಯ ನೆರವು ನೀಡಲು ನಮ್ಮ ಸರ್ಕಾರ ಸಿದ್ಧವಿದೆ ಎಂದು ಭರವಸೆ ನೀಡಿದರು.

ಸಾಧಕ ವೈದ್ಯರಿಗೆ ಸನ್ಮಾನ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಮೊದಲ ಕುಲಸಚಿವರಾದ ಶ್ರೀಮತಿ ಡಾ.ಕಾಂತಾ ಎಸ್.ಜಾದವ್, ಡಾ.ಶಂಕರ್, ಡಾ.ಚಂದ್ರಶೇಖರ ಶೆಟ್ಟಿ, ಡಾ.ಸೂರ್ಯ ನಾರಾಯಣ, ಡಾ.ಸತ್ಯನಾರಾಯಣ ಸೇರಿದಂತೆ ವೈದ್ಯಕೀಯ ಕ್ಷೇತ್ರದ ಸಾಧಕರಾದ ಮೈಸೂರು ವೈದ್ಯಕೀಯ ಕಾಲೇಜಿನ ಅನೇಕ ಹಳೇ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಅಭಿನಂದಿತರ ಪರವಾಗಿ ಮಾತನಾಡಿದ ಡಾ.ಕಾಂತಾ ಅವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿಯಲ್ಲಿರುವ ವಿದ್ಯಾರ್ಥಿಗಳ ಹಣವನ್ನು ಸರ್ಕಾರ ಪಡೆಯಬಾರದು ಎಂದು ಮನವಿ ಮಾಡಿದರು. ಏನಾದರೂ ಸಾರ್ವಜನಿಕ ಸೇವಾ ಜವಾಬ್ದಾರಿ ನೀಡುವಂತೆ ಕೇಳಿದ ಶ್ರೀಮತಿ ಡಾ.ಕಾಂತಾ ಅವರ ಸೇವಾ ಮನೋಭಾವವನ್ನು ಮುಖ್ಯಮಂತ್ರಿಗಳು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್, ಶಾಸಕರಾದ ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಡಾ.ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ವೈದ್ಯಕೀಯ ಶಿಕ್ಷಣ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಸಿನ್, ಇಲಾಖೆ ನಿರ್ದೇಶಕಿ ಡಾ.ಸುಜಾತಾ ರಾಥೋಡ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಣಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ದಕ್ಷಿಣ ವಲಯ ಡಿಐಜಿ ಡಾ.ಎಂ.ಬಿ.ಬೋರಲಿಂಗಯ್ಯ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಕುಲಪತಿ ಡಾ.ಎಂ.ಕೆ.ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಿಎಂ ಬಣ್ಣಿಸಿದ ಶಾಸಕರು

ರಾಜ್ಯದ ವೈದ್ಯಕೀಯ ಶಿಕ್ಷಣದಲ್ಲಿ ಸಾಕಷ್ಟು ಬದಲಾವಣೆ ಆಗಿದೆ. 2013ರಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಆರಂಭಿಸುವ ನಿರ್ಣಯ ಕೈಗೊಂಡಿದ್ದರ ಫಲವಾಗಿ ಕಾಲೇಜುಗಳ ಸಂಖ್ಯೆ ನಾಲ್ಕರಿಂದ 24ಕ್ಕೆ ಏರಿಕೆಯಾಗಿದೆ. ಇದರಿಂದ ಶೇ.100ರಷ್ಟು ಮೆರಿಟ್ ವಿದ್ಯಾರ್ಥಿಗಳಿಗೆ ಅವಕಾಶವಾಗುವುದರ ಜೊತೆಗೆ ಜನರಿಗೆ ಗುಣಮಟ್ಟದ ಚಿಕಿತ್ಸೆ ಉಚಿತವಾಗಿ ಸಿಗುತ್ತಿದೆ. ಮೈಸೂರು, ಕಲಬುರ್ಗಿ, ಹುಬ್ಬಳ್ಳಿ, ಬೆಳಗಾವಿ ಇನ್ನಿತರ ಕಡೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಾಗಿವೆ. ಕಿದ್ವಾಯ್ ಘಟಕಗಳನ್ನೂ ತೆರೆಯಲಾಗುತ್ತಿದೆ. ಮೈಸೂರು ಕಾಲೇಜಿನ ಸೀಟ್‌ಗಳ ಸಂಖ್ಯೆ 150ರಿಂದ 200ಕ್ಕೆ ಹೆಚ್ಚಳವಾಗಿದೆ. ಇದಕ್ಕೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಮುಖ ಕಾರಣ ಎಂದು ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು. ನಂತರ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಡಾ.ಡಿ.ತಿಮ್ಮಯ್ಯ ಹಾಗೂ ಕೆ.ಹರೀಶ್ ಗೌಡರು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನಂತರ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಾಗುತ್ತಿರುವುದು ಸಿದ್ದರಾಮಯ್ಯನವರ ಕಾಲದಲ್ಲಿ ಎಂದು ಬಣ್ಣಿಸಿದರು. ತನ್ವೀರ್ ಸೇಠ್ ಅವರು, ಶತಮಾನ ಪೂರೈಸಿದ ಹಲವು ಸಂಸ್ಥೆಗಳಿಗೆ ಕಾಯಕಲ್ಪ ನೀಡಿದ ಹೆಗ್ಗಳಿಕೆ ಹೊಂದಿರುವ ಮುಖ್ಯಮಂತ್ರಿಗಳು ಮೈಸೂರಿಗೆ ಅಗತ್ಯವಾದ ಎರಡನೇ ವೈದ್ಯಕೀಯ ಕಾಲೇಜು ಸ್ಥಾಪನೆ ಹಾಗೂ ಚಿಕಿತ್ಸಾ ವೆಚ್ಚ ಕಡಿಮೆ ಮಾಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಶಂಕುಸ್ಥಾಪನೆ–ಉದ್ಘಾಟನೆ



ಶತಮಾನೋತ್ಸವ ನೆನಪಿನ ಬೆಳ್ಳಿ ನಾಣ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು.

ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಶತಮಾನೋತ್ಸವ ಸಮಾರೋಪ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇತರೆ ಗಣ್ಯರೊಡಗೂಡಿ, ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಶತಮಾನೋತ್ಸವ ಹೊರರೋಗಿಗಳ ಘಟಕ ಕಟ್ಟಡ ನಿರ್ಮಾಣ ಹಾಗೂ ಸಂಸ್ಥೆಯ ಹ್ಯೂಮನ್ ಮಿಲ್ಕ್ ಬ್ಯಾಂಕ್ ಘಟಕ ನಿರ್ಮಾಣಕ್ಕೆ ಶಂಕುಸ್ಥಾಪನೆ, ಶತಮಾನೋತ್ಸವದ ಲಾಂಛನದ ಶಿಲಾಫಲಕ ಅನಾವರಣ, ಸಿಟಿ ಸ್ಕ್ಯಾನ್ ಯಂತ್ರ ಹಾಗೂ ಸ್ಕಿನ್ ಬ್ಯಾಂಕ್ ಉದ್ಘಾಟನೆ ಹಾಗೂ ಶತಮಾನೋತ್ಸವ ನೆನಪಿನ ಬೆಳ್ಳಿ ನಾಣ್ಯ, ವಿಶೇಷ ಅಂಚೆ ಲಕೋಟೆ ಹಾಗೂ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು.

ನನಗೂ ಮೆಡಿಕಲ್ ಕಾಲೇಜು ಸೇರುವ ಆಸೆ ಇತ್ತು

ಮೈಸೂರು ವೈದ್ಯಕೀಯ ಕಾಲೇಜಿನ ಪಕ್ಕದಲ್ಲೇ ಇರುವ ವಿದ್ಯಾವರ್ಧಕ ಶಾಲೆಯಲ್ಲಿ 1961ರಲ್ಲಿ ನಾನು ಹೈಸ್ಕೂಲ್ ಓದುತ್ತಿದೆ. ಆಗ ಮೆಡಿಕಲ್ ಕಾಲೇಜಿನ ಕ್ಯಾಂಟಿನ್‌ನಲ್ಲಿ 19 ಪೈಸೆಗೆ ಒಂದು ಮಸಾಲೆ ದೋಸೆ ಕೊಡೋರು. ತುಂಬಾ ಚೆನ್ನಾಗಿ ಮಾಡುತ್ತಿದ್ದರು. ನಮ್ಮೂರಿನ ಹುಡುಗನೊಬ್ಬ ಪಿಯುಸಿ ನಂತರ ಈ ಮೆಡಿಕಲ್ ಕಾಲೇಜು ಸೇರಿಕೊಂಡಿದ್ದ. ಆಗ ನನಗೂ ಈ ಕಾಲೇಜು ಸೇರಬೇಕೆಂಬ ಆಸೆ ಇತ್ತು. ಆದರೆ ಆಗಲಿಲ್ಲ. ಶತಮಾನೋತ್ಸವ ಸಂಭ್ರಮದಲ್ಲಿ ಭಾಗಿಯಾಗಿರುವುದು ತುಂಬಾ ಸಂತೋಷ ತಂದಿದೆ ಎಂದು ಮುಖ್ಯಮಂತ್ರಿ ಸಿದ್ದಾಮಯ್ಯ ಹೇಳಿದರು.

ದಸರಾ ಯುವ ಸಂಭ್ರಮ; ನಾಡಿನ ನೆಲ–ಜಲದ ಮಹತ್ವ ಸಾರಿದ ವಿವಿಧ ಕಾಲೇಜು ವಿದ್ಯಾರ್ಥಿಗಳು

ಸಿಕ್ಕ ಅಲ್ಪ ವೇಳೆಯಲ್ಲೇ ಕಲಾವಂತಿಕೆ ಪ್ರತಿಭೆ ಅನಾವರಣ; ತರಾತುರಿಗೆ ಪ್ರೇಕ್ಷಕರು, ಪೋಷಕರು ಬೇಸರ



ಹೊಳೆನರಸೀಪುರದ ಶ್ರೀ ಹೆಚ್.ಡಿ.ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಂಡದಿಂದ ದೇವ ಶ್ರೀ ಗಣೇಶ ನೃತ್ಯ

ಮೈಸೂರು, ಸೆ.28(ಎಂಕೆ)– ನಮ್ ಜೀವ ಕನ್ನಡ, ನಮ್ ದೈವ ಕನ್ನಡ, ನೆಲ–ಜಲ ನಾಡು–ನುಡಿಗೆ ಪ್ರಾಣ ಕೊಡಲು ಸಿದ್ದ ವೆಂಬ ಕನ್ನಡಾಭಿಮಾನದ ಹೊಳೆಯಲ್ಲಿ ಮಿಂದೆದ್ದ ಜನಸ್ತೋಮ... ಜಾನಪದ ನೃತ್ಯ ವೈಭವದ ನಡುವೆ ವಿಘ್ನ ನಿವಾರಕನ ಆರಾಧನೆ...!

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರು ವಿವಿ ಮಾನಸ ಗಂಗೋತ್ರಿ ಬಯಲು ರಂಗಮಂದಿರ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆಯುತ್ತಿರುವ ದಸರಾ ಯುವ ಸಂಭ್ರಮದಲ್ಲಿ ಶನಿವಾರ ಕನ್ನಡದೊಕುಳಿ ಹರಿಯಿತು. ಕಾಲಿಡಲೂ ಜಾಗವಿಲ್ಲದಂತೆ ಕಿಕ್ಕಿರಿದುವ ತುಂಬಿದ್ದ ಜನ ಸಾಗರದ ನಡುವೆ ನೃತ್ಯ–ಸಂಗೀತ ಲೋಕವೇ ನಿರ್ಮಾಣವಾಗಿತ್ತು.

ವಿವಿಧ ಕಾಲೇಜು ತಂಡದ ವಿದ್ಯಾರ್ಥಿಗಳು ಕನ್ನಡ ಡಿಂಡಿಮ ಬಾರಿಸುತ್ತಾ ನೆರೆದಿದ್ದವರನ್ನು ಕುಣಿದು ಕುಪ್ಪಳಿಸುವಂತೆ ಮಾಡಿದರು. ದೇವ ಶ್ರೀ ಗಣೇಶ, ಶಿವತಾಂಡವ, ಮಹಾಕಾಳಿ, ದುರ್ಗೆ, ಚಾಮುಂಡಿ ನೃತ್ಯದೊಂದಿಗೆ ಭಕ್ತಿ ಸುಧೆ ಹರಿಸಿದರು. ಪೂಜಾ ಕುಣಿತ, ಪಟ್ಟದ ಕುಣಿತ, ವೀರಗಾಸೆ, ಹುಲಿ ಕುಣಿತ, ಭೂತ ನಾಟ್ಯ, ಕೋಲಾಟ, ಪಂಜಾಬಿ ಡ್ಯಾನ್ಸ್, ಯಕ್ಷಗಾನ ಸೇರಿದಂತೆ ದೇಶದ ನಾನಾ ನೃತ್ಯ ಪ್ರಕಾರಗಳ ಪ್ರದರ್ಶನದ ಮೂಲಕ ವಂದೇ ಮಾತರಂ ಘೋಷಣೆಯೊಂದಿಗೆ ರಾಷ್ಟ್ರೀಯ ಭಾವೈಕ್ಯತೆ ಮೆರೆದರು.

ಚನ್ನರಾಯಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಹಾರ್ಡ್ವಿಕ್ ಇಂಡಿಪೆಂಡೆಂಟ್ ಕಾಲೇಜ್, ಕೆ.ಎಂ. ದೊಡ್ಡಿಯ ಪದ್ಮ ಮಾದೇಗೌಡ ಕಾಲೇಜು, ಪಿರಿಯಾಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು ಸ್ವತಂತ್ರ ಪದವಿ ಪೂರ್ವ ಕಾಲೇಜು ಹಾಗೂ ನಿರ್ಮಲ ಕಾಂಪೋಸಿಟ್ ಪಿಯು ಕಾಲೇಜ್‌ನ ವಿದ್ಯಾರ್ಥಿ ಗಳು ಕನ್ನಡ ಡಿಂಡಿಮ ಬಾರಿಸಿದರು. ಸ್ವಾತಂತ್ರ್ಯ ವೀರರಾಯಣ್ಣ ಇನ್ನಿತರ ಖ್ಯಾತ ಚಲನಚಿತ್ರ ನಟರ ಸ್ಮರಣೆಯೊಂದಿಗೆ ಕನ್ನಡಾಭಿಮಾನ ಇಮ್ಮಡಿಗೊಳಿಸಿದರು. ಹಾಗೆಯೇ ಟಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂ, ಹುಣಸೂರು ಕರಿಮುದ್ದನಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜು, ತಲಕಾಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾವೇರಿ ಪ್ರಥಮ ದರ್ಜೆ ಕಾಲೇಜು ಹಾಗೂ ಶ್ರೀ ಶಾರದಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ತಂಡ ಮಲೈ ಮಹದೇಶ್ವರ ಸ್ವಾಮಿಯ ಸ್ಮರಣೆಯೊಂದಿಗೆ ಜಾನಪದ ನೃತ್ಯ ಪ್ರಕಾರಗಳ ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ಜೊತೆಗೆ ದೇಶದ ವಿವಿಧ ನೃತ್ಯ ಪ್ರಕಾರಗಳನ್ನು ಪ್ರಸ್ತುಪಡಿಸುವ ಮೂಲಕ ರಾಷ್ಟ್ರೀಯ ಭಾವೈಕ್ಯತೆ ಮೆರೆದರು.

ಭಕ್ತಿ ಸುಧೆ: ಕೆಂಗೇರಿ ಪ್ರಥಮ ದರ್ಜೆ ಕಾಲೇಜು, ಚಿನಕುರಳಿ ಪ್ರಥಮ ದರ್ಜೆ ಕಾಲೇಜು, ಶ್ರೀ ಲಕ್ಷ್ಮಿ ಹಯಗ್ರೀವ ಕಾಲೇಜು, ಎಂಐಟಿ ಪ್ರಥಮ ದರ್ಜೆ ಕಾಲೇಜು, ಹೊಳೆ ನರಸೀಪುರ ಶ್ರೀ ಹೆಚ್.ಡಿ.ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಬೆಂಗಳೂರಿನ ಶ್ರೀ ದಕ್ಷ ಅಕಾಡೆಮಿ ವಿದ್ಯಾರ್ಥಿ ಗಳು ಶಿವತಾಂಡವ ನೃತ್ಯ, ದೇವ ಶ್ರೀ ಗಣೇಶ ಮಹಾಕಾಳಿ, ದುರ್ಗೆ, ಚಾಮುಂಡಿ, ಆಂಜನೇಯ, ರಾವಣನ ಅವತಾರದಲ್ಲಿ ಅಮೋಘ ನೃತ್ಯ ಪ್ರದರ್ಶನ ನೀಡುವ ಮೂಲಕ ಭಕ್ತಿ ಸುಧೆ ಹರಿಸಿದರು. ಇದರ ನಡುವೆ ಮೈಸೂರು ಮಹಾರಾಜ ಕಾಲೇಜು ವಿದ್ಯಾರ್ಥಿಗಳು ಜಗತ್ತಿಗೆ ಯುದ್ಧ ಬೇಡ, ಬುದ್ಧಬೇಕು. ಶಾಂತಿ ನೆಲೆಸಬೇಕು ಎನ್ನುತ್ತಾ ಭಗವಾನ್ ಬುದ್ಧರ ನಾಮ ಸ್ಮರಣೆ ಮಾಡಿದರು.

ಅವಕಾಶ ಕೊಡಿ: ಮಂಡ್ಯ ಭಾರತೀ ನಗರದ ಭಾರತೀ ಶಿಕ್ಷಣ ಮಹಾವಿದ್ಯಾಲಯ, ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ ಇನ್ನಿತರ ಕಾಲೇಜು ತಂಡಗಳು ಅರ್ಥವತ್ತಾದ ನೃತ್ಯ ಸಂಯೋಜನೆ ಮೂಲಕ ಮಹಿಳಾ ಸಬಲೀಕರಣ ಕುರಿತು ಜಾಗೃತಿ ಮೂಡಿಸಿದರಲ್ಲದೆ ಹೆಣ್ಣು ಮಕ್ಕಳಿಗೂ ಅವಕಾಶ ಮಾಡಿಕೊಡಿ. ಸಾಧನೆ ಮಾಡುತ್ತೇನೆ ಎಂಬ ಸಂದೇಶ ನೀಡಿದರು. ಇದರ ನಡುವೆ ಹೊಳೆನರಸೀಪುರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ರೆಟ್ರೋ–ಮೆಟ್ರೋ ಪರಿಕಲ್ಪನೆಯ ಸೊಗಸಾದ ನೃತ್ಯ ನೋಡುಗರ ಎದೆಯಲ್ಲಿ ಕಚಗುಳಿ ಇಟ್ಟಿತು.

ಆತುರ... ನಿರಾಶೆ...!

ದಸರಾ ಯುವ ಸಂಭ್ರಮ ವೇದಿಕೆಯಲ್ಲಿ ನೃತ್ಯ ಪ್ರದರ್ಶನ ನೀಡಲು ಬಹುದಿನಗಳಿಂದ ಪೂರ್ವ ತಯಾರಾಗಿ ಬಂದಿದ್ದ ವಿವಿಧ ಕಾಲೇಜು ತಂಡದ ವಿದ್ಯಾರ್ಥಿಗಳಿಗೆ ಆಯೋಜಕರ ಆತುರದಿಂದ ಭಾರೀ ನಿರಾಶೆ ಉಂಟಾಯಿತು. ಕನಿಷ್ಠ 5 ನಿಮಿಷವೂ ನೃತ್ಯ ಪ್ರದರ್ಶನಕ್ಕೆ ಅವಕಾಶ ನೀಡದೆ, ಎರಡ್ಮೂರು ನಿಮಿಷಕ್ಕೆ ನೃತ್ಯ ಪ್ರದರ್ಶನ ನಿಲ್ಲಿಸುತ್ತಿದ್ದ ಆಯೋಜಕರ ವಿರುದ್ಧ ಪೋಷಕರು, ಕಾಲೇಜುಗಳ ಸಿಬ್ಬಂದಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕೆಲವೊಮ್ಮೆ ವಿದ್ಯಾರ್ಥಿಗಳು ಸ್ಮರಣಿಕೆ ಪಡೆದುಕೊಳ್ಳಲು ತಡಬಡಿಸುವಂತಾಯಿತು.

ಕ್ಯಾನ್ಸರ್ ಅರಿವು...

ಇತ್ತೀಚಿನ ದಿನಗಳಲ್ಲಿ ಹೆಮ್ಮಾರಿಯಂತೆ ಕಾಡುತ್ತಿರುವ ಕ್ಯಾನ್ಸರ್ ಕಾಯಿಲೆ ಕುರಿತು ನೃತ್ಯದ ಮೂಲಕ ಅರಿವು ಮೂಡಿಸಿದ ಎನ್.ಆರ್.ಮೊಹಲ್ಲಾದ ಕೈಗಾರಿಕೆ ತರಬೇತಿ ಮತ್ತು ಉದ್ಯೋಗ ಇಲಾಖೆ ತಂಡ ಆರೋಗ್ಯವೇ ಭಾಗ್ಯ. ಆರೋಗ್ಯವಿದ್ದರೆ ಸಾಧನೆ ಸಾಧ್ಯ ಎಂಬ ಜಾಗೃತಿ ಸಂದೇಶದೊಂದಿಗೆ ಎಚ್ಚರಿಸಿದರು.



ಜಾನಪದ ನೃತ್ಯ ಪ್ರದರ್ಶನ ನೀಡಿದ ಟಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು



ನಿರ್ಮಲ ಕಾಂಪೋಸಿಟ್ ಪಿಯು ಕಾಲೇಜ್ ವಿದ್ಯಾರ್ಥಿಗಳ ಕನ್ನಡಾಭಿಮಾನ ನೃತ್ಯ ರೂಪಕ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ (ದೂ: 2521923)
ಪೆಟ್ಟಾರಾಪ್ (ತ) — 4 ಪ್ರದರ್ಶನಗಳು

ವುಡ್‌ಲ್ಯಾಂಡ್ಸ್ ಚಿತ್ರಮಂದಿರ (ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ) — 2+2 ಪ್ರದರ್ಶನಗಳು

ಬಾಲಾಜಿ ಚಿತ್ರಮಂದಿರ (ದೂ: 2497199)
ದೇವರ (ಹಿಂ) — 4 ಪ್ರದರ್ಶನಗಳು

ಮಹದೇಶ್ವರ ಚಿತ್ರಮಂದಿರ (ಮೊ:9900820093)
ಉಪೇಂದ್ರ (ಕ) — 4 ಪ್ರದರ್ಶನಗಳು

ಗಾಯಿತ್ರಿ
ದೇವರ (ತೆ) — 4 ಪ್ರದರ್ಶನಗಳು

ರಾಜಕಮಲ್
ಹಿಟ್ಲರ್ (ತ) — 4 ಪ್ರದರ್ಶನಗಳು

ಸಂಗಂ
ಮೆಯ್ಯಳಗನ್ (ತ) — 4 ಪ್ರದರ್ಶನಗಳು

ಲಿಡೋ
ಹಗ್ಗ (ಕ) — 2 ಪ್ರದರ್ಶನಗಳು
ಉಪೇಂದ್ರ (ಕ) — 2 ಪ್ರದರ್ಶನಗಳು

ತಿಬ್ಬಾದೇವಿ
ಪೆಟ್ಟಾರಾಪ್ (ತ) — 4 ಪ್ರದರ್ಶನಗಳು

ಪ್ರಭಾ
ಸಂಜು (ಕ) — 2 ಪ್ರದರ್ಶನಗಳು
ನೈಟ್ ರೋಡ್ (ಕ) — 2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

- ಸ್ಕ್ರೀನ್ 1 ಲುಕ್ ಬ್ಯಾಕ್ ಬಿಯಾಂಡ್ ದಿ ಬ್ಲೇಡ್ಸ್ (ಇಂ): ಬೆ.10.20ಕ್ಕೆ, ಮೆಯ್ಯಳಗನ್ (ತ): ಮ.12.45ಕ್ಕೆ, ಸಂ.4.15ಕ್ಕೆ, ದೇವರ 1 (ತೆ): ರಾ.7.45ಕ್ಕೆ.
- ಸ್ಕ್ರೀನ್ 2 ಸ್ತ್ರೀ 2 (ಹಿಂ): ಬೆ.10.10ಕ್ಕೆ, ಪೆಟ್ಟಾರಾಪ್ (ತ): ಮ.1.15ಕ್ಕೆ, ಹಿಟ್ಲರ್ (ತ): ಸಂ.4.15ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಮೆಯ್ಯಳಗನ್ (ತ): ರಾ.10.05ಕ್ಕೆ
- ಸ್ಕ್ರೀನ್ 3 ಕೇದಾರ್‌ನಾಥ್ ಕುರಿ ಫಾರಂ (ಕ): ಬೆ.10.40ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸಂಜು (ಕ): ಸಂ.4.25ಕ್ಕೆ, ಅನ್ನ (ಕ): ರಾ.7ಕ್ಕೆ, ಕೃಷಂ ಪ್ರಣಯ ಸಖಿ (ಕ): ರಾ.9.40ಕ್ಕೆ
- ಸ್ಕ್ರೀನ್ 4 ದೇವರ 1 (ತೆ): ಬೆ.8ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್ INOX LIVE THE MOVIE ದೂ : 2533444 / 2433456

- ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
- ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821–2973519

- ಸ್ಕ್ರೀನ್ 1 ಕೃಷ್ಣಂ ಪ್ರಣಯ ಸಖಿ (ಕ): ಮ.1.15ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.25ಕ್ಕೆ, ಹಿಟ್ಲರ್ (ತ): ರಾ.9.45ಕ್ಕೆ.
- ಸ್ಕ್ರೀನ್ 2 ದೇವರ 1 (ತೆ): ಬೆ.8ಕ್ಕೆ, ಬೆ.11.20ಕ್ಕೆ, ಮ.2.40ಕ್ಕೆ, ಸಂ.6.05ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 3 ದೇವರ 1 (ಕ): ಬೆ.10ಕ್ಕೆ, ಮ.1.20ಕ್ಕೆ, ಸಂ.4.40ಕ್ಕೆ, ದೇವರ 1 (ತೆ): ರಾ.8ಕ್ಕೆ.
- ಸ್ಕ್ರೀನ್ 4 ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.30ಕ್ಕೆ, ಮ.1.30ಕ್ಕೆ, ಹಿಟ್ಲರ್ (ತ): ಸಂ.4.35ಕ್ಕೆ, ದೇವರ 1 (ತೆ): ರಾ.7.15ಕ್ಕೆ

ಪಿವಿಆರ್ ಸಿನಿಮಾಸ್ PVR CINEMAS ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಿಜೆಪಿ ಶುದ್ಧೀಕರಣಕ್ಕೆ ಈಶ್ವರಪ್ಪ ಮನೆಯಲ್ಲಿ ಸಭೆ

ಶಾಸಕ ರಮೇಶ್ ಜಾರಕಿಹೊಳಿ ಪ್ರತಿಕ್ರಿಯೆ



ಬೆಳಗಾವಿ: ಬಿಜೆಪಿಯನ್ನು ಶುದ್ಧೀಕರಣ ಮಾಡುವ ನಿಟ್ಟಿನಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಬೆಂಗಳೂರು ಮನೆಯಲ್ಲಿ ಸಭೆ ನಡೆಸಲಾಗಿದೆ ಎಂದು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಭೆಯಲ್ಲಿ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ, ವೀರರಾಣಿ ಕಿತ್ತೂರು ಚನ್ನಮ್ಮ ಬ್ರಿಗೇಡ್ ಸ್ಥಾಪಿಸುವ ವಿಚಾರ ವಾಗಿ ಯಾವುದೇ ಚರ್ಚೆ ನಡೆದಿಲ್ಲ. ಬಿಜೆಪಿ ಶುದ್ಧೀಕರಣಕ್ಕಾಗಿ ಸಭೆ ನಡೆಸಲಾಗಿದೆ. ನಾವು ಭಿನ್ನಮತೀಯರಲ್ಲ ಎಂದು ಸ್ಪಷ್ಟಪಡಿಸಿದರು.

ಈಶ್ವರಪ್ಪ ಇಂದಿಗೂ ಹಿಂದುಳಿದ ನಾಯಕ. ಅವರ ಬಗ್ಗೆ ಅಪಾರ ಗೌರವವಿದೆ. ನಾವು ಅವರ ಮನೆಗೆ ಹೋಗಿ ರಾಜಕೀಯ ಮಾಡಿರುವುದು ನನಗೆ ತುಂಬಾ ನೋವಾಗಿದೆ. ನಾವು ಏನೇ ಮಾಡಿದರೂ ಪಕ್ಷದ ಚೌಕಟ್ಟಿನಲ್ಲಿರುತ್ತೇವೆ. ಆದರೆ, ರಾಜುಗೌಡ, ಯಡಿಯೂರಪ್ಪ ಶಿಷ್ಯನೆಂದು ಗುರುತಿಸಿಕೊಂಡಿದ್ದಾನೆ. ಈಶ್ವರಪ್ಪ ಮನೆಯಲ್ಲಿ ರಾಜುಗೌಡ ಇದ್ದಾನೆ ಎಂದು ಗೊತ್ತಾಗಿದ್ದರೆ ನಾನು ಹೋಗುತ್ತಿರಲಿಲ್ಲ. ಒಳಗೆ ಚರ್ಚೆಯಾಗಿದ್ದನ್ನು ಬಹಿರಂಗಪಡಿಸಿದರೆ ರಾಜುಗೌಡಗೆ ವಿಜಯೇಂದ್ರನೇ ಹೊಡೆಯುತ್ತಾನೆ ಎಂದರು.


ಮೀಸಲಾತಿ ಕುರಿತು ಈಶ್ವರಪ್ಪ ಮನೆಯಲ್ಲಿ ಬಸನಗೌಡ ಪಾಟೀಲ ಯತ್ನಾಳ್ ಚರ್ಚೆ ಮಾಡುತ್ತಿದ್ದರು. ಇದು ಸೌಹಾರ್ದತೆ ಸಭೆ. ಆದರೆ, ರಾಜುಗೌಡ ಮಾಧ್ಯಮದ ಮುಂದೆ ಬೇರೆ ಹೇಳಿಕೆ ನೀಡಿದ್ದು ಸರಿಯಲ್ಲ. ಈಶ್ವರಪ್ಪ ಅವರನ್ನು ಬಿಜೆಪಿಗೆ ಕರೆದುಕೊಂಡು ಬರು ವಷ್ಟು ಶಕ್ತಿ ನನ್ನಲ್ಲಿಲ್ಲ ಅವರನ್ನು ರಾಷ್ಟ್ರೀಯ ನಾಯಕರು ಉಚ್ಚಾಟನೆ ಮಾಡಿದ್ದಾರೆ. ವಾಪಸ್ ಕರೆತರುವ ಬಗ್ಗೆ ಅವರೇ ನಿರ್ಣಯ ಮಾಡಬೇಕಿದೆ ಎಂದರು. ರಾಜ್ಯದಲ್ಲಿ ಅನುಮತಿ ಇಲ್ಲದೆ ಸಿಬಿಐ ತನಿಖೆ ನಡೆಸದಂತೆ ಸಂಪುಟ ತೀರ್ಮಾನ ಕೈಗೊಂಡಿರುವುದು ತಪ್ಪು. ಸಿಎಂ ಮತ್ತು ಡಿಸಿಎಂ ಮೇಲೆ ಗುರುತರವಾದ ಆರೋಪಗಳಿವೆ. ಮಾಜಿ ಸಿಎಂ ಯಡಿಯೂರಪ್ಪ ಪ್ರಕರಣದಲ್ಲಿ ಸಿದ್ದರಾಮಯ್ಯ ಏನು ಮಾತನಾಡಿದ್ದರು ಎಂಬು ದನ್ನು ನೋಡಿ ರಾಜೀನಾಮೆ ಕುರಿತು ತೀರ್ಮಾನ ಕೈಗೊಳ್ಳಬೇಕು. ಅವರ ವಿರುದ್ಧ ಷಡ್ಯಂತ್ರ ನಡೆದಿದೆ ಎಂಬುದು ಓಪನ್ ಸಿಕ್ರೇಟ್. ಯಾರು ಮಾಡಿದ್ದಾರೆ ಎನ್ನುವುದು ಕೂಡ ಓಪನ್ ಸಿಕ್ರೇಟ್.

ಸೇವಾಭೂಷಣ ಪ್ರಶಸ್ತಿ



ಮೈಸೂರಿನ ಕಲಾಮಂದಿರದಲ್ಲಿ ಇತ್ತೀಚೆಗೆ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಹೊಸ ಇಟ್ಟಿಗೆಗೂಡಿನ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕಿ ಸಂಧ್ಯಾರಾಣಿ ಅವರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮೈಸೂರಿನ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ 13ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಶಿಕ್ಷಕರ ಕ್ಷೇತ್ರದಲ್ಲಿ ಸಾಧನೆ ಗುರುತಿಸಿ ಸಂಧ್ಯಾರಾಣಿ ಅವರಿಗೆ ಸೇವಾ ಭೂಷಣವನ್ನು ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಜನ್ಮದಾತನ ಪುಣ್ಯಸ್ಮರಣೆ





ಆರ್.ಪಿ. ಪಳನಿಸ್ವಾಮಿ (ಅಣ್ಣತ್ತೆ) MCC

ಅಪ್ಪ ನೀವು ನಮ್ಮನ್ನಗಲಿ 33 ವರ್ಷಗಳು ನಿಮ್ಮ ಆಶೀರ್ವಾದದ ನೆರಳಿನಲ್ಲಿ ಜೀವಿಸುತ್ತಿರುವ ಪಿ.ರಾಜು, ಗೀತಾ, ಪಿ.ಪುಷ್ಪ, ಪಿ. ಸೋಮು, ಪಿ. ಸುಕನ್ಯ, ಪಿ. ಸಾವಿತ್ರಿ, ಪಿ. ಪ್ರವೀಣ, ಸೊಸೆಯಂದಿರು, ಮೊಮ್ಮಕ್ಕಳು, ಪ್ರಸಾದ್, ಪ್ರಶಾಂತ್, ವೆಂಕಟೇಶ, ಮೋಹನ, ಹರ್ಷ, ರಿಷಿಕ

ನಿವೇಶನ ಮಾರಾಟಕ್ಕಿದೆ

ನಿವೇಶನ ಸಂಖ್ಯೆ 117, **36x50** ಪೂರ್ವ ದಿಕ್ಕು (ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಶಿಕ್ಷಕರ ಬಡಾವಣೆ) (ಮೈಸೂರು ನಗರ ಪಾಲಿಕೆಗೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ). ಡಾ|| ರಾಜ್‌ಕುಮಾರ್ ರಸ್ತೆ, 1ನೇ ಹಂತ, ಮೈಸೂರು. ಸಂಪರ್ಕಿಸಿ:

9341299699, 9900666189

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಗೌರಮ್ಮರವರು

(ಲೇಟ್ ಶ್ರೀ ಎಳನೀರ್ ತಮ್ಮಣ್ಣನವರ ಧರ್ಮಪತ್ನಿ)

ಇವರು ದಿನಾಂಕ 19-09-2024ರ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ : 29-09-2024ರ ಭಾನುವಾರ ಬೆಳಗ್ಗೆ 11:00 ಗಂಟೆಗೆ ಶ್ರೀ ಮರುಳೇಶ್ವರ ದೇವಸ್ಥಾನ ಸಮುದಾಯ ಭವನ, ಕಾವೇರಿ ಶಾಲೆ ಎದುರು, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ

ದುಃಖತಪ್ತರು : ಗಂಡು ಮಕ್ಕಳು, ಹೆಣ್ಣು ಮಕ್ಕಳು, ಸೊಸೆಯಂದಿರು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಭೋಜನ : ಮಧ್ಯಾಹ್ನ 1:00 ಗಂಟೆಗೆ

COMMERCIAL - RENT

Devaraj Mohalla, Vijayanagar 2nd stage, Beautiful Corner Ground Floor Commercial Space 1200 S.ft Available for RENT. Rs. 30K + GST.

Call : +91 6366443134

ಹುಡುಗರು ಬೇಕಾಗಿದ್ದಾರೆ

ದಸರಾ ಕೆಲಸಕ್ಕೆ ತಕ್ಷಣವೇ ಹುಡುಗರು ಬೇಕಾಗಿದ್ದಾರೆ

ವಯೋಮಿತಿ 18 ರಿಂದ 40 ವರ್ಷ

ಉತ್ತಮ ಸಂಬಳ ಲಭ್ಯವಿದೆ.

ಆಸಕ್ತರು ಸಂಪರ್ಕಿಸಿ : ಕಾರ್ತಿಕ್

96203 21313

MUDA APPROVED COMMERCIAL SITE FOR SALE

37'x66' (North Facing), 80 feet Road, near Hootagalli Housing Board, Vijayanagar 4th Stage, 2nd Phas,e Mysore.

Mob: 96865-73798

ಶಿರಡಿ ಯಾತ್ರೆ

ಪ್ಯಾಕೇಜ್ ಪ್ರವಾಸ, ವಿಮಾನದ ಮೂಲಕ ತ್ರಯಂಬಕೇಶ್ವರ, ಶಿರಡಿ (VIP ದರ್ಶನ) ಶನಿ ಸಿಂಗನಾಪುರ, ರಂಜನ್‌ಗಾಂವ್ ಇತ್ಯಾದಿಗಳನ್ನು 1 ರಾತ್ರಿ, 2 ದಿನಗಳಲ್ಲಿ.

Mob: 9483587373

ಕಳೆದಿದೆ

ಶ್ರೀಮತಿ ಶರಣ್ಯ ಆರ್,

ಬಿನ್ ಶ್ರೀ ರವಿಕುಮಾರ್ ಎನ್, ರವರ ಮೈಸೂರು ನಗರ, ಸೋಮನಾಥ್ ನಗರ ಬಡಾವಣೆ ಬ್ಲಾಕ್ ನಂ.23ರಲ್ಲಿ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ರವರ ಅಭಿವೃದ್ಧಿ ಪಡಿಸಿರು ನಿವೇಶನ ಸಂಖ್ಯೆ 16ರ ಸ್ವತ್ತಿಗೆ ಸಂಬಂಧಿಸಿದ ಕೆಳಕಂಡ ದಾಖಲಾತಿಗಳು ಕಳೆದಿದೆ

ಕ್ರಯಪತ್ರ ದಸ್ತಾವೇಜು ಸಂಖ್ಯೆ,
MYN-1-03079-2004-05,
CD No. MYND17,
ದಿನಾಂಕ: 16–06–2004, ಮೈಸೂರು ಉತ್ತರ,
ದಾನಪತ್ರ ದಸ್ತಾವೇಜು ಸಂಖ್ಯೆ,
MYS-1-03880-2005-06,
CD No. MYSD48,
ದಿನಾಂಕ: 01–07–2005, ಮೈಸೂರು ದಕ್ಷಿಣ
ಮಂಜೂರಾತಿ ಪತ್ರ ದಿನಾಂಕ: 16–06–2004
ಸ್ವಾಧೀನ ಪತ್ರ ದಿನಾಂಕ: 16–06–2004

ಸಿಕ್ಕಿದವರು ಸಂಪರ್ಕಿಸಿ:

8861269934

HOUSE FOR RENT

2 BHK house in First Floor with UPS is for rent. Pure Vegetarians only. 2nd Main, 5th Cross, Saraswatipuram,Mysore.

9986320554, 9538966648



ವೈಕುಂಠ ಸಮಾರಾಧನೆ



ಶ್ರೀಮತಿ ಸುನಂದಮ್ಮನವರು

(ಲೇ ಡಿ.ದೇವಯ್ಯ ಸಿವಿಲ್ ಇಂಜಿನಿಯರ್ ಗಂಧದ ಎಣ್ಣೆ ಕಾರ್ಖಾನೆ)

ನಮ್ಮ ತಾಯಿಯವರು ದಿನಾಂಕ: 18–09–2024 ರಂದು ದೈವಾದೀನರಾದರು ಅವರ **ವೈಕುಂಠ ಸಮಾರಾಧನೆಯನ್ನು** ದಿನಾಂಕ: 29–09–2024ನೇ ಭಾನುವಾರ ಶ್ರೀ ಗುರುದೇವ ಆಶ್ರಮ, 16ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು ಇಲ್ಲಿ ಬೆಳಿಗ್ಗೆ 9ಕ್ಕೆ ಭಜನೆ, ಭೋಜನ 12.30ಕ್ಕೆ ಏರ್ಪಡಿಸಿದ್ದು, ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಡಿ.ದೇವರಾಜ್, ಡಿ.ಪದ್ಮಾವತಿ, ಡಿ.ಪ್ರಸನ್ನ ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು, ಬಂಧುಮಿತ್ರರು



MUDA APPROVED SITES FOR SALE

At Padaki Layout, Vajamangala, Spacious plots over 2400 sq.ft., Located next to Delhi Public School, Priced at only Rs. 2400/- per sq.ft.,

For more details, Contact: **9731749500**

Brokers Excuse

FOR SALE

3 BHK Flat in Mysore

Location: Manasa Royal Apartments

Vijayanagar 3rd Stage, Mysore. 1460 sft built-in area and 558 common area. On Second Floor.

Price: Rs. 80,00,000 (slightly negotiable).

Description: Spacious, Furnished and well-maintained 3 BHK flat with Car Park. Spacious Living room, Dining room, 3 Bedrooms, 3 Bathrooms, Modular Kitchen, kitchen utility, 3 Balconies, with good open View.

Apartment Amenities: 24/7 Security, Power Backup, Lift, Gym, Children's Play Area, Mini Clubhouse.

99869 72411
96411 113680

PUBLIC NOTICE

The general public at large are hereby notified that, my client is willing to purchase the below mentioned property from its owners Smt. N.K. Vasantha W/o. Sri Srinivas Rand Sri Srinivas R S/o Sri V Ramakrishna, residing at No. 3670/13, Manjunatha Badavane, Hunsur, Mysuru District. The schedule property was attached to the Canara Bank by the order passed by the III Addl. Senior Civil Judge Mysuru in C.Mis. No.105/2023 dt. 23-08-2023 under the Securitization and Reconstruction of Financial Assets and Enforcement of Security Interest (Act) and the Canara Bank Officials by receiving sale consideration amount issued sale certificate in favour of Srinivasa R and N.K. Vasantha which was registered in the office of the Senior Sub Register Mysuru South, Mysuru vide document No MYS-1-10514-2023-24, dt.20-02-2024. The above-mentioned parties own and possess the schedule property. If any person/s, including bank, financial institution, private Financier and all Statutory authorities claiming any right, interest, objections or charges on the under mentioned schedule property or any part thereof or any documents stated above is/are hereby required, to contact the undersigned advocate with all documentary evidence or by sending written objections within **07 (seven) days** from the date of this publication or otherwise the said transaction will be completed without any reference or regard to any such purported claim or interest, which shall be deemed to have been waived for all intent and purposes.

SCHEDULE PROPERTY

All that piece and parcel of residential house property bearing No.110, measuring east to west 12 meters, north to south 18 meters, Ground floor-1746 Sq. Feet, first floor-1746 Sq. Feet, second floor-1346 Sq. Feet and Third floor-238 Sq. Feet totally measuring 5476 Sq. Feet, situated at Vijayanagar, 1st Stage, Devaraja Mohalla, Mysuru City bounded on: East by-Property No.111, West by - Property No.109, North by - Road, South by- Property No.107.

Sd/- **B. S. Savanth, Advocate, #1079/A, First Floor, Railway Station Road, Chamarajapuram Mysuru-570005,** Mob: **9740097497** **bssavanthassociates@gmail.com**



ಹುಟ್ಟುಹಬ್ಬದ ಶುಭಾಶಯಗಳು

ಪುನೀತ್.ಆರ್ (ಚಿಂಟು)

16ನೇ ವರ್ಷದಿಂದ 17ನೇ ವರ್ಷಕ್ಕೆ ಕಾಲಿಡುತ್ತಿರುವ ಪುನೀತ್ ರವರಿಗೆ ತಾಯಿ ಚಾಮುಂಡೇಶ್ವರಿ ಆಯಸ್ಸು, ಆರೋಗ್ಯ ಮತ್ತು ವಿದ್ಯಾಭ್ಯಾಸವನ್ನು ಕರುಣಿಸಲಿ ಎಂದು ಹಾರೈಸುವ ಶುಭ ಕೋರುವವರು :ತಂದೆ ಎಸ್ ರವಿ ಮತ್ತು ತಾಯಿ ಎಸ್.ಶಿಲ್ಪ. ದಾಸ ನಾಯಕರ ಬೀದಿ ವಾರ್ಡ್ 23. ತಿ. ನರಸೀಪುರ

ಹೆರಿಟೇಜ್ ಹೋಮ್ಸ್ 2ನೇ ಹಂತ

MYSURU - HUNSUR HIGHWAY, MYSORE

MEGA RESIDENTIAL TOWNSHIP

MUDA LIMITS

30x40 | 30x50 | 40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೇವಲ ₹750/ ಪ್ರತಿ ಚದರ ಅಡಿ

ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಸುಲಭ 4 ಕಂತುಗಳ ಸೌಲಭ್ಯವಿದೆ

ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ

ಅದ್ವಿಕಾ ವೆಂಚರ್ಸ್

9071386615 / 9513301854

KBL Farmville

Luxurious country side living.

Villa Farm Plots for sale in Srirangapatna, near Mysuru-Bengaluru Expressway Toll.

Contact for more details & bookings.

9686833300, 6364342244



Hi! TAXI

ONLY ONE WAY TAXI CHARGE

MYSORE to BANGALORE
City drop or Pick up

BANGALORE to MYSORE
Airport drop or Pick up

MYSURU

9611177599

SITES FOR SALE

30x40, 40x60 (MUDA Approved)

Near Infosys Ready for Registration.

Call : **95383 31193**

100% NEEM WOOD PLYWOOD & DOORS

@ FACTORY DEPOT RATES

NEEM BOND PLATINUM® 10yrs WARRANTY

ISO 9001:2015 Certified Depot

CALL **99012 91267** **98454 26862**

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

FOR ADVERTISEMENT

STAR OF MYSORE
Please Call: 0821-2496522 / 23
Email: ad@starofmysore.com

ಮೈಸೂರು ಮಿತ್ರ
Please Call: 0821-2496522 / 23
Email: ad@mysurumithra.com